—೧೧—

## ಸೋಽಹಂ ಚಿಂತೆಯೇ ಕಾಣೇ

ಮಹಾನುಭಾವರೇ ! ಬುದ್ಧಿಯಲ್ಲಿ ನಿರ್ಮಲತೆಯನ್ನು ತರುವುದಕ್ಕಾಗಿ ದೃಷ್ಟಾಂತದ ಆವಶ್ಯಕತೆಯಿರುತ್ತದೆ. ಸಮಯಸಾರ, ಭಗವತೀ ಆರಾಧನಾ, ಇತ್ಯಾದಿ ಎಲ್ಲ ಆಧ್ಯಾತ್ಮಿಕ ಗ್ರಂಥಗಳಲ್ಲಿ ದರ್ಪಣದ ದೃಷ್ಟಾಂತ ಕೊಡಲಾಗಿದೆ. ಕೆಲವುಕಡೆ 'ಮುಕುರ' ಇನ್ನು ಕೆಲವು ಸಂದರ್ಭಗಳಲ್ಲಿ 'ಆದರ್ಶ'ದ ಉಲ್ಲೇಖ ಮಾಡಲ್ಪಟ್ಟಿದೆ. ಗ್ರಂಥಗಳಲ್ಲಿ ಘಟ, ಪಟ ಮತ್ತು ದರ್ಪಣ ಈ ಮೂರರ ಉದಾಹರಣೆಗಳೇ ಅಧಿಕವಾಗಿ ದೊರಕುತ್ತವೆ. ಗೃಹಸ್ಥಿಯಲ್ಲಿ ಪ್ರತಿ ದಿನವೂ ಈ ಮೂರು ವಸ್ತುಗಳ ಪ್ರಯೋಗ ಅಧಿಕವಾಗಿರುತ್ತದೆ. ಅದ ಕಾರಣ ಆಚಾರ್ಯರು ಈ ಮೂರು ಪರಿಚಿತ ವಸ್ತುಗಳ ಉದಾಹರಣೆಗಳನ್ನು ಅಧಿಕವಾಗಿ ಕೊಟ್ಟಿರುತ್ತಾರೆ.

ದರ್ಪಣದಲ್ಲಿ ಪ್ರತಿಬಿಂಬ ಕಾಣಿಸುತ್ತದೆ. ಅಧ್ಯಾತ್ಮ ಜಗತ್ತಿನಲ್ಲಿ ಪ್ರತಿಬಿಂಬಕ್ಕೆ ಹೆಚ್ಚು ಮಹತ್ವ. ಪ್ರಾಯಶಃ ಎಲ್ಲ ದರ್ಶನಗಳಲ್ಲೂ ಪ್ರತಿಬಿಂಬವಾದದ ಮಹತ್ವವು ಪ್ರತಿಪಾದಿತ ವಾಗಿದೆ.

**ಬಾಲಂ ವಿಹಾಯ ಜಲ-ಸಂಸ್ಥಿತಮಿಂದು-ಬಿಂಬಂ ।**
**ಅನ್ಯಃ ಕ ಇಚ್ಛತಿ ಜನಃ ಸಹಸಾ ಗ್ರಹೀತುಮ್ ॥**

ಭಕ್ತಾಮರ ಸ್ತೋತ್ರದ ಈ ಶ್ಲೋಕದಲ್ಲಿ ಒಬ್ಬ ಬಾಲಕನು ಜಲದಲ್ಲಿ ಚಂದ್ರನ ಪ್ರತಿ ಬಿಂಬವನ್ನು ಹಿಡಿಯುವ ಪ್ರಯಾಸ ಮಾಡುತ್ತಾನೆ. ಇಲ್ಲ ದರ್ಪಣದಂತೆ ನೀರಿನಲ್ಲಿ ಪ್ರತಿ ಬಿಂಬದ ಉದಾಹರಣೆ ಕೊಡಲ್ಪಟ್ಟಿದೆ.

**ಸಕಲ ಜ್ಞೇಯ-ಜ್ಞಾಯಕ ತದಪಿ,**
**ನಿಜಾನಂದ-ರಸಲೀನ......।**

ಪ್ರತಿದಿನ ಈ ಸ್ತುತಿಯನ್ನು ಹೇಳುತ್ತಾರೆ. ಇದರಲ್ಲಿ ಕೂಡಾ 'ಜ್ಞೇಯ ಜ್ಞಾಯಕ'ವು ದರ್ಪಣದೊಂದಿಗೆ ಸಂಬಂಧಿತವಾಗಿದೆ.

ಒಂದು ದರ್ಪಣದ ಎದುರಿನಿಂದ ಅನೇಕ ಸ್ತ್ರೀಯರು ಅನೇಕ ಬಣ್ಣದ ಸೀರೆಗಳನ್ನು ಧರಿಸಿ ಹಾದು ಹೋಗುತ್ತಾರೆ, ದರ್ಪಣದಲ್ಲಿ ಅವರೆಲ್ಲ ಕಾಣಿಸುತ್ತಾರೆ. ಆದರೆ ಆ ದರ್ಪಣ ದಲ್ಲಿ ಸೀರೆಗಳ ಬಣ್ಣ, ಸ್ತ್ರೀಯರ ಆಕಾರ ಇತ್ಯಾದಿಗಳಿಂದ ಯಾವ ವಿಕಾರವೂ ಉತ್ಪನ್ನ ವಾಗುವುದಿಲ್ಲ. ನಾವು ಇಲ್ಲಿ ಭೂಮಿಯ ಮೇಲೆ ದರ್ಪಣವನ್ನಿಡುತ್ತೇವೆ. ಅದರಲ್ಲಿ ಚಂದ್ರನ ಪ್ರತಿಬಿಂಬ ಕಾಣಿಸುತ್ತದೆ. ಚಂದ್ರನಿರುವುದು ಬಹಳ ದೂರದಲ್ಲಿ, ಆದರೂ ಅವನ ಪ್ರತಿ ಬಿಂಬವು ಇಲ್ಲಿ ಪೃಥ್ವಿಯ ಮೇಲಿಟ್ಟ ದರ್ಪಣದಲ್ಲಿ ಕಾಣಿಸುತ್ತದೆ. ಇವೆರಡೂ ತಮ್ಮ-ತಮ್ಮ ಸ್ಥಾನಗಳ ಮೇಲೆಯೇ ಸ್ಥಿತವಾಗಿವೆ. ಆದರೆ ಪ್ರತಿಬಿಂಬ ಹೊಳೆಯುತ್ತದೆ. ಇದೇ ರೀತಿ

ತೀರ್ಥಂಕರರು ಎಲ್ಲಿ ಬೇಕಾದರೂ ಇರಲಿ ಮೂರು ಲೋಕದ ಸಮಸ್ತ ಪದಾರ್ಥ-ದ್ರವ್ಯಗಳು ತಮ್ಮ ಸಮಸ್ತ ಗುಣ ಪರ್ಯಾಯಗಳೊಂದಿಗೆ ಅವರುಗಳ ಜ್ಞಾನದಲ್ಲಿ ಪ್ರತಿಬಿಂಬಿತವಾಗುತ್ತವೆ. ಜಗತ್ತು ಅವರುಗಳ ಜ್ಞಾನದಲ್ಲಿ ವ್ಯಾಪ್ತವಾಗಿದೆ. ಆದ ಕಾರಣ ದರ್ಪಣವನ್ನು ವೀತರಾಗತೆಯ ಪ್ರತೀಕವೆಂದು ಮನ್ನಿಸಲಾಗಿದೆ. ಆಚಾರ್ಯ ಸಮಂತಭದ್ರರು ''ರತ್ನಕರಂಡ ಶ್ರಾವಕಾಚಾರ''ದಲ್ಲಿ ಹೀಗೆ ಬರೆದಿದ್ದಾರೆ:-

ನಮಃ ಶ್ರೀ ವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ ।
ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯ ತೇ ॥

ಎಂಟು ಕರ್ಮಗಳು ಸದೈವ ನಮ್ಮೊಂದಿಗಿವೆ. ಆತ್ಮ ಮತ್ತು ಕರ್ಮಗಳ ಸಂಬಂಧವು ನಡೆಯುತ್ತಲೇ ಇರುತ್ತದೆ. ಈ ಸಂಬಂಧವು ಸಂಶ್ಲೇಷ ಬಂಧವಾಗಿದೆ. ಧವಲಾಕಾರರು ಇದನ್ನು ಒಂದು ಉದಾಹರಣೆಯಿಂದ ಸ್ಪಷ್ಟಗೊಳಿಸಿದ್ದಾರೆ. ಹೇಗೆಂದರೆ- ಒಬ್ಬ ಬಡಗಿಯು ಒಂದು ಮರದ ಕೊರಡನ್ನು ತುಂಡರಿಸಿ ಕೊರೆದು ಅದರಲ್ಲಿ ಕಬ್ಬಿಣದ ಕೊಡಲಿಯನ್ನು ಸೇರಿಸುತ್ತಾನೆ. ಅನಂತರ ಅವನು ಅದರಿಂದ ಮತ್ತೊಂದು ಕೊಡಲಿಯನ್ನು ತಯಾರಿಸುತ್ತಾನೆ. ಹಾಗೆ ಜೋಡಿಸಿದವುಗಳನ್ನು ಪೃಥಕ್‌ಗೊಳಿಸಿದರೆ ಆಗ ತಿಳಿಯುತ್ತದೆ. ಆ ಎರಡೂ ವಸ್ತುಗಳು ಬೇರೆ ಬೇರೆ ಎಂದು. ಏಕೆಂದರೆ ಅವು ಎರಡೂ ಸರ್ವಥಾ ಪೃಥಕ್ ವಸ್ತುಗಳಾಗಿದ್ದವು. ಇದೇ ರೀತಿ ಆತ್ಮ ಮತ್ತು ಕರ್ಮ ಇವೆರಡೂ ಏಕಕ್ಷೇತ್ರ ಅವಗಾಹಿಗಳಾಗಿವೆ. (ಅರ್ಥಾತ್ ಒಂದೇ ಕ್ಷೇತ್ರದಲ್ಲಿ ಇರುವಂಥವುಗಳು). ಉದಾಹರಣೆಗೆ- ಹಾಲು ಮತ್ತು ನೀರು; ಆದರೆ ಅವೆರಡೂ ಬೇರೆ ಬೇರೆ ವಸ್ತುಗಳು. ಹಂಸವು ಹಾಲನ್ನು ಮತ್ತು ನೀರನ್ನು ಪೃಥಕ್‌ಗೊಳಿಸುತ್ತದೆ. ಆತ್ಮನು ಕೂಡಾ ಕರ್ಮಗಳನ್ನು ಪೃಥಕ್ ಗೊಳಿಸಬಲ್ಲನು. ಆದುದರಿಂದಲೇ ಆತ್ಮನಿಗೆ ಒಂದು ಹೆಸರು 'ಹಂಸ' ಎಂಬುದಾಗಿಯೂ ಇದೆ.

ನಾವು ಶಬ್ದಗಳ ಮಾಧ್ಯಮದಿಂದ ತಿಳಿವಳಿಕೆ ನೀಡುತ್ತೇವೆ. ತಿಳಿಯುವುದು ಮಾತ್ರ ಸ್ವಯಂ ಆಗಿರಬಹುದು. ಶಬ್ದಗಳ ಶಕ್ತಿ ಸೀಮಿತವಾಗಿರುತ್ತದೆ. ಅಧ್ಯಾತ್ಮವಾದರೋ ಅನುಭವ ಮಾಡಿಕೊಳ್ಳಲು ಯೋಗ್ಯವಾದುದು. ನಾವು ಸಮ್ಮೇದ ಶಿಖರಜಿಯ ಗಾಥೆಯನ್ನು ಓದುತ್ತೇವೆ. ಅದಕ್ಕೆ ನಮಸ್ಕಾರ ಮಾಡುತ್ತೇವೆ. ಮನೆಯಲ್ಲಿ ಸಮ್ಮೇದ ಶಿಖರಜಿಯ ಚಿತ್ರವನ್ನು ಹಾಕುತ್ತೇವೆ. ಅದನ್ನು ನೋಡಿ ಇದು ಜಲ ಪ್ರವಾಹ, ಇದು ಪರ್ವತ, ಇದು ಹೋಗುವ ದಾರಿ ಹೀಗೆ ಅದರ ಸಂಪೂರ್ಣ ವರ್ಣನೆ ಮಾಡುತ್ತೇವೆ. ಆದರೆ ಕೇವಲ ಆ ಚಿತ್ರದ ಮಾಧ್ಯಮದಿಂದ ನಾವು ಶಿಖರಜಿಯ ಪರ್ವತದ ಆನಂದ ಪಡೆಯಲಾರೆವು. ನಾವು ಅಲ್ಲಿಯ ಮಣ್ಣಿನ-ಹವೆಯ-ನೀರಿನ ಆನಂದ ಅನುಭವಿಸಲಾರೆವು. ಚಿತ್ರದಲ್ಲಿ ನೀರು ಹರಿಯುವುದನ್ನು ನೋಡುತ್ತೇವೆ, ಎದ್ದು ನಿಂತ ಬೆಟ್ಟದ ಭಾಗವನ್ನು ಕಾಣುತ್ತೇವೆ. ಆದರೆ ಆ ಚಿತ್ರದ ನೀರಿಗೆ ಕೈ ಚಾಚಿದರೆ ನಮಗೆ ನೀರು ಸಿಗುತ್ತದೆಯೇ ? ಅಥವಾ ಪರ್ವತದ ಭಾಗವೆಂದು ಚಿತ್ರದ ಪರ್ವತಕ್ಕೆ ಕಾಲಿಟ್ಟರೆ ನಾವು ಪರ್ವತವನ್ನೇರಬಲ್ಲೆವೇ ? ಸಮ್ಮೇದ ಶಿಖರಜೀಯ ಆನಂದ ನಮಗೆ ಸಿಗಬೇಕಾದರೆ ಆ ಸ್ಥಳಕ್ಕೆ ಹೋಗಿಯೇ ಅನುಭವ ಮಾಡಿ



ಕೊಳ್ಳಬೇಕು. ಹಾಗೆ ಮಾಡುವಾಗಲೂ ಕೇವಲ ಯಾತ್ರೆ ಮಾಡುವುದು ದ್ರವ್ಯ ಕ್ಷೇತ್ರದ ಯಾತ್ರೆ ಮಾತ್ರವೇ ಆಗುತ್ತದೆ. ಅದರ ಜೊತೆಗೆ ಭಾವವನ್ನು ಜೋಡಿಸಿದಾಗ ಮಾತ್ರ ಅದು ಭಾವ ಯಾತ್ರೆಯಾಗಬಹುದು. ನಾವು ಬಾಹ್ಯದ ಯಾತ್ರೆ, ಅಚೇತನದ ಯಾತ್ರೆ, ಪುದ್ಗಲ ಪದಾರ್ಥಗಳ ಯಾತ್ರೆ ಹೀಗೆ ಅದೆಷ್ಟೋ ಯಾತ್ರೆಗಳನ್ನು ಮಾಡುತ್ತೇವೆ. ಅಲ್ಲಿಯ ಹವೆ-ನೀರು, ಪರ್ವತ-ಕಲ್ಲು, ಶೀತ-ಉಷ್ಣ ಇವೆಲ್ಲದರ ಅನುಭವ ನಮಗಾಗುತ್ತದೆ. ಆ ಎಲ್ಲ ಅನುಭವಗಳೂ ಆಗುವುದು ಶರೀರಕ್ಕೆ ಮಾತ್ರ. ಇದು ಭೌತಿಕ ಪದಾರ್ಥಗಳ ಅನುಭವ, ದ್ರವ್ಯಕ್ಕೆ ಸಂಬಂಧಪಟ್ಟದ್ದು. ಆದರೆ ಈ ಅನುಭವವನ್ನು ಚೇತನಪೂರ್ಣನಾದ ಆತ್ಮನಿಗೂ ಜೋಡಿಸುವುದು ಅತ್ಯಾವಶ್ಯಕವಾಗಿದೆ. ರತ್ನಾಕರವರ್ಣಿ ತನ್ನ ರತ್ನಾಕರ ಶತಕದಲ್ಲಿ ಅತ್ಯಂತ ಸುಂದರವಾಗಿ ಇದನ್ನು ಹೀಗೆ ವರ್ಣಿಸಿದ್ದಾನೆ;-

**ಅಂಗುಷ್ಠಂ ಮೊದಲಾಗಿ ನೆತ್ತಿವರೆಗಂ ಸರ್ವಾಂಗ ಸಂಪೂರ್ಣನು- ।**
**ತ್ತುಂಗಜ್ಞಾನಮಯಂ, ಸುದರ್ಶನಮಯಂ, ಚಾರಿತ್ರ ತೇಜೋಮಯಂ ॥**
**ಮಾಂಗಲ್ಯಂ ಮಹಿಮಂ ಸ್ವಯಂಭು ಸುಖಿ ನಿರ್ಬಾಧಂ ನಿರಾಪೇಕ್ಷ ನಿ-।**
**ಮ್ಮಂಗಂಬೋಲ್ ಪರಮಾತ್ಮನೆಂದರುಪಿದ್ಯೆ, ರತ್ನಾಕರಾಧೀಶ್ವರಾ ॥**

ನಿನ್ನ ಚೇತನವನ್ನು, ಮನಸ್ಸನ್ನು ಅಂಗುಷ್ಠದಿಂದ ಹಿಡಿದು ಮಸ್ತಕದವರೆಗೂ ವಿಸ್ತರಿಸು. ಮಸ್ತಕವು ಮರ್ಮಸ್ಥಾನ. ಅಲ್ಲೊಂದು ಅತ್ಯಂತ ಸೂಕ್ಷ್ಮ ರಂಧ್ರವಿದೆ. ಗಣಧರ ಪರಮೇಷ್ಠಿಗಳು ಧ್ಯಾನ ಮಾಡುವ ಹೊತ್ತಿನಲ್ಲಿ ರಂಧ್ರದಿಂದ ಶ್ವಾಸೋಚ್ಛ್ವಾಸ ತೆಗೆದುಕೊಳ್ಳುತ್ತಾರೆ. ಈ ಪ್ರಕಾರ ಧ್ಯಾನದಿಂದ ಜ್ಞಾನದ ಅದ್ಭುತ ಶಕ್ತಿ ಜಾಗೃತವಾಗುತ್ತದೆ. ಇದರಿಂದಲೇ ಗಣಧರರು ನಲವತ್ತೆಂಟು ನಿಮಿಷಗಳಲ್ಲಿ ಸಂಪೂರ್ಣ ದ್ವಾದಶಾಂಗದ ಪಾಠ ಮುಗಿಸುತ್ತಾರೆ. ಸೂಕ್ಷ್ಮ ಶ್ವಾಸ ತೆಗೆದುಕೊಳ್ಳುವುದರಿಂದ ಸ್ಮರಣಶಕ್ತಿ ವೃದ್ಧಿಸುತ್ತದೆ. ಇದರಿಂದಲೇ ಆಚಾರ್ಯರು ಹೇಳುತ್ತಾರೆ- ''ಮನಸ್ಸು ಅಂಗುಷ್ಠದಿಂದ ಹಿಡಿದು ಮೆಲ್ಲಮೆಲ್ಲನೆ ಮರ್ಮಾದಿ ಸ್ಥಾನಗಳ ಮೇಲೆ ಹರಡಿಸಿರಿ. ಅನಂತರ ಒಂದೊಂದು ಮರ್ಮಸ್ಥಾನದ ಮೇಲೆ ಅದನ್ನು ಸ್ಥಿರಗೊಳಿಸುತ್ತಾ ಚೈತನ್ಯ ಆತ್ಮನ ಯಾತ್ರೆ ಮಾಡಿರಿ. ಬಾಹ್ಯ ತೀರ್ಥಗಳ, ದ್ರವ್ಯ ತೀರ್ಥಗಳ ಯಾತ್ರೆಯನ್ನಾದರೋ ಎಷ್ಟೋಸಲ ಮಾಡಿರುತ್ತೀರಿ. ಎಲ್ಲಿಯವರೆಗೆ ಚೈತನ್ಯಾತ್ಮನ ಯಾತ್ರೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ಭೇದಜ್ಞಾನದ ಅನುಭೂತಿ ಆಗಲಾರದು, ಆನಂದದ ಅನುಭೂತಿ ಆಗಲಾರದು, ಸ್ವ-ಸಂವೇದನೆ ಆಗಲಾರದು. ಚೈತನ್ಯ ಯಾತ್ರೆಯಲ್ಲಿ ಮನಸ್ಸು ಅತ್ತಿತ್ತ ಸುಳಿದಾಡಲಾರದು, ಏಕಾಗ್ರವಾಗಿರುತ್ತದೆ. ಕಣ್ಣುಗಳನ್ನು ಮುಚ್ಚಿ ಕುಳಿತುಕೊಳ್ಳಿರಿ, ಮನಸ್ಸನ್ನು ಸುತ್ತಲೂ ತಿರುಗಿಸಿರಿ. ಚೈತನ್ಯ ಯಾತ್ರೆಯಲ್ಲಿ ಎಂಟು ಸಾಧನಗಳನ್ನು ಹೇಳಲಾಗಿದೆ. ಅವು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ.

**ಯಮ:-** ಯಮ ಅರ್ಥಾತ್ ತಡೆಗಟ್ಟುವುದು, ವಶಕ್ಕೆ ತೆಗೆದುಕೊಳ್ಳುವುದು. ಜೀವನ

ಪೂರ್ತಿಯಾಗಿ ಯಾವುದೇ ವಿಚಾರವನ್ನಾದರೂ ತಡೆಗಟ್ಟುವುದು, ವಶಕ್ಕೆ ತೆಗೆದುಕೊಳ್ಳುವುದು ಯಮವೆನಿಸುತ್ತದೆ. ಯಮದ ಅರ್ಥ ಮೃತ್ಯು, ಮೃತ್ಯುವಿನ ವರೆಗೆ ತಡೆಗಟ್ಟುವುದು. ಆದ ಕಾರಣ ವಶಕ್ಕೆ ತೆಗೆದುಕೊಳ್ಳುವಲ್ಲಿ ಆ ಸಿದ್ಧಾಂತಗಳು ಸಹಾಯಕವಾಗಿವೆ. ಜೀವನ ಪರ್ಯಂತ ಈ ಸಿದ್ಧಾಂತಗಳನ್ನು ಪಾಲನೆ ಮಾಡುವುದರಿಂದ ಅವು 'ಯಮ' ಎಂದು ಕರೆಯಲ್ಪಡುತ್ತವೆ. ಹೇಗೆಂದರೆ ಜೀವನವಿಡೀ ಮದ್ಯ, ಮಾಂಸ, ಮಧು, ಇವುಗಳ ಸೇವನೆ ಮಾಡದಿರುವುದನ್ನು 'ಯಮ' ಎಂದು ಕರೆಯಲಾಗಿದೆ. ಐದು ಅಣುವ್ರತಗಳು, ಎಂಟು ಮೂಲಗುಣಗಳು, ಇವು ಜೀವನವಿಡೀ ಪಾಲಿಸಲ್ಪಡುತ್ತವೆ. ಆದುದರಿಂದ ಅವು 'ಯಮ' ಎಂದು ಕರೆಯಲ್ಪಡುತ್ತವೆ.

**ನಿಯಮ:-** ನಿಶ್ಚಿತ ಸಮಯ, ನಿಶ್ಚಿತ ಅವಧಿ ಕಾಲ-ಮರ್ಯಾದೆ, ಇವುಗಳೊಂದಿಗೆ ಸಿದ್ಧಾಂತ ಪಾಲನೆ ಮಾಡುವುದನ್ನು ನಿಯಮವೆನ್ನಲಾಗಿದೆ. ಹೇಗೆಂದರೆ ಗಂಟೆಗಟ್ಟಲೆ ನೀರನ್ನು ಕುಡಿಯಲಾರೆ, ಇಂದು ಏಕಾಸನ ಮಾಡುವೆ, ಅಷ್ಟಮಿ-ಚತುರ್ದಶಿಗೆ ಈ ನಿಯಮ ಪಾಲನೆ ಮಾಡುವೆನು. ತನ್ನ ಶಕ್ತಿಗನುಗುಣವಾಗಿ ಸೀಮಿತ ಅವಧಿಯಲ್ಲಿ ಪಾಲಿಸಲ್ಪಡುವ ಸಿದ್ಧಾಂತವೇ ನಿಯಮ.

**ಆಸನ:-** ಮನಸ್ಸನ್ನು ಸ್ಥಿರಗೊಳಿಸುವುದಕ್ಕಾಗಿ ಶರೀರವನ್ನು ಸ್ಥಿರವಾಗಿ ಇರಿಸುವುದೇ ಆಸನ. ಒಂದು ಸ್ಥಿರ ಆಸನದಲ್ಲಿ ಕುಳಿತುಕೊಳ್ಳುವುದು ಧ್ಯಾನದ ಪ್ರಥಮ ಆವಶ್ಯಕತೆ. ಅದಕ್ಕೊಂದು ಉದಾಹರಣೆ ಕೊಡುವುದಾದರೆ ಒಂದು ಸೂಜಿ ಇದೆ. ಅದಕ್ಕೆ ನೂಲನ್ನು ಪೋಣಿಸಬೇಕು. ಹಾಗೆ ಮಾಡುವ ಹೊತ್ತಿನಲ್ಲಿ ಮನ-ವಚನ-ಕಾಯ ಈ ಮೂರೂ ನಿಸ್ಸಂದೇಹವಾಗಿ ಸ್ಥಿರವಾಗಿರಬೇಕು. ಸ್ವಲ್ಪವಾದರೂ ಅದರಲ್ಲಿ ವಿಚಲಿತ ಸ್ಥಿತಿಯುಂಟಾದರೆ ಸಾಕು ಸೂಜಿಯ ರಂಧ್ರಕ್ಕೆ ದಾರವನ್ನು ಹಾಕಲಾಗುವುದಿಲ್ಲ, ಇದೇ ಪ್ರಕಾರ ನಾವು ಆತ್ಮನಲ್ಲಿ ಸೂಜಿಗೆ ದಾರ ಸಿಕ್ಕಿಸುವಂತೆ ಮಂತ್ರೋಚ್ಚಾರ ಮಾಡಲು ಬಯಸುವುದಾದರೆ ಮನ-ವಚನ-ಕಾಯದ ಏಕಾಗ್ರತೆ ಅವಶ್ಯ ಬೇಕಾಗುತ್ತದೆ. ಇದರಲ್ಲಿ ಶ್ವಾಸೋಚ್ಛ್ವಾಸವು ನಿಯಮಿತವಾಗಿರುತ್ತದೆ.

**ಪ್ರತ್ಯಾಹಾರ:-** ಇದು ಐದು ಇಂದ್ರಿಯಗಳನ್ನು ತಡೆದು ಹತೋಟಿಯಲ್ಲಿಡುವುದಾಗಿದೆ. ಇಂದ್ರಿಯ ವಿಮುಖವಾಗುವುದೇ ಪ್ರತ್ಯಾಹಾರ. ಐದೂ ಇಂದ್ರಿಯಗಳ ವಿಷಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳದೆ ಉದಾಸೀನ ಭಾವದಿಂದಿರುವುದೇ ಪ್ರತ್ಯಾಹಾರ. ಇಂದ್ರಿಯಗಳಿಂದ ಸಂಪೂರ್ಣ ಉದಾಸೀನನಾಗಿರುವ ಆತ್ಮನನ್ನು ಸಮಯಸಾರದಲ್ಲಿ ಪ್ರತ್ಯಕ್ ಆತ್ಮ ಎಂದು ಹೇಳಲಾಗಿದೆ. ವಿಷಯಗಳನ್ನು ಮರೆತು ಪ್ರತ್ಯಕ್ ಆತ್ಮನು ತನ್ನ ಆತ್ಮನಲ್ಲಿ ಸ್ಥಿರನಾಗುತ್ತಾನೆ. ಧೀರ ಪುರುಷರು, ಪ್ರಕರ್ಷ ಬುದ್ಧಿವಂತರು ಮಾತ್ರವೇ ಪ್ರತ್ಯಕ್ ಆತ್ಮಾ ಆಗಬಲ್ಲರು. ಪೂರ್ಣ ಪ್ರತ್ಯಕ್ ಆದವರು ಸರ್ವಜ್ಞ ಭಗವಾನ್ ಆಗಬಲ್ಲರು. ನಾವು-ನೀವೆಲ್ಲ ಆಂಶಿಕ ಪ್ರತ್ಯಕ್ ಆಗುತ್ತೇವೆ. ಇದಕ್ಕಾಗಿ ಇಂದ್ರಿಯಗಳಿಂದ ಪರಾವರ್ತರಾಗಿ,



ಪೃಥಕ್ ಆಗಿ ಕುಳಿತುಕೊಳ್ಳಬೇಕಾದೀತು. ಒಂದು ವೇಳೆ ಮನಸ್ಸಿನಲ್ಲಿ ಮಾತ್ರವೇ ಒಂದು ಇಂದ್ರಿಯದ ವಿಷಯ ಇದ್ದುದಾದರೆ ಕೂಡಾ ಮನಸ್ಸಿನಲ್ಲಿ ಕೋಲಾಹಲ ಉಂಟಾಗಬಹುದು.

**ಧಾರಣಾ :-** ಧಾರಣಾ ಎಂದರೆ ಸ್ಮರಣೆ ಮಾಡುವ ಶಕ್ತಿ, ಪಂಚಪರಮೇಷ್ಠಿಗಳ ಸ್ಮರಣೆಯನ್ನಿಟ್ಟುಕೊಳ್ಳುವುದೇ ಧಾರಣಾ.

**ಧ್ಯಾನ:-** ಏಕಾಗ್ರತೆಯಿಂದ ಚೈತನ್ಯ ಆತ್ಮನ ಯಾತ್ರೆ ಮಾಡುವುದೇ ಧ್ಯಾನ. ಅದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ವಿಕಲ್ಪರಹಿತ ಅವಸ್ಥೆಯೇ ಧ್ಯಾನ.

**ಸಮಾಧಿ:-** ಎಂದರೆ ನಿರ್ವಿಕಲ್ಪ ದಶಾ. ಗೃಹಸ್ಥ ಜೀವನದಲ್ಲೂ ಆರು ಕ್ಷಣಗಳವರೆಗೆ ನಿರ್ವಿಕಲ್ಪ ದಶೆಯನ್ನು ಪ್ರಾಪ್ತಗೊಳಿಸಬಹುದು. ವಿಕಲ್ಪರಹಿತ ಅವಸ್ಥೆಯಿಂದ ಸಮತಾಭಾವದಿಂದ ಸಮಾಧಿಯ ವರೆಗೆ ತಲುಪಬಲ್ಲೆವು. ಇವೆಲ್ಲವೂ ಸಾಧನಾ ಮಾರ್ಗಗಳಾಗಿವೆ.

ಒಬ್ಬ ಯುವಕನು ಒಬ್ಬರು ಮಹಾತ್ಮರಲ್ಲಿಗೆ ಹೋದ. ಮಹಾತ್ಮಾಜೀ, ನಾನು ಧರ್ಮವನ್ನು ಕಲಿಯಲು ಬಯಸುತ್ತೇನೆ, ನನಗೆ ಧರ್ಮವನ್ನು ಕಲಿಸುವಿರಾ? ನೀವು ಏನೆಲ್ಲಾ ಧರ್ಮವನ್ನು ತಿಳಿದಿರುವಿರೋ ಅದನ್ನೆಲ್ಲಾ ನನಗೆ ಕಲಿಸಿರಿ. ಮಹಾತ್ಮಾಜೀ ಯೋಚನೆ ಮಾಡಿ ಆಗಲಿ ಎಂದು ಹೇಳಿ ತಮ್ಮ ಜೊತೆಯಲ್ಲಿಟ್ಟುಕೊಂಡರು. ಗುರೂಜಿ ಅವನಿಗೆ ಸ್ವಚ್ಛತೆ, ಅಡಿಗೆ ಮಾಡುವುದು ಇತ್ಯಾದಿಗಳನ್ನು ಹೇಳಿಕೊಟ್ಟರು. ಆ ಶಿಷ್ಯನು ಕೂಡಾ ಗುರು ಹೇಳಿದುದನ್ನೆಲ್ಲಾ ಶ್ರದ್ಧೆಯಿಂದ ಮಾಡುತ್ತಲೇ ಇದ್ದ. ಗುರುಗಳು ಪ್ರತಿದಿನವೂ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ತಮ್ಮ ಕೊಠಡಿಯ ಒಳಗೆ ಕುಳಿತು ಶಿಷ್ಯನನ್ನು ಹೊರಗೆ ಕುಳಿತಿರುವಂತೆ ಮಾಡಿದ್ದರು. ಪ್ರಾರಂಭದಲ್ಲಿ ಶಿಷ್ಯ ಏನೂ ಮಾತಾಡಲಿಲ್ಲ, ಒಂದು ದಿನ ಅವನು ''ಗುರೂಜೀ ಪ್ರತಿದಿನವೂ ಒಳಗಡೆ ಒಂಟಿಯಾಗಿ ಕುಳಿತು ಏನು ಮಾಡುತ್ತಾರೆ ? ಏನನ್ನು ತಿನ್ನುತ್ತಾರೆ ?'' ಎಂದು ಯೋಚಿಸಿದ. ಅವನಿಗೆ ತನ್ನ ಉತ್ಸುಕತೆಯನ್ನು ಹತೋಟಿಯಲ್ಲಿಡಲಾಗಲಿಲ್ಲ, ಅವನು ಮೆಲ್ಲನೆ ಆ ಕೊಠಡಿಯ ಹಲ್ಲನ್ನು ಸ್ವಲ್ಪ ಬದಿಗೆ ಸರಿಸಿ ನೋಡಿದರೆ ಗುರೂಜಿ ಏಕಾಗ್ರತೆಯಿಂದ ಅಚಲವಾಗಿ ಕುಳಿತಿರುವುದು ಕಾಣಿಸಿತು. ''ಅರೆ! ಈ ಗುರೂಜಿ ಏನು ಮಾಡುತ್ತಿದ್ದಾರೆ ?'' ಎಂದು ಮನಸ್ಸಿನಲ್ಲಿ ಯೋಚಿಸಿದ.

ಸ್ವಲ್ಪ ಹೊತ್ತಿನಲ್ಲಿ ಗುರೂಜಿ ಹೊರ ಬಂದರು. ಅಷ್ಟರಲ್ಲಿ ಶಿಷ್ಯನು ''ಪೂಜ್ಯರೇ, ತಾವು ಒಳಗಡೆ ಕಣ್ಣುಮುಚ್ಚಿ ಕುಳಿತುಕೊಂಡು ಏನು ಮಾಡುತ್ತಿದ್ದಿರಿ ?'' ಎಂದು ಕೇಳಿಯೇಬಿಟ್ಟ. ಗುರೂಜಿ ಹೇಳಿದರು- ''ನಾನು ಒಳಗೆ ಕಣ್ಣುಮುಚ್ಚಿಕೊಂಡು ಕುಳಿತಿದ್ದೆ ಎಂಬುದನ್ನು ನೀನು ಹೇಗೆ ತಿಳಿದೆ ?'' ಶಿಷ್ಯ ಹೇಳಿದ- ಸ್ವಾಮಿ, ತಾವು ನನ್ನನ್ನು ಹೊರಗಡೆ ಕೂರಿಸಿ ನೀವು ಒಬ್ಬರೇ ಒಳಗಡೆ ಕುಳಿತುಕೊಳ್ಳುತ್ತಿದ್ದಿರಿ. ಆಗ ನೀವೇನಾದರೂ ನನಗೆ ಅಡಗಿಸಿ ತಿನ್ನುತ್ತಿದ್ದೀರೋ ಎಂಬ ಸಂಶಯ ನನಗುಂಟಾಯಿತು. ಆದ ಕಾರಣವೇ ನಾನು

ಈ ಗುಡಿಸಿಲಿನ ಹುಲ್ಲನ್ನು ಸ್ವಲ್ಪ ಸರಿಸಿ ನಿಮ್ಮನ್ನು ನೋಡಿದೆ, ಆಗ ನಿಜಸ್ಥಿತಿ ನನಗೆ ತಿಳಿಯಿತು.'' ಆಗ ಗುರೂಜಿ ಹೇಳಿದರು- ''ಅರೆ, ನಾ ಒಳಗಡೆ ಕುಳಿತು ಪರಮಾತ್ಮನ ಧ್ಯಾನ ಮಾಡು ತ್ತಿದ್ದೆ ''. ಶಿಷ್ಯ ಹೇಳಿದ- ''ಹಾಗಾದರೆ ನಾನು ಇಲ್ಲಿಗೆ ಬಂದದ್ದು ಏತಕ್ಕಾಗಿ ? ಪಾತ್ರೆ ತೊಳೆಯುವುದಕ್ಕೋ ಅಥವಾ ಕಸ ಗುಡಿಸುವುದಕ್ಕೋ ?'' ನನಗೂ ಧ್ಯಾನವನ್ನು ಕಲಿಸಿರಿ.'' ಆಗ ಗುರುಗಳು ಅವನಿಗೆ 'ಸೋಹಂ' ಎಂಬ ಮಂತ್ರವನ್ನಿತ್ತುಕೊಂಡು 'ಸರಿ, ಹಾಗಾದರೆ ಹೀಗೆ ಕುಳಿತುಕೋ, ಈ ಮಂತ್ರವನ್ನು ಜಪಿಸು' ಎಂದು ಹೇಳಿ 'ಸೋಹಂ' ಮಂತ್ರೋಪ ದೇಶ ಮಾಡಿದರು. ಶಿಷ್ಯನು ಆ ಮಂತ್ರ ಜಪಕ್ಕೆ ತೊಡಗಿದ ಮತ್ತು ಧ್ಯಾನದ ಮರ್ಮವೂ ಅವನಿಗೆ ತಿಳಿಯಿತು.

**ಕೇವಲಣಾಣ ಸಹಾವೋ ಕೇವಲ ದಂಸಣಸಹಾವ ಸುಹಮಇಓ ।**
**ಕೇವಲಸತ್ತಿ ಸಹಾವೋ ಸೋಹಂ ಇತಿ ಚಿಂತಏ ಣಾಣೀ ॥**
**ಣಿಯಭಾವಂ ಣವಿ ಮುಚ್ಚಇ, ಪರಭಾವಂ ಣೇವ ಗೇಣ್‌ಹಏ ಕೇಇಂ ।**
**ಜಾಣದಿ ಪಸ್ಸದಿ ಸವ್ವಂ ಸೋಹಂ ಇದಿ ಚಿಂತಏ ಣಾಣೀ ॥**
**ಪಯಡಿಟ್ಠಿದಿ ಅಣುಭಾಗಪ್ಪದೇಸಬಂಧೇಹಿ ವಜ್ಜಿದೋ ಅಪ್ಪಾ ।**
**ಸೋಹಂ ಇದಿ ಚಿಂತಿಜ್ಜೋ ತತ್ಥೇವ ಯ ಕುಣದಿ ಥಿರಭಾವಂ ॥**

ನಿಯಮಸಾರದಲ್ಲಿ ಮೇಲೆ ಹೇಳಿದ ಮೂರು ಗಾಥೆಗಳ ಜೊತೆಗೆ ಯಾವನು 'ಸೋಹಂ' ಎಂಬ ಧ್ಯಾನ ಮಾಡುತ್ತಾನೋ ಅವನು ಜ್ಞಾನಿ ಎಂದು ಹೇಳಲಾಗಿದೆ. ಈ ಧ್ಯಾನ ಮಾಡುವವನು ಜ್ಞಾತನೂ ಆಗಿದ್ದಾನೆ, ದೃಷ್ಟಾನೂ ಆಗಿದ್ದಾನೆ. ಸಾಧನೆಯ ಪ್ರಮುಖತೆ ಯಿಂದ ಮೇಲೆ ಹೇಳಿದ ಮೂರು ಗಾಥೆಗಳು ಉಲ್ಲೇಖಿತಗಳಾಗಿವೆ.

ಆ ಶಿಷ್ಯನು ಆರು ತಿಂಗಳುಗಳವರೆಗೆ 'ಸೋಹಂ' ಎಂಬುದನ್ನೇ ಬಾಯಿಪಾಠ ಮಾಡಿ ಕೊಂಡು ಹೇಳುತ್ತಲೇ ಇದ್ದ. ಮತ್ತೆ ಒಂದು ದಿನ ಅವನು 'ಗುರೂಜೀ, ಶಬ್ದವೇನೋ ನನಗೆ ಬಾಯಿಪಾಠವಾಗಿದೆ, ಈಗ ಅದರ ಅರ್ಥವನ್ನು ಹೇಳಿ' ಎಂದನು. ಶಬ್ದ, ಅರ್ಥ, ಜ್ಞಾನ ಮೂರೂ ಅವಶ್ಯಕವಾದುದು. ಆಗ ಗುರೂಜೀ 'ಇದರ ಅರ್ಥ, ಹೇ ಭಗವಾನ್, ನೀನು ಹೇಗೋ ಹಾಗೆಯೇ ನಾನು ಕೂಡಾ' ಎಂದಾಗಿದೆ ಎಂದರು. ಶಿಷ್ಯನು ಸರಿ ಎಂದು ಹೇಳಿ ಹಾಗೆಯೇ ಧ್ಯಾನ ಮಾಡುತ್ತಲೇ ಇದ್ದನು. ಮತ್ತೊಂದು ದಿನ ಅವನ ಮನಸ್ಸಿನಲ್ಲಿ ಹೀಗೊಂದು ವಿಚಾರ ಹುಟ್ಟಿತು. 'ನಾನು ಪ್ರತಿದಿನವೂ ಭಗವಂತನ, ಪರಮಾತ್ಮನ ಧ್ಯಾನ ಮಾಡುತ್ತಿದ್ದೇನೆ. ಭಗವಂತ ಯಾರ ಧ್ಯಾನ ಮಾಡುತ್ತಾನೆ ? ಅವನು ನಮ್ಮ ಧ್ಯಾನ ಮಾಡು ತ್ತಿರಬಹುದೇ?'' ಈ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವನು ಗುರುವಿನ ಬಳಿಗೆ ಬಂದು- ಗುರೂಜೀ, ಪರಮಾತ್ಮನು ಕೂಡಾ ನಮ್ಮ ಧ್ಯಾನ ಮಾಡುತ್ತಾನೆಯೇ ?'' ಎಂದು ಕೇಳಿದನು. ಗುರೂಜೀ 'ಇಲ್ಲ' ಎಂದು ಉತ್ತರಿಸಿದಾಗ ''ಮತ್ತೆ ನಾವೇಕೆ ಅವನ ಧ್ಯಾನ ಮಾಡಬೇಕು ?' ಆ ಎಂದನು. ಆಚಾರ್ಯ ಪೂಜ್ಯಪಾದರು ಈ ಪ್ರಶ್ನೆಗೆ ಉತ್ತರಿಸುತ್ತಾ ಹೀಗೆ ಬರೆದಿದ್ದಾರೆ;-



**ಜಹ ಪರಮಾತ್ಮಾ ಸಹೇವಾ .......... ।**

ಆ ನಿರಾಕಾರ ಪರಮಾತ್ಮನು, ಸಿದ್ಧಾತ್ಮನು ನಮ್ಮ ಮುಂದೆ ಆದರ್ಶನಾಗಿದ್ದಾನೆ. ಇದು ಧ್ಯಾನದ ಪ್ರಾರಂಭಿಕ ಅವಸ್ಥೆ. ನಾನೇ ನನ್ನ ಉಪಾಸ್ಯನಾಗಿದ್ದೇನೆ. ನಾನು ಸ್ವಯಂ ಪರ ಮಾತ್ಮನು. ಯಾವ ಹೊತ್ತಿನಲ್ಲಿ ಇಂತಹ ಭಾವಗಳು ಉಂಟಾಗುತ್ತವೋ ಆ ಹೊತ್ತಿಗೆ ಎಲ್ಲ ಅವಲಂಬನೆಗಳು ಬಿಟ್ಟು ಹೋಗುತ್ತವೆ; ಆಗ ನೀನು ಸ್ವಯಂ ಪರಮಾತ್ಮನಾಗುವೆ.

''ನಾನೇ ಪರಮಾತ್ಮನು, ನಾನೇ ನನ್ನ ಉಪಾಸ್ಯನು'' ಯಾವ ದಿನ ಮನಸ್ಸಿನಲ್ಲಿ ಇದು ಸ್ಥಿರವಾಗುತ್ತದೋ ಆ ದಿನ ಕೇವಲಜ್ಞಾನ ಉಂಟಾಗುತ್ತದೆ ಮತ್ತು ನೀನು ಸ್ವಯಂ ಮುಕ್ತ ನಾಗಿ ಪರಮಾತ್ಮ ಎಂದು ಕರೆಯಲ್ಪಡುವೆ.

ಪ್ರಾರಂಭಿಕ ದಸೆಗೆ 'ಧಾರಣಾ' ಎಂದು ಹೇಳಲಾಗಿದೆ. ಪಂಚಪರಮೇಷ್ಠಿಗಳ ಸ್ಮರಣೆ ಮಾಡುವುದನ್ನು ತಿಳಿಸಲಾಗಿದೆ. ಪ್ರಾರಂಭದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಲು 'ದ್ರವ್ಯ ಶ್ರುತ'ದ ಅವಲಂಬನೆ ಬೇಕು. ಶಿವಭೂತಿ ಆಚಾರ್ಯರು 'ತುಷಮಾಷ ಭಿನ್ನ' ಮಾತ್ರ ಇಷ್ಟು ದ್ರವ್ಯಸೂತ್ರದಿಂದ ಜ್ಞಾನಿಗಳಾಗಿಬಿಟ್ಟರು. ಶಿವಭೂತಿ ಆಚಾರ್ಯರು ಏನೇನು ಕಲಿ ತಿದ್ದರೋ ಅದನ್ನು ಭೋಜನವಾದ ಬಳಿಕ ಸಂಪೂರ್ಣ ಮರೆತುಬಿಡುತ್ತಿದ್ದರು. ಒಂದುದಿನ ಒಬ್ಬ ಮಹಿಳೆ ಬೇಳೆಯ ಸಿಪ್ಪೆಯನ್ನು ತೆಗೆದು ಬೇಳೆಯಿಂದ ಪ್ರತ್ಯೇಕಿಸುವುದನ್ನು ನೋಡಿ ಅವರಿಗೆ ಬೇಳೆ ಬೇರೆ ಸಿಪ್ಪೆ ಬೇರೆ ಎಂಬ ಬೋಧೆಯುಂಟಾಯಿತು. ಈ ದ್ರವ್ಯಶ್ರುತದ ಸಹ ಕಾರದಿಂದ ಅವರು ಭಾವಶ್ರುತದಲ್ಲಿಳಿದರು ಮತ್ತು ಮುಕ್ತರಾದರು. ಪಂಡಿತ್ ತೋಡರ ಮಲ್ಲಜೀಯವರು ಇದಕ್ಕಾಗಿ ಹೀಗೆ ಬರೆದಿದ್ದಾರೆ- **''ಶಿವಭೂತಿ ನೇತ್ ಜೀವಾದಿ ಪದಾರ್ಥ ಜಾನ್ಯಾ ಕೊನ್ಯೆ, ತುಷಮಾಷ್ ಶಬ್‌ಸಿದ್ಧಾಂತ್ ಕೋ ನಹೀಂ, ತಾತ್ಯೆಂ ಕೇವಲೀ ಭಯಾ''.**

''ಬೇಳೆ ಬೇರೆ, ಸಿಪ್ಪೆ ಬೇರೆ'' ಭಗವಂತನ ದ್ವಾದಶಾಂಗ ವಾಣಿಯಲ್ಲಿ ಈ ಉಪ ದೇಶವಿಲ್ಲ. ಆದರೆ ಶಿವಭೂತಿ ಆಚಾರ್ಯರು ಈ ಲೌಕಿಕ ಉದಾಹರಣೆಯನ್ನು ಧಾರಣೆ ಮಾಡಿ ಪರಮಾರ್ಥದಲ್ಲಿ ಪರಿವರ್ತನೆ ಮಾಡಿಕೊಂಡರು. ಒಬ್ಬ ಕವಿ ಹೀಗೆ ಹೇಳಿದ್ದಾನೆ;-

**ಬಿನಾ ಪಢೇ ಪರತೀತಿ ಗಹೀ, ರಾಜ್ಯೋ ಗಾಢ್ ಅಪಾರ್ ।**
**ಯಾದ್ ಕರತ್ ತುಷಮಾಷ್ ಕೋ, ಉತರ್‌ಗಯೆ, ಭವಪಾರ್ ॥**

ಯಾವ ವ್ಯಕ್ತಿಗೆ ಶ್ರುತಜ್ಞಾನ ಉಂಟಾಗಲಿಲ್ಲವೋ ಅವನು ''ಬೇಳೆ ಬೇರೆ ಸಿಪ್ಪೆ ಬೇರೆ'' ಎಂಬ ಸಿದ್ಧಾಂತದಿಂದ ''ಆತ್ಮ ಬೇರೆ ಶರೀರ ಬೇರೆ'' ಎಂಬುದನ್ನು ಅನ್ವಯಿಸಿ ಭೇದಜ್ಞಾನ ಬಂದುಬಿಟ್ಟಿತು, ಕೇಲವಜ್ಞಾನ ಆಗಿಬಿಟ್ಟಿತು. ಅವನು ದ್ರವ್ಯ ಶ್ರುತವನ್ನು ಭಾವ ಶ್ರುತದಲ್ಲಿ ಪರಿವರ್ತನೆಗೊಳಿಸಿದನು.

**ತುಸಮಾಸೋ ಘೋಸಂತೋ ಸಿವಭೂದೀ ಕೇವಲೀ ಜಾದೋ ।**

ಧವಲಾದಲ್ಲಿ ಹೀಗೆ ಸ್ಪಷ್ಟೀಕರಿಸಿದೆ;- ''ಪ್ರಾರಂಭದಲ್ಲಿ ಯಾವುದೇ ಪದಾರ್ಥದ
ಅವಲಂಬನೆ ಪಡೆದುಕೊಳ್ಳಬೇಕಾದುದು ಅವಶ್ಯಕ. ಹೇಗೆಂದರೆ ಮೇಲೆ ಹತ್ತಿಕೊಂಡು
ಹೋಗಬೇಕಾದರೆ ಏಣಿಯ ಅಥವಾ ಹಗ್ಗದ ಅವಶ್ಯಕತೆಯಿರುತ್ತದೆ. ಅದೇ ರೀತಿ ಆತ್ಮನಲ್ಲಿ
ತತ್ತ್ವಜ್ಞಾನದ ಚಿಕ್ಕವಾಕ್ಯ ಇಲ್ಲವೇ ಚಿಕ್ಕ ಸೂತ್ರವನ್ನು ಪೋಣಿಸಿದಾಗ ಅದರ ಆಧಾರದ
ಮೇಲೆ ಮನಸ್ಸನ್ನು ಏಕಾಗ್ರಗೊಳಿಸಿ ಪರಮಾತ್ಮನಾಗಲು ಸಾಧ್ಯವಾಗುತ್ತದೆ, ಕೇವಲಜ್ಞಾನಿ
ಯಾಗಲು ಸಾಧ್ಯವಾಗುತ್ತದೆ. **'ಸೋಽಹಂ'** ಧ್ಯಾನವು ಇಷ್ಟು ಮಹತ್ವಪೂರ್ಣವಾದುದು.
ಇಂದು **'ಸೋಽಹಂ'**ನಿಂದ 'ಸೋ' ಹೊರಟುಹೋಗಿದ್ದು 'ಅಹಂ' ಮಾತ್ರ ಉಳಿದು
ಕೊಂಡಿದೆ.

ಮಿಥಿಲಾ ದೇಶದ ರಾಜನಾದ ಜನಕನು ಧ್ಯಾನದಲ್ಲಿ ಕುಳಿತಿದ್ದ, 'ಸೋಽಹಂ'
ಜಪ-ಧ್ಯಾನ ಮಾಡುತ್ತಿದ್ದ. ಅಷ್ಟಾವಕ್ರನು ಅವನೊಡನೆ 'ಯಾರದು?' ಎಂದು ಕೇಳಿದ.
ಜನಕನು ಏನೂ ಮಾತನಾಡಲಿಲ್ಲ, 'ಸೋಽಹಂ' ಧ್ಯಾನ ಮಾಡುತ್ತಲೇ ಇದ್ದ. ಅಷ್ಟಾ
ವಕ್ರನು ಪುನಃ 'ಯಾರದು?' ಎಂದು ಕೇಳಿದ. ಜನಕನು 'ನಾನು ಜನಕ' ಎಂದನು. ಆಗ
ಅಷ್ಟಾವಕ್ರನು ''ಈಗಷ್ಟೇ ಸೋಹಂ ಹೇಳುತ್ತಿದ್ದೆ, ಈಗ ನಾನು ಜನಕ ಎಂದು ಹೇಳುತ್ತಿರುವೆ
ಯಲ್ಲಾ! ಈ ಜನಕ ಈಗ ಎಲ್ಲಿಂದ ಬಂದ ? ಜನಕ ಎಂಬುದು ತಂದೆ-ತಾಯಿ ನಿನಗಿಟ್ಟ
ಹೆಸರು. ಈಗ ಹೇಳು ನೀನು ಜನಕನೋ ಅಥವಾ 'ಸೋಽಹಂ' ಭಗವಂತ ರೂಪವೋ?
ಈಗಲೂ 'ನಾನು ಜನಕ' ಎಂಬ ಭಾವವಿದೆ. ಅದುದರಿಂದ ನೀನು ಧ್ಯಾನದಲ್ಲಿ ಪರಿಪಕ್ವ
ವಾಗಲಿಲ್ಲ' ಅಂದನು. ಶ್ರೀರಾಮನು ಒಮ್ಮೆ ಹೀಗೆ ಹೇಳಿದ್ದ;-

**ನಾಹಂ ರಾಮೋ ನಮೇ ವಾಂಛಾ ಭಾವೇಷು ಚನ ಮೇ ಮನಃ।**
**ಶಾಂತಿಮಾಸ್ಥಾತುಮಿ ಚ್ಛಾಮಿ ಸ್ವಾತ್ಮನ್ಯೇವ ಜಿನೋಯಥಾ ॥**

ನಾನು ರಾಮನಲ್ಲ, ಅದು ತಾಯಿ ತಂದೆ ಇಟ್ಟ ಹೆಸರು. ನನಗೆ ಮೂರು ಲೋಕ
ಗಳಲ್ಲಿ ಯಾವುದರ ವಾಂಛೆ (ಆಸಕ್ತಿ)ಯೂ ಇಲ್ಲ, ಅದು ಹೇಗೆಂದರೆ ವೀತರಾಗ ಜಿನೇಂದ್ರ
ಭಗವಂತನು ತನ್ನ ಆತ್ಮನಲ್ಲಿ ಶಾಂತಿಯನ್ನು ಸ್ಥಾಪಿತಗೊಳಿಸಿದ್ದಾನೆ. ಅದೇ ರೀತಿ ನಾನು
ಕೂಡಾ ನನ್ನ ಆತ್ಮನಲ್ಲಿ ಶಾಂತಿಯನ್ನು ನೆಲೆಗೊಳಿಸಲು ಬಯಸುತ್ತೇನೆ.

ನೀವೆಲ್ಲ ಧ್ಯಾನ ಮಾಡುತ್ತೀರಿ. ನೀವು ಹೇಳುವುದೇನು ? ''ನಾನು ಪಾಪಿ, ನಾನು
ಅಧಮ'' ಎಂದು. ಹಾಗೆ ಧ್ಯಾನ ಮಾಡುವುದರಿಂದ ಪಾಪಿಗಳೇ ಆಗುತ್ತೀರಿ. ಹಾಗೇಕೆ
ಧ್ಯಾನ ಮಾಡಬೇಕು ? ಸ್ವಲ್ಪ ಹೊತ್ತಾದರೂ ವೀತರಾಗ, ಶುದ್ಧ ಪರಮಾತ್ಮನ ಧ್ಯಾನ
ಮಾಡಿದುದಾದರೆ ಅಸಂಖ್ಯಾತ ಕರ್ಮಗಳ ನಿರ್ಜರೆಯಾಗಬಹುದು.

**''ನಿಗೂಢಾಕ್ಷರಂ ಕಿಂಚಿದಂತರ್ಜಲ್ಪಾಕಾರತಯೋ ನಿಗೂಢ ನಿರ್ಝರ**
**ಮುಖರ-ಕಂದರೋ ಧರಾಧರ ಇವ''**



ಭಗವಾನ್ ಆದಿನಾಥರು ಕೂಡಾ ನಿಗೂಢಾಕ್ಷರದ ಧ್ಯಾನ ಮಾಡುತ್ತಿದ್ದರು. ಪರ್ವತ
ದಿಂದ ನೀರಿನ ಝರಿ ಹರಿಯುತ್ತದೆ. ಅದು ಎಲ್ಲೆಲ್ಲೋ ಸುತ್ತಾಡುತ್ತಾ ಬರುತ್ತದೆ. ನಮಗೆ
ಅದು ಗೊತ್ತಿರುವುದಿಲ್ಲ, ಇಲ್ಲಿಗೆ ಬಂದಿಳಿದಾಗ ಸಿಹಿನೀರಿನ ಸ್ವಾದವನ್ನು ತಂದು ಕೊಡು
ತ್ತದೆ. ಇದೇ ರೀತಿ ಧ್ಯಾನದ ಒಂದು ಸೂತ್ರ, ಎರಡು ಶಬ್ದ, ಒಂದು ವಾಕ್ಯ- 'ಓಂ ನಮಃ
**ಅರ್ಹಂ,' ಣಮೋಕಾರ ಮಂತ್ರ ಯಾವುದಿದೆಯೋ** ಅದನ್ನು ನೀವು ಉಚ್ಚಾರಣೆ ಮಾಡು
ತ್ತಲೇ ಇದ್ದರೆ ಅದು ಆತ್ಮನಲ್ಲಿ ಎಂತಹ ಪ್ರಭಾವ ಬೀರಬಲ್ಲದು ಎಂಬುದು ಈಗಲೇ ತಿಳಿಯ
ಲಾರದು.

ಶಬ್ದಗಳಲ್ಲಿ ಅನಂತ ಶಕ್ತಿಯಿರುತ್ತದೆ. ಇಂದು ರಷ್ಯಾದಲ್ಲಿ ಶಬ್ದಗಳ ಮಾಧ್ಯಮದಿಂದ,
ಧ್ವನಿಯ ಮಾಧ್ಯಮದಿಂದ ಅನೇಕ ರೋಗಗಳ ಚಿಕಿತ್ಸೆ ನಡೆಯುತ್ತಿದೆ. ಶೃಂಗಾರ ಗೀತೆ
ಯನ್ನು ಹಾಡಿದಾಗ ಶೃಂಗಾರಮಯ ಭಾವವು ಉಂಟಾಗುವುದಾದರೆ ಮಂಗಲ ಗೀತೆ
ಭಾವವು ಏಕೆ ಮಂಗಲಮಯವಾಗದು ? ಭಗವಂತನ, ವೀತರಾಗ ಪ್ರಭುವಿನ ಗುಣ
ಗಾನವೇ ಮಂಗಲಮಯ. ಹಾಗೆಯೇ ವೀತರಾಗ ಪ್ರಭುವಿನ ಮೂಲಕ ಪ್ರಣೀತವಾದ
ಧರ್ಮವು ಮಂಗಲಮಯವಾಗಿರುತ್ತದೆ. ನಾವು ಮನಸ್ಸನ್ನು ಪವಿತ್ರವನ್ನಾಗಿ, ಮಂಗಲ
ಮಯವನ್ನಾಗಿ ಮಾಡುವ ಪ್ರಯತ್ನ ಮಾಡಬೇಕು. ಪಂಚಪರಮೇಷ್ಠಿಗಳೈವರೂ ಮಂಗಲ
ಮಯರು. ಅವರನ್ನು ಜಪಿಸಿರಿ. ಎಷ್ಟು ದೀರ್ಘಕಾಲ ಅವರ ಜಪ ಮಾಡುತ್ತೀರೋ ಅಷ್ಟು
ದೀರ್ಘಕಾಲ ಮಂಗಲಮಯವಾಗಬಹುದು.

ಯಾವ ಸ್ಥಳದಲ್ಲಿ ನೀವು ಕುಳಿತಿರುವಿರೋ, ಆ ಸ್ಥಳದಲ್ಲಿ ಬೇರೆ ಯಾರೂ ಕುಳಿತು
ಕೊಳ್ಳಲಾರರು. ನೀವು ಅಲ್ಲಿಂದ ಎದ್ದಮೇಲೆ ಆ ಜಾಗ ಖಾಲಿಯಾಗುತ್ತದೆ. ಆಗ ಮಾತ್ರ
ಇನ್ನೊಬ್ಬ ಬಂದು ಅಲ್ಲಿ ಕುಳಿತುಕೊಳ್ಳಬಹುದು. ಇದೇ ರೀತಿ ನೀವು ಎಷ್ಟು ದೀರ್ಘಕಾಲ
ಮನಸ್ಸಿನಲ್ಲಿ ಪಂಚಪರಮೇಷ್ಠಿಗಳನ್ನು ಕುಳ್ಳಿರಿಸುವಿರೋ, ವೀತರಾಗ ಭಗವಂತರನ್ನು ಪ್ರತಿಷ್ಠಾಪಿ
ಸುತ್ತೀರೋ ಅಷ್ಟು ದೀರ್ಘಕಾಲ ಸಂಸಾರದ ವಿಚಾರಗಳು, ರಾಗ-ದ್ವೇಷಾದಿಗಳು ಮನಸ್ಸಿ
ನಲ್ಲಿ ಕುಳಿತುಕೊಳ್ಳಲಾರವು; ಮಾತ್ರವಲ್ಲ ಅವು ಅಷ್ಟು ಹೊತ್ತು ಹೊರಗೆ ಸುತ್ತಾಡುತ್ತಲೇ
ಇರುತ್ತವೆ. ಆದರ ಬದಲಾಗಿ ವೀತರಾಗವನ್ನು ದೂರಗೊಳಿಸಿದರೆ, ಪಂಚಪರಮೇಷ್ಠಿಗಳನ್ನು
ದೂರವಿಟ್ಟರೆ, ಆ ಜಾಗ ಖಾಲಿಯಾಗುತ್ತದೆ. ಅಲ್ಲಿಗೆ ಕೂಡಲೇ ರಾಗ-ದ್ವೇಷಾದಿಗಳು
ಬಂದು ತುಂಬಿಕೊಳ್ಳುತ್ತವೆ. ಅದರೊಂದಿಗೆ ನಾನಾ ವಿಕಲ್ಪಗಳು, ಕ್ರೋಧ-ಮಾನ ಮೊದ
ಲಾದ ಕಷಾಯಗಳು ಬಂದು ಸೇರಿಕೊಳ್ಳುತ್ತವೆ. ಅದಕ್ಕಾಗಿ ಆಚಾರ್ಯರು ''ಸ್ವಲ್ಪ ಹೊತ್ತು
ಕೋಲಾಹಲದಿಂದ ವಿಶ್ರಾಂತಿ ಪಡೆ, ಸ್ವಲ್ಪ ಹೊತ್ತಾದರೂ ಆತ್ಮಧ್ಯಾನ ಮಾಡು'' ಎಂದು
ಹೇಳುತ್ತಾರೆ.

**ವಿರಮ ಕಿಮಪರೇಣ ಕಾರ್ಯಕೋಲಾ ಹಲೇನ.... ।**

ಮನಸ್ಸನ್ನು ಮಂಗಲಕರವಾಗಿ ಮಾಡಬೇಕೆಂದಿದ್ದರೆ ಭಗವಂತನ ಗುಣಗಳ ಸ್ಮರಣೆ

ಮಾಡಿರಿ. ''ವಂದೇ ತದ್ಗುಣ ಲಬ್ಧಯೇ'' ಎಂಬ ಭಾವನೆಯನ್ನಿಟ್ಟುಕೊಳ್ಳಿ. ಅವರ ಗುಣಗಳ ಪ್ರಾಪ್ತಿಗಾಗಿ ಪಂಚಪರಮೇಷ್ಠಿ ಅರ್ಹಂ ನಮಃ ಅಥವಾ ಬೇರೆ ಯಾವುದೇ ಬೀಜಾಕ್ಷರವನ್ನಾದರೂ ತೆಗೆದುಕೊಂಡು ಧ್ಯಾನ ಮಾಡಿ. ಬೀಜಾಕ್ಷರದಲ್ಲಿ ಮಹಾನ್‌ಶಕ್ತಿ ಇರುತ್ತದೆ.

**ಅಕಾರಃ ಪರಮಬೋಧೋ, ರೇಫೋ ವಿಶ್ವಾವಲೋಕದೃಕ್ ।**
**ಹ ಕರೋಽ ನಂತವೀರ್ಯಾತ್ಮಾ, ಬಿಂದುಸ್ಯಾದುತ್ತಮಂ ಸುಖಮ್ ॥**

ಒಂದು ಬೀಜಾಕ್ಷರದಲ್ಲಿ ಅನಂತ ಶಕ್ತಿಯಿರುತ್ತದೆ. ಅದರಲ್ಲಿ ಅನಂತ ಚತುಷ್ಟಯವಿರುತ್ತದೆ. ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯ ಇರುತ್ತವೆ.

ವೈದ್ಯನು ರೋಗಿಯ ನಾಡಿ ನೋಡಿ ಬಹಳ ತಿಳಿದುಕೊಳ್ಳುತ್ತಾನೆ. ಅನೇಕ ವಿಚಾರಗಳ ಬಗ್ಗೆ ಕೇಳುತ್ತಾನೆ, ಮತ್ತೆ ಒಂದು ಚಿಕ್ಕ ಮಾತ್ರೆಯನ್ನು ಕೊಟ್ಟು ''ಇದನ್ನು ನುಂಗಿಬಿಡು; ಹೋಗು'' ಎಂದು ಹೇಳುತ್ತಾನೆ. ಆ ಮಾತ್ರೆಯ ಪರಮಾಣುಗಳು ಇಡೀ ಶರೀರವನ್ನು ವ್ಯಾಪಿಸುತ್ತವೆ, ನೋವು-ಪೀಡೆಯನ್ನು ಸಮಾಪ್ತಗೊಳಿಸಿ ಅವನನ್ನು ನಿರೋಗಿಯನ್ನಾಗಿ ಮಾಡುತ್ತದೆ. ಇದೇ ಪ್ರಕಾರ ಒಂದು ಚಿಕ್ಕ ಸೂತ್ರ, ಮಂತ್ರಧಾರಣೆ ಮಾಡುವುದರಿಂದ ಕರ್ಮಗಳು ನಾಶ ಹೊಂದುತ್ತವೆ. ಒಂದು ಚಿಕ್ಕ ಕಿಡಿ ಹತ್ತಿಯ ರಾಶಿಯನ್ನು ಭಸ್ಮ ಮಾಡಲು ಸಾಕಾಗುವುದಿಲ್ಲವೇ ? ಅದೇ ರೀತಿ ಒಂದು ಅತಿ ಚಿಕ್ಕ ಮಂತ್ರವು ಕೂಡಾ ಕರ್ಮಗಳನ್ನು ನಾಶಗೊಳಿಸುವಲ್ಲಿ ಸಹಾಯಕವಾಗುತ್ತದೆ.

ರಾಗ-ದ್ವೇಷಾದಿಗಳು ಮನಸ್ಸನ್ನು ಅಮಂಗಲಗೊಳಿಸುತ್ತವೆ. ನೀವು ನಿಮ್ಮ ಮನಸ್ಸನ್ನು ಮಂಗಲಮಯವಾಗಿ ಮಾಡುವ ವಿಧಿಯನ್ನು ತಮ್ಮದಾಗಿಸಿಕೊಳ್ಳಿರಿ. ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಣಮೋಕಾರ ಮಂತ್ರ ಮತ್ತು ಅರ್ಹಂತರ ಜಪ ಮಾಡಿರಿ. ಭಗವಾನ್ ಆದಿನಾಥರ ಪುತ್ರಿಯರಾದ ಬ್ರಾಹ್ಮೀ ಮತ್ತು ಸುಂದರೀ ಇವರಿಗೆ ಅಕ್ಷರ ಜ್ಞಾನ ಮಾಡಿಸಿದರು. ಆಗ ಪ್ರಾರಂಭದಲ್ಲಿ 'ಅರ್ಹಂ' ಕಲಿಸಿದರು. 'ಓಂ ನಮಃ ಸಿದ್ಧೇಭ್ಯಃ' ಕಲಿಸಿದರು. ಅವರಿಗೆ ಸಾಧನಾ ಮಾರ್ಗವನ್ನು ಬೋಧಿಸಿದರು. ಸಾಧನೆಯಿಲ್ಲದೆ ಕಲ್ಯಾಣವಾಗದು.

ಒಬ್ಬ ವ್ಯಕ್ತಿ ಸಮುದ್ರದ ಕಿನಾರೆಯಲ್ಲಿ ಕುಳಿತುಕೊಂಡು, ಕೈಯಲ್ಲೊಂದು ಈಜುವ ವಿಧಾನದ ಪುಸ್ತಕವನ್ನು ಹಿಡಿದು ಓದುತ್ತಾ ಹೇಳುತ್ತಾನೆ. ''ನೀರಿಗೆ ಹೀಗೆ ಧುಮುಕಬೇಕು, ಹೀಗೆ ಕೈ ಆಡಿಸಬೇಕು, ಕಾಲುಬಡಿಯುತ್ತಾ ಈಜಾಡಬೇಕು'' ಎಂದು. ಸಮುದ್ರದ ತೆರೆಗಳು ಎಷ್ಟೊಂದು ಅಗಾಧವಿರುತ್ತವೆಂದರೆ ಪುಸ್ತಕವನ್ನೋದಿ ನೀರಿಗಿಳಿಯಿತೆಂದಾದರೆ ಅತ್ತ ಪುಸ್ತಕವೂ ಮುಳುಗುತ್ತದೆ; ಇತ್ತ ಇವನೂ ನೀರಿನಲ್ಲಿ ಮುಳುಗಿ ಹೋಗುತ್ತಾನೆ. ಎಲ್ಲಿಯವರೆಗೆ ನಾವು ಸ್ವಯಂ ಸಾಧನೆ, ಸ್ವಯಂ ಪ್ರಯೋಗ ಮಾಡುವುದಿಲ್ಲವೋ ಅಲ್ಲಿಯವರೆಗೆ ನಮಗೆ ಈಜು ಬಾರದು. ಇದಕ್ಕೆ ಹೇಳುವುದು ವಿಜ್ಞಾನ ಎಂದು. ಎಲ್ಲಿ ಕ್ರಿಯೆ (ಪ್ರಾಕ್ಟಿಕಲ್) ಇರುತ್ತದೋ ಅಲ್ಲಿ ವಿಜ್ಞಾನ ಇರುತ್ತದೆ. ಅದು ವೀತರಾಗ ವಿಜ್ಞಾನ. ಇದರಲ್ಲಿ ಸ್ವಯಂ ಮಾಡು



ವುದಕ್ಕೇ ಮಹತ್ವವಿರುವುದು. ಪಾಕಶಾಸ್ತ್ರ ಪುಸ್ತಕ ಓದುವುದರಿಂದ ಹೊಟ್ಟೆ ತುಂಬಲು ಸಾಧ್ಯವಿದೆಯೇ ?

ಒಬ್ಬ ಮನುಷ್ಯ ಅನಾರೋಗ್ಯಕ್ಕೆ ತುತ್ತಾದ. ಚಿಕಿತ್ಸಕನು ಒಂದು ಚೀಟಿಯಲ್ಲಿ ಔಷಧಿ ಹೆಸರನ್ನು ಬರೆದು ''ಇದನ್ನು ನೀರಿನೊಂದಿಗೆ ನುಂಗಬೇಕು'' ಎಂದು ಹೇಳಿ ಕೊಟ್ಟನು. ಸರಿ ಎಂದು ಒಪ್ಪಿಕೊಂಡ ರೋಗಿಯು ಮನೆಗೆ ಬಂದು ನೀರಿನೊಂದಿಗೆ ಆ ಚೀಟಿಯನ್ನು ನುಂಗಿದ. ಕಾಯಿಲೆ ಗುಣವಾಗಲಿಲ್ಲ, ಮತ್ತೆ ಚಿಕಿತ್ಸಕನ ಬಳಿಗೆ ಬಂದ. ಆಗ ಹೊಸ ಔಷಧಿ ಬರೆದುಕೊಡಲು ಹಳೆಯ ಔಷಧಿಯ ಚೀಟಿಯನ್ನು ಡಾಕ್ಟರ್ ಕೇಳಿದ. ಆಗ ರೋಗಿ ಅದನ್ನು ನಾನು ನುಂಗಿಬಿಟ್ಟೆ ಎಂದನು. ಅದಕ್ಕೆ ಡಾಕ್ಟರ್ ಆಶ್ಚರ್ಯ ವ್ಯಕ್ತಪಡಿಸುತ್ತಾ! ''ಅರೆ, ಆ ಚೀಟಿಯನ್ನು ಯಾರು ನುಂಗಲು ಹೇಳಿದರು? ನಾನು ಹೇಳಿದ್ದು ಅದರಲ್ಲಿ ಬರೆದ ಔಷಧಿಯನ್ನು ನೀರಿನೊಂದಿಗೆ ನುಂಗಲು'' ಎಂಬುದಾಗಿ ಹೇಳಿದರು.

ಕೇವಲ ಓದುವುದರಿಂದ ಜ್ಞಾನ ಉಂಟಾಗುವುದಿಲ್ಲ, ಸ್ವಲ್ಪಮಟ್ಟಿಗೆ ಪ್ರಾಕ್ಟಿಕಲ್, ಸಾಧನೆ, ಧ್ಯಾನ-ಕ್ರಿಯೆ ಕೂಡಾ ಮಾಡಬೇಕಾಗುತ್ತದೆ. ರಾತ್ರಿ ಹಗಲು ಇಪ್ಪತ್ತನಾಲ್ಕು ಗಂಟೆ ಈ ಶರೀರದ ಬಗ್ಗೆ ನೋಡುತ್ತೀರಿ; ಆಹಾರದ ಬಗ್ಗೆ ಯೋಚಿಸುತ್ತೀರಿ, ನಿದ್ರೆಯ ಕುರಿತು ತಲೆಕೆಡಿಸಿಕೊಳ್ಳುತ್ತೀರಿ. ಆದರೆ ಆತ್ಮನ ಬಗ್ಗೆ ಏನಾದರೂ ಯೋಚನೆಯಿದೆಯೇ? ಅದಕ್ಕೂ ಸ್ವಲ್ಪ ಸಮಯ ತೆಗೆದಿರಿಸಿಕೊಳ್ಳಿ. ಅದು ಕೂಡಾ ಆವಶ್ಯಕವಲ್ಲವೇ ?

ಮನಸ್ಸನ್ನು ಮಂಗಲಮಯವಾಗಿ ಮಾಡಿಕೊಳ್ಳಿ. ಆಗ ನಿಮ್ಮ ಸುತ್ತಮುತ್ತಲ ವಾತಾವರಣ ಕೂಡಾ ಮಂಗಲಮಯವಾಗುತ್ತದೆ. ಅದಿಲ್ಲವಾದರೆ ನಿಮ್ಮ ಒಳಗಡೆ ರಾಗ-ದ್ವೇಷ ಸೇರಿಕೊಂಡು ಮನಸ್ಸನ್ನು ಅಮಂಗಲ ಮಾಡುತ್ತದೆ. ಆಚಾರ್ಯರು ಒಂದುಕಡೆ ಹೀಗೆ ಬರೆದಿದ್ದಾರೆ:- ''ಎಲ್ಲಿ ಮೊಸಳೆ ದೊಡ್ಡ ದೊಡ್ಡ ಮೀನುಗಳೆಲ್ಲಾ ಸುತ್ತಾಡುತ್ತವೋ ಅಲ್ಲಿಗೆ ಚಿಕ್ಕ ಚಿಕ್ಕ ಮೀನುಗಳು ಬರುವುದೇ ಇಲ್ಲ, ಹಾಗೆಯೇ ಮನಸ್ಸಿನಲ್ಲಿ ರಾಗ-ದ್ವೇಷಗಳೆಂಬ ಮೊಸಳೆ-ದೊಡ್ಡ ಮೀನುಗಳು ಸುಳಿದಾಡುತ್ತಿದ್ದರೆ ಸದ್ಗುಣಗಳು ಅಲ್ಲಿಗೆ ಬರಲು ಹೇಗೆ ಸಾಧ್ಯ ? ಆದ ಕಾರಣ ರಾಗ-ದ್ವೇಷಗಳನ್ನು ದೂರ ಮಾಡಲು ಪ್ರಯತ್ನಿಸಬೇಕು.

---

## ವಿದ್ಯಾನಂದ ವಚನಾಮೃತ

*ಎಲ್ಲ ಮರಗಳಲ್ಲೂ ಹಣ್ಣು ಹಂಪಲು ಬಿಡುವುದುಂಟು. ಆತ್ಮಹಿತದಲ್ಲಿ ಪ್ರವೃತ್ತನಾಗುವುದೇ ಮನುಷ್ಯ ಜನ್ಮದ ಫಲ ಎಂದು ಆಚಾರ್ಯರು ಹೇಳಿರುವರು. ಮನುಷ್ಯ ಮಾತ್ರವೇ ಆತ್ಮಚಿಂತನೆ ಮಾಡಬಲ್ಲನು; ಇದು ಜ್ಞಾನದ ಫಲ.*

-೧೨-

# ಪ್ರಾಚೀನ ಕರ್ಮ ಬಲವಂತವಾದುದು

ಮಹಾನುಭಾವರೇ ! ತಾವೀಗ ಆರ್ಯಾ ಛಂದಸ್ಸಿನಲ್ಲಿರುವ ಗಾಥೆಯ ಸುಸ್ವರ ಪಾಠವನ್ನು ಕೇಳಿದಿರಿ. ಆರ್ಯಾ ಛಂದಸ್ಸು ಕೋಮಲವಾಗಿರುತ್ತದೆ. ನೀರು ಕೂಡಾ ಕೋಮಲವೇ. ಅದು ಪರ್ವತಗಳನ್ನು ಸೀಳಿ ಜಲಪಾತದ ರೂಪದಲ್ಲಿ ಹರಿಯುತ್ತಾ ಎಲ್ಲರ ಬಾಯಾರಿಕೆಯನ್ನು ಶಾಂತಗೊಳಿಸುತ್ತದೆ. **ವಾಣಿಯಲ್ಲಿ ಕೋಮಲತೆಯ ಆವಶ್ಯಕತೆಯಿರುತ್ತದೆ. ಕೋಮಲತೆಯಿಂದ ಕರ್ಮಗಳು ಕೂಡಾ ಅಳಿದುಹೋಗುತ್ತವೆ.** ಕ್ಷಮಾ, ಮಾರ್ದವ, ಆರ್ಜವದಿಂದ ಕೋಮಲತೆ ಉತ್ಪನ್ನವಾಗುತ್ತದೆ. ಆರ್ಯಾ ಛಂದಸ್ಸು ಅಥವಾ ವೃತ್ತದಲ್ಲಿ ನಾಲ್ಕು ಚರಣಗಳಿರುತ್ತವೆ. ನಾಲ್ಕು ಚರಣಗಳಲ್ಲೂ ಕ್ರಮಶಃ ಹನ್ನೆರಡು, ಹದಿನೆಂಟು, ಹನ್ನೆರಡು ಮತ್ತು ಹದಿನೈದು ಮಾತ್ರೆಗಳಿರುತ್ತವೆ. ಆಚಾರ್ಯರು ಇದನ್ನು ಹಾಡಲು ವಿಶಿಷ್ಟ ಲಯವನ್ನು ಹೇಳಿದ್ದಾರೆ. ಪ್ರಥಮ ಚರಣ(ಹನ್ನೆರಡು ಮಾತ್ರೆ)ವು ಹಂಸದ ಗತಿಯಂತಿರುತ್ತದೆ. ಅದನ್ನು ಕುಲೀನ ಸ್ತ್ರೀಯ ಮಂದಗತಿಯಲ್ಲಿ ಹಾಡಬೇಕು. ದ್ವಿತೀಯ ಚರಣ (ಹದಿನೆಂಟು ಮಾತ್ರೆ) ಸಿಂಹದ ಗತಿಯಂತಿರುತ್ತದೆ. ಅದನ್ನು ಸೈನಿಕರ ತೀವ್ರ ಗತಿಯಿಂದ ಹಾಡಬೇಕು. ತೃತೀಯ ಚರಣ (ಹನ್ನೆರಡು ಮಾತ್ರೆ) ಸಾಧುಗಳ ಗತಿಯಂತಿರುವುದು. ಅದನ್ನು ರಾಜರಂತೆ ಗಂಭೀರ ಗತಿಯಿಂದ ಹಾಡಬೇಕು. ಸಾಧುಗಳು ಈರ್ಯಾಪಥ ಶುದ್ಧಿಗಾಗಿ ಸಾವಧಾನದಿಂದ ಮೆಲ್ಲಮೆಲ್ಲನೆ ನಡೆಯುತ್ತಾರೆ. ತೃತೀಯ ಚರಣವನ್ನು ಅದೇರೀತಿ ಮೆಲ್ಲ ಮೆಲ್ಲನೆ ಹಾಡಬೇಕು. ಚತುರ್ಥ ಚರಣವನ್ನು (ಹದಿನೈದು ಮಾತ್ರೆ) ಸರ್ಪದ ಗತಿಯಂತೆ ಹಾಡಬೇಕು. ಸರ್ಪವಾದರೋ ಹೊರಗಡೆ ಸುರುಳಿ-ಸುರುಳಿಯಾಗಿ ಸುತ್ತಿಕೊಂಡು ಚಲಿಸುತ್ತದೆ. ಆದರೆ ಯಾವಾಗ ಅದು ತನ್ನ ಬಿಲವನ್ನು ಸೇರುತ್ತದೋ ಆಗ ನೇರವಾಗಿ ಒಳಗಡೆ ನುಗ್ಗುತ್ತದೆ. ಅಲ್ಲಿ ಅದು ಸುರುಳಿ ಸುತ್ತಿ ಒಳಗಡೆ ಹೋಗುವಂತಿಲ್ಲ.

**ಪಢಮಂ ಮಿ ಹಂಸಲಿಂ ಬೀಏ ಸಹಿಸ್ಸ ವಿಕ್ಕಮಂ ಜಾ ಅ ।**
**ತೀಏ ಗಆವರ ಅಹಿವರ ಲುಲಿಅಂ ಚಉತ್ಥರ ಗಾಹಾ ॥**

ಆಚಾರ್ಯ ಕುಂದಕುಂದರು ಆರ್ಯಾ ಛಂದಸ್ಸಿನ ಗತಿಯ ನಿರ್ದೇಶ ಮಾಡುತ್ತಾ ಹೀಗೆ ಹೇಳಿದ್ದಾರೆ;- ಯಾವಾಗ ಮನುಷ್ಯನು ನಿಜ (ಸತ್ಯ)ದಲ್ಲಿ ನಡೆಯಬೇಕಾಗುತ್ತದೋ ಆಗ ಸೀದಾ (ನೇರವಾಗಿ) ಹೋಗಬೇಕಾಗುತ್ತದೆ. ವಕ್ರತೆ, ಸುರುಳಿ ಸುತ್ತುವಿಕೆ ಎಂಬುದು ಹೊರಗಡೆ ಮಾತ್ರ ಇರುತ್ತದೆ. ಆಗಲೇ ಅವನು ಆತ್ಮನಲ್ಲಿ ಮಗ್ನನಾಗಿರಬಲ್ಲನು.''

ಇಂದಿನ ನಮ್ಮ ಪ್ರವಚನಕ್ಕೆ ಶಾಲೆಯ ಬಾಲಿಕೆಯರು ಬಂದಿರುತ್ತಾರೆ. ನಮ್ಮ ಗ್ರಂಥಗಳಲ್ಲಿ ಕನ್ಯೆಯರನ್ನು ಮಾಂಗಲಿಕರೆಂದು ಮನ್ನಿಸಲಾಗಿದೆ. ಅವರು ಕೈಯಿಂದ ನೂಲು



ತೆಗೆದು, ಅದರಿಂದ ಕಟ್ಟಿದ ಮಾಲೆಯನ್ನು ಹಿಡಿದು ಜಪ ಮಾಡುವುದರಿಂದ ಕಾರ್ಯಸಿದ್ಧಿಯಾಗುತ್ತದೆ. ಅಲಂಕೃತ ಕನ್ಯೆಯಿಂದ ಕಾರ್ಯವನ್ನು ಪ್ರಾರಂಭಿಸುವುದು ಶುಭವೆಂದು ಪರಿಗಣಿಸಲಾಗಿದೆ. ಬ್ರಾಹ್ಮೀ ಮತ್ತು ಸುಂದರೀ ಇವರು ನಮ್ಮ ಸಂಸ್ಕೃತಿಗೆ ಆದರ್ಶಪ್ರಾಯರು. ಆದರೆ ಇಂದು ಒಬ್ಬ ಕನ್ಯೆಯ ಜನ್ಮವಾಯಿತೆಂದಾದರೆ ಮನೆಯಲ್ಲಿ ಬೇಸರದ ವಾತಾವರಣ ತುಂಬಿಕೊಳ್ಳುತ್ತದೆ. ತಂದೆ-ತಾಯಿಯರೂ ಖಿನ್ನರಾಗುತ್ತಾರೆ. ಪುತ್ರ ಜನನವಾದರೆ ಮಾತ್ರ ಪ್ರಸನ್ನತೆ ಮೂಡುತ್ತದೆ. ಇಂತಹ ಮಿಥ್ಯಾಭಾವ ಉಂಟಾಗಬಾರದು. ದಕ್ಷಿಣ ಭಾರತದಲ್ಲಿ ''ಮೊಟ್ಟಮೊದಲು ಹುಟ್ಟು ಹೆಣ್ಣಾದರೆ ಅದು ತುಪ್ಪದ ರೊಟ್ಟಿ'' ಎಂಬ ಗಾದೆಯ ಮಾತಿದೆ. ನೀವು ಯಾವುದೇ ಹೆಣ್ಣನ್ನು ಮದುವೆ ಮಾಡಿಕೊಂಡು ಮನೆಗೆ ಕರೆತಂದಿದ್ದು ಅದರಿಂದ ಪ್ರಥಮ ಸಂತಾನ 'ಕನ್ಯೆ' ಆಯಿತೆಂದಾದರೆ ಅದರ ಋಣ ತೀರಿತೆಂದೇ ಅರ್ಥ. ಆದ ಕಾರಣ ಕನ್ಯೆಯ ಹುಟ್ಟು ಕೆಟ್ಟದ್ದೆಂದು ಸರ್ವಥಾ ತಿಳಿಯಬೇಡಿ.

'ಶರೀರಂ ವ್ಯಾಧಿ ಮಂದಿರಂ'- ನಮ್ಮ ಶರೀರವೆಂಬುದು ವ್ಯಾಧಿಗಳ ಗೂಡು. 'ಭಗವತೀ ಆರಾಧನೆ'ಯಲ್ಲಿ ಒಂದು ಉಲ್ಲೇಖ ಸಿಗುತ್ತದೆ. ಅದೇನೆಂದರೆ ನಮ್ಮ ಶರೀರಕ್ಕೆ ಐದುಕೋಟಿ, ಅರವತ್ತೆಂಟು ಲಕ್ಷ, ತೊಂಬತ್ತಾರು ಸಾವಿರ, ಐನೂರ ಎಂಭತ್ನಾಲ್ಕು ವಿಧದ ರೋಗಗಳು ಬರಲು ಸಾಧ್ಯವಿದೆಯಂತೆ. ಆದರೆ ಯಾವಾಗ ಎಂತಹ ರೋಗ ಪ್ರಕಟವಾಗಬಲ್ಲದು ? ಇದನ್ನು ಹೇಳುವುದು ಕಷ್ಟ.

ಒಮ್ಮೆ ಸೇಠ್ ಒಬ್ಬರು ಅನಾರೋಗ್ಯಕ್ಕೆ ತುತ್ತಾದ. ಅವನು ಕಾಯಿಲೆ ಗುಣಪಡಿಸಲು ಒಬ್ಬ ರಾಜವೈದ್ಯನಲ್ಲಿಗೆ ಹೋದ. ರಾಜವೈದ್ಯ ಈ ರೋಗಿಯ ನಾಡಿ ನೋಡಿದ. ಇತರ ಪರೀಕ್ಷೆಗಳನ್ನೆಲ್ಲಾ ಮುಗಿಸಿದ ಬಳಿಕ ಔಷಧಿಯನ್ನು ಕೊಟ್ಟ. ಮತ್ತೆ ಅವನು ರೋಗಿಯೊಡನೆ ''ನೋಡು, ನಿನ್ನ ವಾತ, ಪಿತ್ಥ, ಕಫ ಈ ಮೂರೂ ಕೆಟ್ಟು ಹೋಗಿವೆ. ಆದ ಕಾರಣ ನೀನು ಕೆಲವು ಅತಿ ಬೆಲೆಯ ಔಷಧಿಗಳನ್ನು ಒಂದು ವರ್ಷ ಕಾಲ ತೆಗೆದುಕೊಳ್ಳಬೇಕಾಗುತ್ತದೆ'' ಎಂದನು. ಈ ಸಲಹೆಯನ್ನು ಸೇಠ್ ಸ್ವೀಕರಿಸಿದ. ಈ ಒಂದು ವರ್ಷದಲ್ಲಿ ಅವನ ಸಂಪೂರ್ಣ ಉತ್ಪತ್ತಿಯನ್ನು ಈ ಅತಿಬೆಲೆಯ ಔಷಧಿ ತಿಂದುಬಿಟ್ಟಿತು. ಆದರೆ ಕಾಯಿಲೆ ಸ್ವಲ್ಪವೂ ವಾಸಿಯಾಗಲಿಲ್ಲ, ಬೇಸರ ಹೆಚ್ಚುತ್ತಾ ಬಂತು. ಒಂದು ದಿನ ರಾಜ ವೈದ್ಯನು ಅತ್ತ ಹೋದ ಬಳಿಕ ರಸ್ತೆಯಲ್ಲಿ ನೆರೆಹೊರೆಯವನೊಬ್ಬ ಸೇಠ್‌ಜೀಗೆ ಸಿಕ್ಕಿದ. ಅವನು ಕೇಳಿದ- ''ನಿಮಗೇನಾಯಿತು ? ಬಹಳ ದುರ್ಬಲರಾಗಿದ್ದಂತೆ ತೋರುತ್ತದೆ. ಬೆಳಿಗ್ಗೆ ಯಾವಾಗಲೂ ಎಲ್ಲಿಗೆ ಹೋಗುತ್ತೀರಿ ?'' ಸೇಠ್‌ಜೀ ಅವನೊಡನೆ ತನ್ನ ರೋಗದ ಬಗ್ಗೆ ತಿಳಿಸಿ ''ಒಂದು ವರ್ಷ ಔಷಧೋಪಚಾರ ಮಾಡುತ್ತಾ ಕಳೆದೆ. ಆದರೆ ರೋಗ ಕಿಂಚಿತ್ತೂ ಗುಣವಾಗಲಿಲ್ಲ'' ಎಂದ. ಆಗ ನೆರೆಕೆರೆಯವನು ''ಅರೆ! ಏನು ಹೇಳುತ್ತಿದ್ದೀರಿ? ನಿಮಗೆ ಯಾವ ರೋಗವೂ ಇಲ್ಲ. ನಿಮ್ಮ ಗ್ರಹದೆಶೆ ಕೆಟ್ಟು ಹೋಗಿರಬೇಕು. ನೀವಾದರೋ ಈಗ ಒಬ್ಬ ಒಳ್ಳೆಯ ಜ್ಯೋತಿಷಿಯ ಬಳಿಗೆ ಹೋಗಿ ಪ್ರಶ್ನೆ ಕೇಳಿ. ಅವನು ನಿಮ್ಮ ಗ್ರಹ ನಕ್ಷತ್ರ ನೋಡಿ ಏನಾದರೂ ಪರಿಹಾರ ಹೇಳಬಲ್ಲನು'' ಎಂದನು.

ಸೇಠ್‌ಜೀ ಜ್ಯೋತಿಷಿಯ ಬಳಿಗೆ ಹೋದನು. ಜ್ಯೋತಿಷಿ ಇವನ ಜನ್ಮ ಪತ್ರಿಕೆಯನ್ನು ನೋಡಿ ''ನಿಮಗೆ ಈಗ ಕೆಟ್ಟ ಶನಿದಶೆ, ನಡೆಯುತ್ತಿದೆ. ನೀವು ಈ ಜಪವನ್ನು ಜಪಿಸುತ್ತಾ ಇರಿ, ಎಲ್ಲ ಸರಿಹೋಗುತ್ತದೆ'' ಎಂದು ಜಪ ಮಂತ್ರವನ್ನು ಹೇಳಿಕೊಟ್ಟು ಕಳುಹಿಸಿದ. ಸೇಠ್‌ಜೀ ವರ್ಷವಿಡೀ ಜಪವನ್ನೇನೋ ಮಾಡಿ ಮುಗಿಸಿದ. ಆದರೆ ಏನೊಂದೂ ವ್ಯತ್ಯಾಸವೂ ಕಾಣಲಿಲ್ಲ, ಅದರ ಬದಲಿಗೆ ರೋಗವಂತೂ ಹೆಚ್ಚುತ್ತಾ ಹೋಯಿತು. ಈಗ ಇವನ ಚಿಂತೆಯು ಅದರೊಂದಿಗೆ ಹೆಚ್ಚಾಯಿತು. ಮತ್ತೊಂದು ದಿನ ರಸ್ತೆಯಲ್ಲಿ ಅವನಿಗೆ ಇನ್ನೊಬ್ಬ ಪರಿಚಿತ ಸಿಕ್ಕಿದ. ಅವನು ಕೂಡಾ ಸೇಠ್‌ಜೀಯನ್ನು ನೋಡಿ- ''ಏನಯ್ಯಾ ತುಂಬಾ ಸೊರಗಿ ಹೋಗಿರುವೆ ? ಹೀಗೇಕಾಯಿತು ? ನಿನಗೆ ಯಾವುದ ಕೊರತೆಯೂ ಇಲ್ಲ, ನೀನು ಸುಸಂಪನ್ನ, ಏನಾಯಿತು ನಿನಗೆ ?'' ಎಂದು ಕೇಳಿದ. ಆದಕ್ಕೆ ಸೇಠ್‌ಜೀ ''ಏನು ಹೇಳಲಿ ! ನನ್ನ ಸ್ವಾಸ್ಥ್ಯ ಚೆನ್ನಾಗಿಲ್ಲ, ರಾಜವೈದ್ಯನಿಗೆ ತೋರಿಸಿದೆ. ಅವನು ಹೇಳಿದ ಔಷಧೋಪಚಾರವಾಯಿತು. ಪ್ರಯೋಜನವಾಗಲಿಲ್ಲ, ಮತ್ತೆ ಜ್ಯೋತಿಷಿಗೆ ತೋರಿಸಿದೆ. ಅವನು ಹೇಳಿದ ಜಪ ಮಾಡಿದೆ. ಆದರೆ ಏನೂ ಪ್ರಯೋಜನವಾಗಲಿಲ್ಲ'' ಎಂದ. ಇದನ್ನು ಕೇಳಿದ ಆ ವ್ಯಕ್ತಿ ''ಅಯ್ಯಾ, ನಿನಗೆ ಏನೋ ಭೂತ ಬಾಧೆಯಾಗಿದೆ. ಇದು ಖಂಡಿತವಾಗಿಯೂ ಹೊರಗಿನ ರೋಗ ಬಾಧೆಯಲ್ಲ, ನೀನು ಈ ಕೂಡಲೇ ಒಬ್ಬ ಮಂತ್ರವಾದಿಯ ಬಳಿಗೆ ಹೋಗಿ ಇದಕ್ಕೆ ಪರಿಹಾರ ಕಾಣು'' ಎಂದನು. ಸರಿ ಮಾಂತ್ರಿಕನ ಬಳಿಗೆ ಹೋಗಿ ಹೇಳಿಕೊಂಡ. ಆ ಮಾಂತ್ರಿಕನು ''ನಾನು ನಿಶ್ಚಯವಾಗಿಯೂ ನಿನ್ನ ತೊಂದರೆಗಳನ್ನು ನಿವಾರಿಸುತ್ತೇನೆ'' ಎಂದು ಭರವಸೆ ಕೊಟ್ಟು ಒಂದು ಕಡೆ ಬೆಂಕಿ ಉರಿಸಿದ, ಗಾಳಿ ಊದಿದ, ಹೊಗೆ ಎಬ್ಬಿಸಿದ, ಕಹಿ ಬೇವಿನ ಎಲೆಗಳನ್ನು ಇಳಿಸಿದ, ಮಯೂರ ಪಕ್ಷಿಯ ಗರಿಗಳನ್ನು ಬೀಸಿದ, ಲಿಂಬೆ ಮೆಣಸು ಇತ್ಯಾದಿಗಳನ್ನು ಎತ್ತಿ ಬೆಂಕಿಗೆ ಹಾಕಿದ. ಹೀಗೆ ಅನೇಕ ವಿಧದ ವಾಮಾಚಾರಗಳಿಂದ ಬೆರಗುಗೊಳಿಸಿದ. ಮೊದಲು ರಾಜವೈದ್ಯ, ಅನಂತರ ಜ್ಯೋತಿಷಿ ಸಾಕಷ್ಟು ಹಣ ಮಾಡಿದ್ದರು. ಈಗ ಮಂತ್ರವಾದಿಯೂ ಬಹಳಷ್ಟು ಧನ ಸಂಪಾದನೆ ಮಾಡಿದ. ಆದರೆ ರೋಗ ವಾಸಿಯಾಗಲೇ ಇಲ್ಲ.

ತುಂಬಾ ನೊಂದುಕೊಂಡಿರುವ ಸೇಠ್‌ಜೀ ಒಂದು ದಿನ ಹೀಗೆ ಜೀವಿಸುವುದರಿಂದ ಏನೂ ಲಾಭವಿಲ್ಲ, ಇನ್ನು ಸಾಯುವುದೇ ಒಳ್ಳೆಯದೆಂದು ನಿರ್ಧರಿಸಿ ಕಾಡಿಗೆ ಹೋದ. ಅಲ್ಲಿ ಬಿದ್ದು ಸಾಯಲು ಒಂದು ಆಳವಾದ ಪ್ರಪಾತ ಎಲ್ಲಿದೆ ಎಂದು ಹುಡುಕುತ್ತಿರುವಾಗ ಒಂದು ಮೂಲೆಯಲ್ಲಿ ಒಬ್ಬರು ಮುನಿರಾಜರು ಕಾಣಿಸಿದರು. ಇವರು ಜ್ಞಾನಿಗಳು, ತಪಸ್ವಿಗಳು ಇವರೊಡನೆ ತನ್ನ ಪರಿಸ್ಥಿತಿಯನ್ನು ಹೇಳಿಕೊಂಡನು. ಮುನಿರಾಜರು ಧ್ಯಾನ ಮಗ್ನರಾಗಿದ್ದರು. ಸೇಠ್‌ಜೀ ಅಲ್ಲಿ ಕುಳಿತಿದ್ದಂತೆ ಅವನ ಭಾವ, ಪರಿಣಾಮ ಬದಲಾಯಿತು. ಆತ್ಮಹತ್ಯೆಯ ವಿಚಾರ ಹೊರಟೇ ಹೋಯಿತು. ಸ್ವಲ್ಪ ಹೊತ್ತಿನಲ್ಲಿ ಮುನಿರಾಜರು ಧ್ಯಾನದಿಂದ ಯಾವಾಗ ಎದ್ದರೋ ಅಷ್ಟರಲ್ಲಿ ಸೇಠ್‌ಜೀ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತನ್ನ ರೋಗದ ಬಗ್ಗೆ ಹೇಳಿಕೊಂಡ. ಯಾವುದೇ ರೀತಿಯಿಂದಲೂ ಗುಣವಾಗದ ಈ ರೋಗ



ದಿಂದ ದುಃಖಿತನಾದ ನನ್ನನ್ನು ಆಶೀರ್ವದಿಸಿ ಕಾಪಾಡಿರಿ ಎಂದು ಬೇಡಿಕೊಂಡಾಗ ಮುನಿರಾಜರು 'ಪ್ರಾಚೀನ ಕರ್ಮಗಳ ಕಾರಣದಿಂದ ಈ ರೋಗ ನಿನಗೆ ಅಂಟಿಕೊಂಡಿದೆ' ಎಂದು ಹೇಳಿದರು.

ವೈದ್ಯೋ ವದಂತಿ ಕಫ-ಪಿತ್ತ-ಮರುದ್ವಿಕಾರಾನ್ ।
ಜ್ಯೋತಿರ್ವಿದೋ ಗ್ರಹಗಣಂ ಪರಿಗಣಂ ಪರಿಕಲ್ಪಯಂತಿ ॥
ಭೂತೋಪದೃಷ್ಟಿ ಇತಿ ಭೂತವಿದೋ ವದಂತಿ ।
ಪ್ರಾಚೀನ ಕರ್ಮ-ಬಲವಾನ್ ಮುನಯೋ ವದಂತಿ ॥

ವೈದ್ಯರು ವಾತ-ಪಿತ್ತ-ಕಫದ ವಿಚಾರವಾಗಿ ಹೇಳಿ ಔಷಧಿ ಕೊಡುತ್ತಾರೆ. ಜ್ಯೋತಿಷಿಗಳು ಗ್ರಹಗಳ ಬಾಧೆಗಳನ್ನು ಹೇಳುತ್ತಾರೆ ಹಾಗೂ ರತ್ನ ಉಪಚಾರ ಇತ್ಯಾದಿಗಳ ಬಗ್ಗೆ ತಿಳಿಸುತ್ತಾರೆ. ಭೂತ ಬಾಧೆಯನ್ನು ದೂರಗೊಳಿಸುವವರು ಬೆಂಕಿ-ಹೊಗೆ ಎಬ್ಬಿಸಿ ಏನೇನೋ ಮಾಡುತ್ತಾರೆ. ಆದರೆ ಮುನಿರಾಜರು ಹೇಳುತ್ತಾರೆ. ''ನಿನ್ನ ಪ್ರಾಚೀನ -ಪೂರ್ವದಲ್ಲಿ ಮಾಡಿರುವ ಕರ್ಮಗಳ ಕಾರಣದಿಂದ ಈ ರೋಗ ಉಂಟಾಗಿದೆ. ಅದರ ಶಾಂತಿಗಾಗಿ ಧರ್ಮಧ್ಯಾನ ಮಾಡು. ನಿನ್ನ ಪೂರ್ವಕರ್ಮದ, ತೀವ್ರ ಪಾಪದ ಉದಯವಾಗಿದೆ, ಅದರ ಫಲ ರೂಪವಾಗಿಯೇ ಇದನ್ನು ನೀನು ಭೋಗಿಸುತ್ತಿರುವೆ. ನೀನು ನಿನ್ನ ಪೂರ್ವ ಜನ್ಮದಲ್ಲಿ ಯಾವನೋ ರೋಗಿಯೊಂದಿಗೆ ಕೆಟ್ಟದಾಗಿ ವರ್ತಿಸಿದ್ದೆ, ಅವನನ್ನು ತಿರಸ್ಕರಿಸಿದ್ದೆ, ಅವನಿಗೆ ಯಾವುದೇ ಸಹಾಯ ನೀಡಲು ನೀನು ಹಿಂಜರಿದಿದ್ದೆ, ಇದು ಅವೆಲ್ಲದರ ಫಲವಾಗಿದೆ'' ಇದನ್ನು ಕೇಳಿದ ಸೇಠ್‌ಜೀ ''ಪೂಜ್ಯರೇ, ಈಗ ಅದಕ್ಕೇನು ಉಪಾಯ ?'' ಎಂದು ಬೇಡಲು ಮುನಿರಾಜರು- ''ಈಗ ಮನಸ್ಸಿನಲ್ಲಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೋ, ಪರಿಣಾಮಗಳನ್ನು ವಿಶುದ್ಧವಾಗಿರಿಸು, ಭಗವಂತನ ನಾಮಸ್ಮರಣೆ ಮಾಡು'' ಎಂದರು. ಅದರಂತೆ ಸೇಠ್‌ಜೀ ಜಪ, ಧ್ಯಾನ, ತೀರ್ಥಯಾತ್ರೆ, ಸತ್ಸಂಗ ಮಾಡುತ್ತಾ ಬಂದನು. ಯಾವಾಗ ಕರ್ಮಗಳ ಉಪಶಮವಾಯಿತೋ, ಕರ್ಮಗಳ ನಿರ್ಜರೆಯಾಯಿತೋ ಆಗ ಅವನು ದಷ್ಟಪುಷ್ಟನಾದನು ಮತ್ತು ಸ್ವಾಸ್ಥ್ಯ ಉಂಟಾಯಿತು.

ನೀವು ಕೂಡಾ ಇದೇ ರೀತಿ ನಿತ್ಯವೂ ಈ ಗ್ರಹದ ಕಾರಣದಿಂದ ನನ್ನ ದಶೆ ಹಾಳಾಯಿತು. ಭೂತ ಪಿಶಾಚಿಗಳ ಬಾಧೆಯಿಂದ ಹೀಗೆ ತೊಂದರೆಗಳು ಬಂದವು. ವೈದ್ಯರು ಸರಿಯಾಗಿ ಪರೀಕ್ಷಿಸದೆ ಉಪಚಾರ ಮಾಡದೆ ಹಾನಿಯುಂಟಾಯಿತು. ಹೀಗೆಲ್ಲಾ ವಿಚಾರ ಮಾಡುತ್ತಿರಬಹುದು ಮತ್ತು ಇತರರ ಮೇಲೆ ದೋಷಾರೋಪಣ ಮಾಡಲೂ ಬಹುದು. ಆದರೆ ವಸ್ತುಸ್ಥಿತಿ ಅದೊಂದೇ ಅಲ್ಲ, ಅಂತರಂಗದಲ್ಲಿ ಕುಳಿತ ಅಶುಭಕರ್ಮಗಳು, ನಿಮ್ಮ ಸ್ವಯಂ ಕರ್ಮಗಳೇ ಉದಯಕ್ಕೆ ಬಂದು ನಿಮ್ಮನ್ನು ದುಃಖಿಗಳನ್ನಾಗಿ ಮಾಡುತ್ತವೆ, ರೋಗಿಗಳನ್ನಾಗಿ ಮಾಡುತ್ತವೆ.

ಒಬ್ಬ ಮಹಾಧನಿಕನಿದ್ದ ಅವನಲ್ಲಿ ಇಲ್ಲದುದು ಯಾವುದೂ ಇಲ್ಲ, ಎಲ್ಲವೂ ಇದೆ.

ಆದರೆ ಪೂರ್ವಕರ್ಮದ ಕಾರಣದಿಂದ ಅವನನ್ನು ರೋಗ ಬಾಧಿಸಿತೆಂದಾದರೆ ಡಾಕ್ಟರ್ ಹೇಳುತ್ತಾರೆ. ''ಸಕ್ಕರೆ ತಿನ್ನಬೇಡಿ, ತುಪ್ಪ ಕುಡಿಯಬೇಡಿ, ಬ್ಲಡ್ ಪ್ರೆಶರ್ ಹೆಚ್ಚಾಗುತ್ತದೆ, ರೋಗ ಉಲ್ಬಣಿಸಬಹುದು''ಇತ್ಯಾದಿ. ಎಲ್ಲ ಭೋಗ ಸಾಮಗ್ರಿಗಳು ಅವನ ಕಣ್ಣೆದುರಲ್ಲೇ ಇರುತ್ತವೆ, ಆದರೆ ಅವನು ಮಾತ್ರ ಅವುಗಳಾವುದನ್ನೂ ತಿನ್ನಲಾರ, ಅನುಭವಿಸಲಾರ.

ಒಬ್ಬ ಪ್ರಯಾಣಿಕನು ನಡೆದುಕೊಂಡು ಹೋಗುತ್ತಿದ್ದ. ದಾರಿಯಲ್ಲಿ ಅರಮನೆಯಿತ್ತು. ರಾಣಿ ಅರಮನೆಯ ಹೊರಗಡೆ ನಿಂತುಕೊಂಡು ಅಳುತ್ತಿದ್ದಳು. ಪ್ರಯಾಣಿಕನಿಗೆ ರಾಣಿ ಅಳುತ್ತಿರುವುದನ್ನು ಕಂಡು ಆಶ್ಚರ್ಯವಾಯಿತು. ಅಷ್ಟರಲ್ಲಿ ಅವನು ಒಬ್ಬ ಬಡವಿ ಅಳು ತ್ತಿರುವುದನ್ನು ಕೂಡಾ ನೋಡಿದನು. ಅತ್ತ ರಾಣಿ ಇತ್ತ ಬಡಮಹಿಳೆ ಏಕಕಾಲದಲ್ಲಿ ಅಳು ತ್ತಿರುವುದನ್ನು ಕಂಡಾಗ ವಿಷಯವೇನೆಂದು ತಿಳಿಯಲು ಸಾಧ್ಯವಾಗಲಿಲ್ಲ. ಮೊದಲು ಆ ರಾಣಿ ಏಕೆ ಅಳುತ್ತಿರುವುದೆಂದು ಕೇಳಿದ. ಅದಕ್ಕೆ ಅವಳು ''ನನಗೆ ಯಾವುದೇ ಸಂತಾನ ವಿಲ್ಲ, ನನ್ನ ಇದಿರಿನಲ್ಲಿ ಇಬ್ಬರು ಬಾಲಕರು ಮಣ್ಣಿನಲ್ಲಿ ಆಡುತ್ತಿದ್ದಾರೆ. ಅವರನ್ನು ನೋಡಿ ನನಗೆ ಅಂತಹ ಮಕ್ಕಳು ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು, ಸಂತಾನದ ಕೊರತೆಯಿಂದಾಗಿ ನನ್ನ ಸಂಪೂರ್ಣ ವೈಭವವು ವ್ಯರ್ಥವಾಗುತ್ತಿದೆ ಎಂದು ಯೋಚಿಸುತ್ತಿದ್ದೇನೆ'' ಎಂದಳು. ಆಗ ಆ ಪ್ರಯಾಣಿಕ ಬಡ ಮಹಿಳೆಯ ಸಮೀಪ ಬಂದು ಅವಳು ಅಳುತ್ತಿರುವ ಕಾರಣ ಕೇಳಿದ. ಅದಕ್ಕೆ ಆಕೆ ''ಈಗ ನನಗೆ ಕೆಲಸವಾಗಲಿ, ಉದ್ಯೋಗವಾಗಲಿ ಯಾವುದೂ ಇಲ್ಲ, ನನ್ನ ಈ ಎರಡು ಮಕ್ಕಳಾದರೋ ಹಸಿವೆಯಿಂದ ನರಳುತ್ತಿದ್ದಾರೆ. ನಾನು ಸ್ವಯಂ ಹಸಿವೆಯಿಂದ ಬಳಲುತ್ತಿದ್ದೇನೆ. ನಾನಾದರೋ ಹಸಿವೆಯನ್ನು ತಡೆದುಕೊಳ್ಳಬಲ್ಲೆ, ಆದರೆ ಆ ಚಿಕ್ಕ ಮಕ್ಕಳು ಹಸಿವೆಯನ್ನು ಹೇಗೆ ತಡೆಯಬಲ್ಲವು? ಇದನ್ನು ನೋಡಿ ನಾನು ದುಃಖಿತಳಾಗಿ ಅಳು ತ್ತಿದ್ದೇನೆ'' ಎಂದಳು. ಒಬ್ಬಳಿಗೆ ಸಂತಾನವಿಲ್ಲವೆಂಬ ಕಾರಣದಿಂದ ದುಃಖಿತಳು, ಅವಳು ನನಗೆ ಸಂತಾವಿದ್ದಿದ್ದರೆ ಮಕ್ಕಳನ್ನು ಸುಖದಿಂದ ಸಾಕುತ್ತಿದ್ದೆ ಎನ್ನುವಳು. ಇನ್ನೊಬ್ಬಾಕೆ ಸಂತಾ ನವಿದ್ದರೂ ಮಕ್ಕಳನ್ನು ಸಾಕುವಲ್ಲಿ ಅಸಮರ್ಥಳಾಗಿದ್ದೇನೆ, ಅವರಿಗೆ ಆಹಾರ ಕೊಡುವ ಶಕ್ತಿ ತನ್ನಲ್ಲಿಲ್ಲವಲ್ಲಾ ಎಂದು ದುಃಖಿತಳು. ಈ ಇಬ್ಬರ ಸ್ಥಿತಿಯನ್ನು ನೋಡಿದ ಪ್ರಯಾಣಿಕ ಅವರ ಮಾತುಗಳನ್ನು ಕೇಳಿ ದಂಗಾಗಿಬಿಟ್ಟ.

ಒಬ್ಬ ವ್ಯಕ್ತಿ ಬಡವನಾಗಿದ್ದು ಹಸಿವೆಯಿಂದ ಬಳಲುತ್ತಿದ್ದು, ಭೋಜನಕ್ಕೆ ಯಾವ ದಾರಿಯೂ ಇಲ್ಲದ ಕಾರಣದಿಂದ ದುಃಖಿತನಾಗಿದ್ದರೆ ಇನ್ನೊಬ್ಬ ವ್ಯಕ್ತಿ ಸಾಧನ ಸಂಪನ್ನತೆ ಯಿಂದ ವೈಭವಯುಕ್ತವಾಗಿದ್ದರೂ ರೋಗಗಳಿಗೆ ಬಲಿಯಾಗಿ ಆ ಕಾರಣದಿಂದ ತಿನ್ನುವು ದಕ್ಕೂ ಅಸಮರ್ಥನಾಗಿರುತ್ತಾನೆ. ಡಾಕ್ಟರರು ಅವನಿಗೆ ''ನೀನೇನಾದರೂ ತಿಂದುಬಿಟ್ಟೆ ಯಾದರೆ ಸತ್ತೇ ಹೋಗುವೆ '' ಎಂದು ಹೆದರಿಸುವ ಕಾರಣದಿಂದ ಅವನು ಏನನ್ನೂ ತಿನ್ನಲಾರ.

**ಪ್ರಾಚೀನ ಕರ್ಮ ಬಲವಾನ್ ಮುನಯೋ ವದಂತಿ ।**



''ನಿನ್ನ ಕರ್ಮ, ನಿನ್ನ ಪಾಪ ಕರ್ಮವೇ ನಿನಗೆ ಈ ಕಷ್ಟಗಳನ್ನು ಕೊಡುತ್ತಿದೆ'' ಎಂದು ಆಚಾರ್ಯರು ತಿಳಿಸಿಕೊಡುತ್ತಾರೆ.

**ಪುಣ್ಯ ಪಾಪ ಫಲ ಮಾಂಹಿ, ಹರಖ-ವಿಲಖೌ ಮತ್ ಭಾಈ ।**

ಪುಣ್ಯ ಮತ್ತು ಪಾಪ ಇವೆರಡೂ ಆಟಗಳಾಗಿವೆ, ಇವುಗಳಲ್ಲಿ ಹರ್ಷಿತನಾಗಲೂ ಬೇಡ, ದುಃಖಿಯಾಗಲೂ ಬೇಡ.

ಈ ಆಧುನಿಕ ಪ್ರಪಂಚದಲ್ಲಿ ನಡೆಯುತ್ತಿರುವ ಒಂದು ವಿಚಿತ್ರ ಸಂಗತಿಯನ್ನು ನೋಡಿ. ನಾಯಿಗಳು ಹವಾ ನಿಯಂತ್ರಿತ(ಏರ್ ಕಂಡೀಶನ್) ಕಟ್ಟಡಗಳಲ್ಲಿ ಮಲಗುತ್ತವೆ. ಕಾರಿನಲ್ಲಿ ತಿರುಗಾಡುತ್ತವೆ. ಅವುಗಳನ್ನು ಸಾಕಲು ಒಬ್ಬ ನೌಕರನಿರುತ್ತಾನೆ. ಅವುಗಳ ಸ್ನಾನಕ್ಕೆ ವಿಶೇಷ ಸಾಬೂನನ್ನು ಖರೀದಿಸಲಾಗುತ್ತದೆ. ಇದು ಅದರ ಪುಣ್ಯದ ಚಮತ್ಕಾರ. ಇನ್ನೊಂದು ಕಡೆ ಒಬ್ಬ ಮನುಷ್ಯ ಭಿಕ್ಷೆ ಬೇಡುತ್ತಿದ್ದಾನೆ ಮತ್ತು ಆ ನಾಯಿಗಳ ಮಾಲಿಕ ಅವನಿಗೆ ಏನನ್ನೂ ಕೊಡದೆ ಕೀಳಾಗಿ ಕಾಣುತ್ತಾನೆ. ನಾಯಿಗೆ ಪುರಸ್ಕಾರ, ಮನುಷ್ಯನಿಗೆ ತಿರಸ್ಕಾರ. ಹಾಗೆ ನೋಡಿದರೆ ಮನುಷ್ಯ ಪರ್ಯಾಯ ಎಲ್ಲಕ್ಕಿಂತ ಶ್ರೇಷ್ಠ. ಮಾನವ ಜನ್ಮವೇ ಶ್ರೇಷ್ಠ. ಆದರೆ ಅವನಿಗೆ ಕೂಡಾ ತಿರಸ್ಕಾರವುಂಟಾಗುತ್ತದೆ. ಅವನಿಗೆ ತನ್ನ ಹಸಿವೆಯನ್ನು ಇಂಗಿಸಲು ರೊಟ್ಟಿ ಸಿಗುತ್ತಿಲ್ಲ, ಅವನಿಗೆ ಯಾರೂ ಭಿಕ್ಷೆ ಕೊಡುವವರಿಲ್ಲ, ಭಿಕ್ಷೆ ನೀಡುವವನೊಬ್ಬನಿದ್ದರೂ ಅವನು ''ಏನು ಭಿಕ್ಷೆ ಬೇಡಲು ಬಂದೆಯಾ?'' ಎಂಬ ತಿರಸ್ಕಾರದ ಮಾತಿನೊಂದಿಗೆ ಭಿಕ್ಷೆ ನೀಡುತ್ತಾನೆ. ಆ ಭಿಕ್ಷೆ ಬೇಡುವವನು ಕೂಡಾ ತಿಳುವಳಿಕೆಯುಳ್ಳವನಾಗಿರುತ್ತಾನೆ. ಆದುದ ರಿಂದ ಅವನು ಹೇಳುತ್ತಾನೆ-

**ಭಿಕ್ಷುಕಾ ನೈವ ಯಾಚಂತಿ ಬೋಧಯಂತಿ ಗೃಹೇ-ಗೃಹೇ ।**
**ದೀಯತಾಮ್ ದೀಯತಾಮ್ ಯಾತಃ ಅದಾನಾತ್ ಫಲಂ ಇದೃಶಂ ॥**

''ನಾನು ಭಿಕ್ಷೆ ಬೇಡಲು ಬಂದಿಲ್ಲ, ನಾನು ಭಗವಂತನ ಒಂದು ಸಂದೇಶವನ್ನು ತಂದಿರುವೆನು. ಹಿಂದಿನ ಜನ್ಮದಲ್ಲಿ ನಾನು ದಾನ-ಪುಣ್ಯ, ಧರ್ಮ ಬಡವರ ಸೇವೆ, ಪರೋ ಪಕಾರ ಇತ್ಯಾದಿ ಯಾವ ಕಾರ್ಯಗಳನ್ನೂ ಮಾಡಲಿಲ್ಲ, ಅದರ ಫಲ ಸ್ವರೂಪವಾಗಿ ಇಂದು ಮನೆ ಮನೆಗೆ ಹೋಗಿ ಭಿಕ್ಷೆ ಬೇಡುತ್ತಿದ್ದೇನೆ. ನಿಮ್ಮಲ್ಲಿ ಇಷ್ಟೊಂದು ಧನ ಸಂಪತ್ತಿದೆ. ನೀವೂ ಕೂಡಾ ದಾನ ನೀಡಲು ಕಲಿಯಿರಿ, ಪರೋಪಕಾರ ಮಾಡಿರಿ. ಅದರಿಂದಾಗಿ ಮುಂದಿನ ಜನ್ಮದಲ್ಲಾದರೂ ನಿಮಗೆ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಬಾರದಿರಲಿ.''

''ನಾನು ಮನೆ-ಮನೆಗೆ ಹೋಗಿ ಭಗವಂತನ ಈ ಸಂದೇಶವನ್ನು ತಲುಪಿಸುತ್ತಿದ್ದೇನೆ.'' ಹೇಗೆಂದರೆ- ''ಹೇ ಭವ್ಯ ಸೇಠ್, ನಿನ್ನಲ್ಲಿ ಹಣವಿದ್ದರೆ ಔಷಧ ದಾನ, ಅಭಯದಾನ, ಆಹಾರ ದಾನ, ಜ್ಞಾನದಾನವನ್ನು ಕೈಗೊಂಡು ಪರೋಪಕಾರ ಮಾಡು. ಮುಂದೆ ಏನಾ

ಗುತ್ತದೆಂದು ಯಾರಿಗೆ ಗೊತ್ತು? ಈ ಸಂಪತ್ತು ಇದ್ದಕ್ಕಿದ್ದಂತೆ ಪರವಶವಾಗಬಹುದು, ಪ್ರಾಣ ಹಾರಿ ಹೋಗಬಹುದು. ಆಗ ಎಲ್ಲವನ್ನೂ ಬಿಟ್ಟು ಹೋಗಲೇಬೇಕಲ್ಲವೇ ?''

ಪರೋಪಕಾರಿಗಳನ್ನು ಕೂಡಾ ನಾವು ಮರೆಯಬಾರದು. ಒಬ್ಬ ಜೀವನು ಇನ್ನೊಬ್ಬ ಜೀವನಿಗೆ ಉಪಕಾರ ಮಾಡುತ್ತಾನೆಂದಾದರೆ ಅವನ ಆತ್ಮನ ಮೇಲೆ ಅನುಗ್ರಹ ಮಾಡುತ್ತಾನೆಂದು ತಿಳಿಯಬೇಕು. ಯಾವನಾದರೂ ನಮ್ಮಿಂದ ದಾನ ಸ್ವೀಕಾರ ಮಾಡಿದನೆಂದಾದರೆ ಅವನು ನಮಗೆ ಉಪಕಾರ ಮಾಡಿದನೆಂದೇ ಅರ್ಥ. ನಾವು ಯಾರಿಗಾದರೂ ಉಪಕಾರ ಮಾಡಿದರೆ, ಆ ಉಪಕಾರವನ್ನು ಅವರು ಸ್ವೀಕರಿಸಿದರೆಂದಾದರೆ ಅದು ನಮ್ಮ ಆತ್ಮನ ಮೇಲೆ ಉಂಟಾಗುವ ಉಪಕಾರ. ಅಲ್ಲಿ ನಾನು ಕೊಟ್ಟೆನೆಂದು ಅಭಿಮಾನ ಪಡುವುದಲ್ಲ, ಬದಲಾಗಿ ಅದರಿಂದ ನನ್ನ ಆತ್ಮನ ಮೇಲೆ ಉಪಕಾರವಾಯಿತು ಎಂದು ತಿಳಿಯಬೇಕು.

**ಅನುಗ್ರಹಾರ್ಥಂ ಸ್ವಸ್ಯಾತಿಸರ್ಗೋ ದಾನಮ್ ।**

ಇದು ನಮ್ಮ ಭಾರತೀಯ ತತ್ತ್ವಜ್ಞಾನದ ಪರಂಪರೆ. ಯಾವಾಗ ಯಾರಿಗೆ ಶುಭ-ಅಶುಭ ಕರ್ಮದ ಉದಯವಾಗುತ್ತದೆ ಎಂದು ತಿಳಿಯಲಾಗುವುದಿಲ್ಲ, ಆದಕಾರಣ ಯಾರನ್ನೂ ತಿರಸ್ಕರಿಸಬಾರದು. ಪರೋಪಕಾರಿಗಳಾಗಿರಿ, ಯಾರಿಗಾದರೂ ಉಪಕಾರ ಮಾಡಿ ಅವರ ಕಲ್ಯಾಣಕ್ಕೆ ನೀವು ನಿಮಿತ್ತರಾಗಿರಿ. ಒಬ್ಬ ವ್ಯಕ್ತಿ ಶಾಲೆ ತೆರೆಯುತ್ತಾನೆ. ಸಾವಿರಾರು ಮಕ್ಕಳು ಅಲ್ಲಿ ಕಲಿಯುತ್ತಾರೆ. ಒಬ್ಬ ವ್ಯಕ್ತಿ ಔಷಧಾಲಯ ತೆರೆಯುತ್ತಾನೆ, ಅಲ್ಲಿ ಸಾವಿರಾರು ರೋಗಿಗಳು ಔಷಧಿ ಸೇವಿಸಿ ನಿರೋಗಿಗಳಾಗುತ್ತಾರೆ. ಯಾರಲ್ಲಿ ಅನೇಕರಿಗೆ ಉಪಕಾರ ಮಾಡಬೇಕೆಂಬ ಭಾವನೆಯಿರುತ್ತದೋ, ಅದು ವ್ಯವಹಾರ ರೂಪದಿಂದ ಧರ್ಮವಾಗಿದ್ದು ವ್ಯವಹಾರಿಕ ಧರ್ಮವೆನಿಸುತ್ತದೆ. ಯಾರಿಗೆ ವ್ಯಾವಹಾರಿಕ ಜೀವನ ನಡೆಸಲು ಸಾಧ್ಯವಿಲ್ಲವೋ, ಅವನಿಗೆ ನಿಶ್ಚಯದ ಪ್ರಾಪ್ತಿ ಹೇಗೆ ಸಾಧ್ಯ ? ವ್ಯಾವಹಾರಿಕ ಜೀವನ ನಡೆಸುವುದು ಹೇಗೆ? ಅದೊಂದು ಕಲೆ ಎಂಬುದನ್ನು ನಮ್ಮ ಋಷಿ-ಮುನಿ-ಆಚಾರ್ಯರು ನಮಗೆ ಕಲಿಸಿಕೊಟ್ಟಿದ್ದಾರೆ. ಸಂಸಾರದ ಗತಿ ವಿಚಿತ್ರವಾದುದು.

ಯಾವುದೋ ಒಂದು ಹಳ್ಳಿಯಲ್ಲಿ ಯುಗಲ (ಪತಿ-ಪತ್ನಿ) ಸಂಸಾರ ಮಾಡುತ್ತಿದ್ದರು. ಪತಿ ಜಮೀನ್ದಾರನಾಗಿದ್ದ. ಆಸ್ತಿ-ಪಾಸ್ತಿ ತುಂಬಾ ಇದ್ದುದರಿಂದ ಸ್ವಾಭಾವಿಕವಾಗಿ ಜಗಳ-ಮೊಕದ್ದಮೆ ನಡೆಯುತ್ತಲೇ ಇತ್ತು, ಕೋರ್ಟ್-ಕಛೇರಿಗೆ ಹಾಜರಾಗಬೇಕಿದ್ದ ದಿವಸಗಳಲ್ಲಿ ಅದಕ್ಕೆ ಹೋಗದೆ ಇರುತ್ತಿದ್ದ, ವಕೀಲರಿಗಂತೂ ಅವರ ಫೀಸ್ ಕಟ್ಟುತ್ತಾ ದಂಗಾಗಿಬಿಟ್ಟಿದ್ದ. ಮನೆಯಲ್ಲಿದ್ದ ಪತ್ನಿ ಒಬ್ಬಳೇ ಇದ್ದುದರಿಂದ ಅನಾರೋಗ್ಯಕ್ಕೆ ತುತ್ತಾಗಿದ್ದಳು. ಒಂದು ದಿನ ಪತಿಯು ''ನಮಗೊಂದು ಗಂಡು ಮಗು ಹುಟ್ಟಿದ್ದರೆ ನಾನು ಅವನನ್ನು ವಕೀಲನನ್ನಾಗಿ ಮಾಡುತ್ತಿದ್ದೆ. ಅದರಿಂದ ಆಗಾಗ ಈ ವಕೀಲರಿಗೆ ಕೊಡುವ ಫೀಸ್ ಉಳಿಯುತ್ತಿತ್ತು'' ಎಂದು ಹೇಳಿದ. ಅದಕ್ಕೆ ಪತ್ನಿಯು ''ಹಾಗಲ್ಲ ನನಗೊಬ್ಬ ಮಗ ಹುಟ್ಟಿದ್ದರೆ ನಾನು ಅವನನ್ನು ಡಾಕ್ಟರನನ್ನಾಗಿ ಮಾಡುತ್ತಿದ್ದೆ. ಅದರಿಂದ ನನಗೆ ಮನೆಯಲ್ಲಿ ಉಪಚಾರವಾಗುತ್ತಿತ್ತು,



ನಾನಾದರೋ ಡಾಕ್ಟರ್ ಮನೆಗೆ ಬರಲು ಚಕ್ಕರ್ ಕೊಡುವುದರಿಂದಾಗಿ ಬೇಸರಗೊಂಡಿದ್ದೇನೆ'' ಎಂದಳು. ಪತಿಯು ಮಗನನ್ನು ವಕೀಲನನ್ನಾಗಿ ಮಾಡುವೆನೆಂದೂ, ಪತ್ನಿಯು ಆತನನ್ನು ಡಾಕ್ಟರನನ್ನಾಗಿ ಮಾಡುವೆನೆಂದೂ ಹೇಳುವ ಮೂಲಕ ಅವರೊಳಗೆ ಜಗಳವೇ ನಡೆಯುತ್ತಿತ್ತು, ಪ್ರತಿದಿನವೂ ಬಹಳ ಜೋರಾಗಿ ಇವರ ಜಗಳ ನಡೆಯುತ್ತಿದ್ದುದರಿಂದ ಸುತ್ತಮುತ್ತಲಿನ ಜನರು ಸೇರಿದರು. ಯಾರಿಗೂ ವಿಷಯ ಅರ್ಥವಾಗಲಿಲ್ಲ. ಆಗ ಒಬ್ಬ ವೃದ್ಧ ಮಹಿಳೆ ಈ ಜಗಳಾಡುವ ಸ್ತ್ರೀಯ ಸಮೀಪಕ್ಕೆ ಬಂದು ''ಮಗಳೇ, ನಿನ್ನ ಮಗ ಈಗ ಯಾವ ತರಗತಿಯಲ್ಲಿ ಓದುತ್ತಿದ್ದಾನೆ'' ಎಂದು ಕೇಳಿದಳು. ಆಗ ಆಕೆ ''ನಮಗೆ ಇನ್ನೂ ಮಗು ಹುಟ್ಟಲಿಲ್ಲ'' ಎಂದಳು.

ಈಗ ನೋಡಿ, ಮಗ ಹುಟ್ಟಲೇ ಇಲ್ಲ, ಆ ಹುಟ್ಟದ ಮಗನನ್ನು ವಕೀಲ ಮತ್ತು ಡಾಕ್ಟರನನ್ನಾಗಿ ಮಾಡುವ ಜಗಳದಲ್ಲಿ ಈ ಪತಿ-ಪತ್ನಿಯರು ತಲ್ಲೀನರಾಗಿದ್ದಾರೆ. ಇಲ್ಲದ ವಸ್ತುವಿನ ಬಗ್ಗೆ ಸಲ್ಲದ ಜಗಳ. ಇದೊಂದು ಪ್ರಪಂಚ. ಸಕಾಂಕ್ಷಯೇತ್ ಯಾವ ಮಿಥ್ಯಾ ಭಾವೀ ಯೋಜನೆಗಳು ರಚಿಸಲ್ಪಡುತ್ತವೋ, ಅವು ಕೂಡಾ ಪಾಪಬಂಧಕ್ಕೆ ಕಾರಣಗಳಾಗಿವೆ. ಆದುದರಿಂದ ಜೀವನವನ್ನು ಸುಂದರಗೊಳಿಸುವುದಕ್ಕಾಗಿ ಮಂಗಲಮಯವಾಗಿ ಮಾಡುವುದಕ್ಕಾಗಿ ಶಾಸ್ತ್ರಗಳಲ್ಲಿ, ಗ್ರಂಥಗಳಲ್ಲಿ ವಿಧಿಯನ್ನು ಹೇಳಲಾಗಿದೆ. ಅದನ್ನು ಸ್ವಲ್ಪವಾದರೂ ಅನುಸರಿಸಿದರೆ ಜೀವನವು ಸುಖಪ್ರದವಾಗಬಹುದು. ನಮ್ಮ ಆಚಾರ್ಯರು ಕೇವಲ ತಮ್ಮ ಜೀವನವನ್ನು ಮಾತ್ರ ಸುಖಪ್ರದವನ್ನಾಗಿ ಮಾಡುವ ಭಾವನೆಯುಳ್ಳವರಾಗಿರಲಿಲ್ಲ, ಬದಲಾಗಿ ಜಗತ್ತಿನ ಸಮಸ್ತ ಪ್ರಾಣಿಗಳ ಸುಖಕ್ಕಾಗಿ ಬಾಳುವ ಭಾವನೆ ಹೊಂದಿದವರಾಗಿದ್ದರು.

**ಸುಖೀ ರಹೇ ಜೀವ್ ಜಗತ್ ಕೇ ....... ।**
**ಕ್ಷೇಮಂ ಸರ್ವ ಪ್ರಜಾನಾಂ ............. ।**

ಸಕಲ ಪ್ರಜೆಗಳು ನಿರೋಗಿಗಳಾಗಲಿ, ಮನ-ವಚನ-ಕಾಯದಲ್ಲಿ ಶಾಂತಿ ನೆಲಸಲಿ. ಇದು ಎಂತಹ ಉಚ್ಚ ಭಾವನೆ ! ಕೇವಲ ಮನೆ-ಪರಿವಾರದಲ್ಲಿ ಅಲ್ಲ, ನೆರೆ-ಹೊರೆಯಲ್ಲಿ ಅಲ್ಲ, ಎಷ್ಟು ದೇಶಗಳಿವೆಯೋ, ಎಷ್ಟು ರಾಷ್ಟ್ರಗಳಿವೆಯೋ ಎಲ್ಲಿಯವರೆಗೆ ಜೀವನವಿದೆಯೋ, ಅಲ್ಲೆಲ್ಲ ಸುಖ ನೆಲೆಸಲಿ. ನಮ್ಮ ಆಚಾರ್ಯರ ಈ ದೃಷ್ಟಿ ಎಷ್ಟೊಂದು ಉದಾರವಾಗಿತ್ತು ! ಇಂದು ಧರ್ಮಜ್ಞಾನವಿಲ್ಲದಿರುವುದರಿಂದ ಬಹಳ ಸಂಕೀರ್ಣ ವೃತ್ತಿಯುಂಟಾಗಿದೆ. ಬೇರೆಯವರು ದುಃಖಿಗಳಾಗಿ ಇರುವುದನ್ನು ನೋಡಿ ಪ್ರಸನ್ನರಾಗಿರುವುದು ಮಾನವೀಯತೆಯಲ್ಲ, ಇಂದು ಮನುಷ್ಯನಲ್ಲಿ ಮಾನವೀಯತೆ ಇಲ್ಲವಾಗಿದೆ. ಮಾನವೀಯತೆ ಇಲ್ಲದವರು ಧರ್ಮಾತ್ಮರಾಗುವುದು ಹೇಗೆ ? ಧರ್ಮಾತ್ಮರಾಗಲು ಮಾನವೀಯತೆ ಇರಲೇಬೇಕು. ಕೇವಲ ಕ್ರಿಯಾಕಾಂಡವು ಧರ್ಮವಲ್ಲ.

ಯಾವಾಗ ಯಾರಿಗೆ ಯಾವುದು ಉದಯವಾಗುತ್ತದೆ, ಯಾವ್ಯಾವ ರೀತಿಯ ಚಿಂತೆಗಳು ಉದ್ಭವವಾಗುತ್ತವೆ ಎಂಬುದರ ಬಗ್ಗೆ ಯಾರಿಗಾದರೂ ಗೊತ್ತಿದೆಯೇ ?

ಒಬ್ಬ ವ್ಯಕ್ತಿ ಕಾಡಿನಲ್ಲಿ ಒಂದು ಮರದ ಮೇಲೆ ಕುಳಿತು ಆ ಮರದ ತುದಿಯನ್ನು ಕತ್ತರಿಸುತ್ತಿದ್ದ. ಇದ್ದಕ್ಕಿದ್ದಂತೆ ಆ ಕಾಡಿಗೆ ಬೆಂಕಿ ಹತ್ತಿತು. ಹುಲಿ, ಸಿಂಹ, ಜಿಂಕೆ, ಆನೆ, ಕೋತಿ ಮೊದಲಾದ ಪ್ರಾಣಿಗಳೆಲ್ಲ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ಓಡಿ ಹೋಗುತ್ತಿದ್ದವು. ಓಡುವ ಹೊತ್ತಿನಲ್ಲಿ ಒಂದು ಕೋತಿಯು ಮರದ ಕೆಳಗೆ ಬಿದ್ದು ಬೆಂಕಿಯಲ್ಲಿ ಉರಿದು ಹೋಯಿತು. ಇದನ್ನು ಮರದ ಮೇಲೆ ಕುಳಿತಿದ್ದ ವ್ಯಕ್ತಿ ನೋಡಿ ನಗುತ್ತಿದ್ದ. ಆಚಾರ್ಯರು ಆ ಮನುಷ್ಯನನ್ನು ಕುರಿತು ಹೇಳುತ್ತಾರೆ- ''ನೀನು ಇತರರ ಕಷ್ಟವನ್ನು ನೋಡಿ ನಗುತ್ತಿರುವೆ, ನೋಡು ಆ ಬೆಂಕಿ ನೀನು ಕುಳಿತಿರುವ ಮರದ ಹತ್ತಿರವೂ ಬರಲಿಕ್ಕಿದೆ. ನೀನು ಕೂಡಾ ಬೆಂಕಿಯಲ್ಲಿ ಸುಟ್ಟುಹೋಗಬಹುದು. ಈಗ ನಿನ್ನ ಯೋಚನೆ ಹೀಗಿರಬಹುದು- ''ನಾನು ಮರದ ತುದಿಯಲ್ಲಿದ್ದೇನೆ, ನನಗೇನೂ ಆಗಲಿಕ್ಕಿಲ್ಲ ಎಂದು. ಆದರೆ ಕಾಡಿನಲ್ಲಿ ನಾಲ್ಕು ಕಡೆಗಳಿಂದಲೂ ಬೆಂಕಿ ಆವರಿಸಿರುವುದರಿಂದ ಮಧ್ಯದಲ್ಲಿರುವ ನೀನು ಕುಳಿತ ಮರ ಬೆಂಕಿಯಿಂದ ಪಾರಾಗುವುದಾದರೂ ಹೇಗೆ ? ಎಷ್ಟರವರೆಗೆ ಸುರಕ್ಷಿತವಾಗಿರಲು ಸಾಧ್ಯ ? ಹಾಗೆಯೇ ಮನುಷ್ಯನು ನಾಲ್ಕು ಕಡೆಗಳಿಂದಲೂ ಪಾಪ ಕರ್ಮಗಳಿಂದ ಸುತ್ತುವರಿದಿದ್ದಾನೆ. ಅವನು ಎಲ್ಲಿಯವರೆಗೆ ಉಳಿಯಬಲ್ಲನು ?

**ಅಗ್ರೇ ವ್ಯಾಧಃ ಕರಧೃತಃ ಶರಃ ಪಾರ್ಶ್ವತೋ ಜಾಲಮಾಲಾ ।**
**ಪೃಷ್ಠೇ ವಹ್ನಿರ್ದಹತಿ ನಿತರಾಂ ವಾಮತೋ ಸಾರಮೇಯಾಃ ।**
**ಏಣೀ ಗರ್ಭಾದಲ ಸಗಮನಾ ಬಾಲಕೇ ರುದ್ಧಪಾದಾಃ ।**
**ಚಿಂತಾನಿಷ್ಟಾ ವದತಿ ಹರಿಣಂ ಕಿಂ ಕರೋಮಿ ? ಕ್ವಯಾಮಿ ? ॥**

ಜಗತ್ತಿನಲ್ಲಿ ಎಂದೂ ಚಿನ್ನದ ಜಿಂಕೆ ಹುಟ್ಟಿಲ್ಲ, ಆದರೂ ರಾಮನಂತಹ ಮಹಾಪುರುಷನು ಅದನ್ನು ಚಿನ್ನದ್ದೆಂದೇ ನಂಬಿ ಅದರ ಹಿಂದೆ ಓಡಿದ. ಲೋಭ ಕಷಾಯದ ವಶನಾದ ಅವನು ಅದರ ಹಿಂದೆ ಓಡಿ ಸೀತೆಯನ್ನೂ ಕಳೆದುಕೊಂಡನು. ಪರವಸ್ತುವಿನ ಹಿಂದೆ ಹೋಗಿ ರಾಮನು ಸೀತೆಯನ್ನು ಕಳೆದುಕೊಂಡರೆ ಇತ್ತ ಪರಸ್ತ್ರೀಯಾದ ಸೀತೆಯ ಹಿಂದೆ ಹೋದ ರಾವಣನು ತನ್ನ ಪ್ರಾಣವನ್ನೇ ಕಳೆದುಕೊಂಡನು. ಆದ ಕಾರಣ ಪರವಸ್ತುವಿನ ಬಗ್ಗೆ ಲೋಭ, ಲಾಲಸೆ, ಆಕಾಂಕ್ಷೆಯನ್ನು ಎಂದಿಗೂ ಮಾಡಬೇಡ. ಅದರಿಂದಾಗಿ ಜನ್ಮ ಜನ್ಮಾಂತರಗಳಲ್ಲಿ ದುಃಖಿಯಾಗಿಯೇ ಇರುವ ಪರಿಸ್ಥಿತಿ ಉಂಟಾಗದಿರಲಿ.

ಯಾವುದು ನನ್ನ ಹತ್ತಿರವಿದೆಯೋ, ಜೊತೆಯಲ್ಲಿದೆಯೋ ಅದು ಕೂಡಾ ನನ್ನದಲ್ಲ. ಸಮಯಸಾರದಲ್ಲಿ ಆಚಾರ್ಯರು ಹೀಗೆ ಹೇಳಿದ್ದಾರೆ:-

**ಜಹಣಾಮ ಕೋವಿ ಪುರಿಸೋ ಪರದವ್ವಮಿಣಂ ತಿ ಜ್ಞಾಣಿದುಂ ಮುಣದಿ ।**
**ತಹ ಸವ್ವೇ ಪರಭಾವೇ ಣಾದೂಣ ವಿಮುಂಚದೇ ಣಾಣೀ ॥**

ಲೋಕದಲ್ಲಿ ಯಾವನೇ ಪುರುಷನು 'ಇದು ಪರದ್ರವ್ಯ' ಎಂದು ತಿಳಿದು ಹೇಗೆ



ಅದನ್ನು ತ್ಯಾಗ ಮಾಡುತ್ತಾನೋ, ಅದೇ ಪ್ರಕಾರ ಜ್ಞಾನೀ ಪುರುಷನು ಸಮಸ್ತ ಪರಭಾವಗಳನ್ನು 'ಇವು ಪರಭಾವಗಳು' ಎಂದು ತಿಳಿದು ಅವುಗಳನ್ನು ಬಿಟ್ಟುಬಿಡುತ್ತಾನೆ.

ಜ್ಞಾನಿ ಯಾರು ? ಯಾವನು ಪರವಸ್ತುವನ್ನು ಪರವಸ್ತುವೆಂದೇ ತಿಳಿಯುತ್ತಾನೋ, ಅದರ ಮೇಲೆ ಲಾಲಸೆ ಹೊಂದದಿರುತ್ತಾನೋ ಅವನೇ ಜ್ಞಾನಿ. ಆದರೆ ಯಾವುದು ತನ್ನ ಬಳಿ, ತನ್ನೊಂದಿಗೆ ಇದೆಯೋ, ಅದನ್ನು ಕೂಡಾ ಒಂದು ದಿನ ಬಿಟ್ಟುಹೋಗುತ್ತೇವೆ. ಅದು ಕೂಡಾ ನನ್ನದಲ್ಲವೆಂದ ಮೇಲೆ ನನ್ನದು ಯಾವುದು ? ಶರೀರವು ಜೊತೆಯಲ್ಲೇ ಬಂದುದಾಗಿದೆ, ಅದನ್ನು ಕೂಡಾ ಒಂದು ದಿನ ಬಿಟ್ಟು ಹೋಗಬೇಕಾಗುತ್ತದೆ. ಈ ಭಾವನೆ ಯಾರಲ್ಲಿದೆಯೋ ಅವನೇ ಜ್ಞಾನಿ.

ಇಷ್ಟೆಲ್ಲಾ ರಾಜ-ಮಹಾರಾಜರು, ಅವರ ಮಹಲುಗಳು ಕಟ್ಟಡಗಳು, ಧನಸಂಪತ್ತು, ಸಿಪಾಯಿಗಳು, ಸಿಂಹಾಸನಗಳು ಎಲ್ಲವೂ ಎಲ್ಲಿಗೆ ಹೋದವು ? ದುರ್ಬೀನು ಹಾಕಿ ನೋಡಿರಿ. ಈಗ ಆ ಮಹಲುಗಳಲ್ಲಿ ಬಾವಲಿಗಳು, ಪಾರಿವಾಳಗಳು ವಾಸಿಸುತ್ತಿವೆ. ಈಗ ಆ ಮಹಲುಗಳಲ್ಲಿ ಅವುಗಳೇ ಮಾಲಿಕರು.

ವ್ಯವಸಾಯದಲ್ಲಿ ಇಳುವರಿ ಕಡಿಮೆಯಾದಾಗ, ದೀವಾಳಿಯಾದ ಜನರು ತಮ್ಮ ಕಟ್ಟಡ-ಬಂಗಲೆಗಳನ್ನು ಮಾರಾಟ ಮಾಡುತ್ತಾರೆ. ಆಗ ಹೊಸ ಮಾಲೀಕರು ಅಲ್ಲಿಗೆ ಸಂತೋಷದಿಂದ ಬರುತ್ತಾರೆ. ಮಂಗಲ ಕಲಶ ಹಿಡಿದುಕೊಂಡು, ಓಲಗ ಬಾರಿಸಿಕೊಂಡು ಬಂಗಲೆಯೊಳಗೆ ಪ್ರವೇಶ ಮಾಡುತ್ತಾರೆ. ಬಹಳ ಪ್ರಸನ್ನತೆಯಿಂದ ''ಇದು ನಮ್ಮ ಬಂಗಲೆ, ಇದು ನಮ್ಮ ಕೊಠಡಿ'' ಎನ್ನುತ್ತಾರೆ. ವಾಸ್ತವವಾಗಿ ಇದು ಯಾರ ಕೊಠಡಿ, ಯಾರ ಬಂಗಲೆ ? ನಾಳೆ ನೀವು ಕೂಡಾ ಅವುಗಳನ್ನು ಬಿಟ್ಟು ಹೋಗಲೇ ಬೇಕು. ಈ ಕರ್ಮವು ಯಾರನ್ನೂ ಬಿಡುವುದಿಲ್ಲ, ಎಲ್ಲರ ಹಿಂದೆಯೂ ಕರ್ಮ ಅಂಟಿಕೊಂಡಿರುತ್ತದೆ. ಎಲ್ಲರೂ ಅದನ್ನು ಭೋಗಿಸಲೇ ಬೇಕು.

**ನಾಭುಕ್ತಂ ಕ್ಷೀಯತೇ ಕರ್ಮಂ, ಕಲ್ಪ ಕೋಟಿ ಶತೈರಪಿ ।**
**ಅವಶ್ಯಮೇವಂ ಭೋಕ್ತವ್ಯಂ, ಕೃತಕರ್ಮ ಶುಭಾಶುಭಮ್ ॥**

ಆದ ಕಾರಣ ಎಂದಿಗೂ ನಷ್ಟ ಉಂಟಾದಾಗ ಇಲ್ಲವೇ ದುಃಖ ಬಂದೊದಗಿದಾಗ ಅದನ್ನು ನೋಡಿ ಉಪವಾಸ ಮಾಡುವುದು ಸರಿಯಲ್ಲ. ಇಂದು ಮನುಷ್ಯನು ತನಗಾಗಿ ಅನೇಕ ಬಂಧನಗಳನ್ನು ತನ್ನೆದುರು ನಿಲ್ಲಿಸಿಕೊಂಡಿದ್ದಾನೆ. ಭಾರತದಿಂದ ಬಹಳಷ್ಟು ಇಲಿಗಳು, ಹಾವುಗಳು, ಕಾಗೆಗಳು ನೆರೆಹೊರೆಯ ದೇಶಗಳಿಗೆ ಪಾಸ್‌ಪೋರ್ಟ್ ಇಲ್ಲದೆ ಸಂಚರಿಸುತ್ತವೆ. ಅಲ್ಲಿಯ ಪಶು-ಪಕ್ಷಿಗಳು ಇಲ್ಲಿಗೆ ಬರುತ್ತವೆ. ಸೈಬೀರಿಯಾದ ಪಕ್ಷಿಗಳು ಭಾರತಕ್ಕೆ ಬರುತ್ತವೆ. ಅವುಗಳಿಗೆ ಪಾಸ್‌ಪೋರ್ಟ್ ಇಲ್ಲ, ವೀಸಾ ಇಲ್ಲ, ಹಿಂದೆ ಯಾವುದೇ ಸಿ.ಐ.ಡಿ. ತಂಡವಿಲ್ಲ. ಆದರೆ ಮನುಷ್ಯನಿಗೆ ಮಾತ್ರ ಅನೇಕ ಬಂಧನಗಳಿರುತ್ತವೆ. ''ಯಾವ ದೇಶದಿಂದ ಬಂದಿರಿ ? ಏಕೆ ಬಂದಿರಿ ?'' ಇತ್ಯಾದಿ ಪ್ರಶ್ನೆಗಳು ಕೇಳಲ್ಪಡುತ್ತವೆ. ಮನುಷ್ಯನು ತನ್ನ

ಮಾಯಾಚಾರದ ಕಾರಣದಿಂದ ಸ್ವಯಂ ಬಂಧನದಲ್ಲಿ ಸಿಕ್ಕಿಕೊಳ್ಳುತ್ತಾನೆ. ಅನಂತರ ಕಾನೂನಿನ ಬಂಧನದಿಂದ ದುಃಖಿಯಾಗುತ್ತಾನೆ.

ಒಬ್ಬ ವ್ಯಕ್ತಿ ಎಲ್ಲಿಗೋ ಹೋಗುತ್ತಿದ್ದಾನೆ. ಅವನೊಡನೆ ಈ ಕೆಲವು ಪ್ರಶ್ನೆಗಳನ್ನು ಕೇಳಲಾಗುತ್ತದೆ- ''ಎಲ್ಲಿ ವಾಸಿಸುತ್ತಿ? ಎಲ್ಲಿಂದ ಬಂದೆ ?'' ಇತ್ಯಾದಿ. ಅದಕ್ಕೆ ಅವನು ''ನಾನು ಒಂದು ಸಾಮಾನ್ಯ ಗಲ್ಲಿಯಿಂದ ಬರುತ್ತಿದ್ದೇನೆ'' ಎನ್ನುವನು. ಅವನು ಆ ಗಲ್ಲಿಯ ಹೆಸರು ಹೇಳುತ್ತಾನೆ. ಮತ್ತೊಮ್ಮೆ ಅವನು ದಿಲ್ಲಿಗೆ ಹೋಗುತ್ತಾನೆ. ಅಲ್ಲಿಯವರು ಅವನನ್ನು 'ಎಲ್ಲಿಂದ ಬಂದಿರಿ ?' ಎಂದು ಕೇಳಿದರೆ 'ನಾನು ಜಯಪುರದಿಂದ, ರಾಜಾಸ್ಥಾನದಿಂದ ಬಂದೆ' ಎನ್ನುವನು. ಒಂದು ವೇಳೆ ಅವನು ಭಾರತದಿಂದ ಹೊರದೇಶಕ್ಕೆ ಹೋದನೆಂದಾದರೆ 'ನಾನು ಭಾರತದಿಂದ ಬಂದೆ' ಎನ್ನುವನು. ಚಂದ್ರಲೋಕಕ್ಕೆ ಹೋದಾಗ ಇದೇ ಪ್ರಶ್ನೆಯನ್ನು ಕೇಳಿದರೆ 'ನಾನು ಪೃಥ್ವಿಯಿಂದ ಬಂದವ'ನೆನ್ನುವನು. ಮೊದಲು ಅವನು ಹೇಳುವುದು ತನ್ನ ಗಲ್ಲಿಯ ಹೆಸರು, ಆಮೇಲೆ ಪಟ್ಟಣದ ಹೆಸರು, ಅನಂತರ ತನ್ನ ದೇಶದ ಹೆಸರು. ಗಲ್ಲಿಯನ್ನೂ, ಪಟ್ಟಣವನ್ನೂ, ಕೊನೆಗೆ ಭಾರತ ದೇಶವನ್ನೂ ಅವನು ತನ್ನದೆಂದೇ ಹೇಳಿಕೊಳ್ಳುವನು. ಚಂದ್ರಲೋಕಕ್ಕೆ ಹೋದಾಗ ಗಲ್ಲಿ, ಪಟ್ಟಣ, ರಾಜ್ಯ, ದೇಶ ಎಲ್ಲವೂ ಬಿಟ್ಟು ಹೋಗುತ್ತದೆ. ಅಲ್ಲಿ ಇಡೀ ಪೃಥ್ವಿಯನ್ನೇ ಅವನು ತನ್ನದೆನ್ನುವನು. ಇಲ್ಲಿ ಭಾವನೆಯು ಎಷ್ಟೊಂದು ವ್ಯಾಪಕವಾಗಿದೆ ಎಂದು ಗುರುತಿಸಬಹುದು. ಆಚಾರ್ಯರು ಇಂತಹ ಎಲ್ಲ ಗೋಡೆಗಳನ್ನೂ ಮುರಿದು ಹೀಗೆ ಹೇಳಿದ್ದಾರೆ-

**''ಸಮತಾ ಸರ್ವಭೂತೇಷು.......... ।''**

ಆರ್ತ-ರೌದ್ರ ಧ್ಯಾನವನ್ನು ಬಿಟ್ಟು ಸಮತಾಭಾವದಿಂದ ವಿಶಾಲ ವಿಶ್ವವನ್ನು ನೋಡು. ಭವಿಷ್ಯದ ಪತ್ತೆಯಾಗುವುದಿಲ್ಲ. ಸತ್ತ ಮೇಲೆ ಯಾವ ಜೀವ ಎಲ್ಲಿ ಹುಟ್ಟುತ್ತದೆ ? ಎಲ್ಲಿಗೆ ಹೋಗುತ್ತದೆ ? ಗೊತ್ತಿಲ್ಲ. ಆದರೆ ಎಲ್ಲಿಗೆ ಹೋಗುತ್ತದೋ, ಎಲ್ಲಿ ಜನಿಸುತ್ತದೋ ಅದನ್ನು ತನ್ನದೆಂದು ತಿಳಿಯುತ್ತದೆ. ಇದು ನನ್ನ ಲೋಕ, ಇದು ನನ್ನ ಧರ್ಮ, ಇದು ನನ್ನ ಸಂಸ್ಕೃತಿ, ಇತ್ಯಾದಿ.

ಈಗ ಯಾವ ಚಿಕ್ಕದಾದ ಒಂದು ಜೀವನ ದೊರಕಿದೆಯೋ ಅದರಲ್ಲಿ ಸ್ವಲ್ಪ ಸಮಯವನ್ನಾದರೂ ಪರಮಾತ್ಮನ ಸ್ಮರಣೆಯಲ್ಲಿ ಕಳೆ, ಧರ್ಮಧ್ಯಾನದಲ್ಲಿ ತೊಡಗಿಸು, ತನ್ನ ಪರಿಣಾಮಗಳನ್ನು ಉಜ್ವಲಗೊಳಿಸು, ಧರ್ಮಮಯವನ್ನಾಗಿ ಮಾಡು, ''ನಾನು ಯಾರು ? ಎಂಬುದನ್ನು ಚಿಂತಿಸು, ಸತ್ತ ಮೇಲೆ ಎಲ್ಲಿಗೆ ಹೋಗುವೆ ? ನನ್ನ ಕರ್ತವ್ಯವೇನು ? ನಾನು ನನ್ನ ಕರ್ತವ್ಯಗಳನ್ನು ನಿಭಾಯಿಸಿರುವೆನೇ ? ನಾನು ಹೇಗೆ ನಡೆಯುತ್ತಿದ್ದೇನೆ ? ನನ್ನ ನೆರೆಹೊರೆಯವರು ನನ್ನಂತೆಯೇ ಹೇಳುತ್ತಿದ್ದಾರೆಯೇ? ವಾಸ್ತವವಾಗಿ ನನ್ನಲ್ಲೇನಾದರೂ ತಪ್ಪಿದೆಯೇ? ಹಾಗಿದ್ದರೆ ನಾನು ಸುಧಾರಿಸಿಕೊಳ್ಳಬೇಕು.'' ಪ್ರತಿನಿತ್ಯ ಪ್ರಾತಃಕಾಲದಲ್ಲಿ ಎದ್ದು ಯಾವ ವ್ಯಕ್ತಿಯು ಹೀಗೆ ಯೋಚಿಸುತ್ತಾನೋ, ಚಿಂತಿಸುತ್ತಾನೋ, ಅವನು ಸುಖಿಯಾಗಿರಬಲ್ಲನು,



ಅವನು ಪರಮಾತ್ಮನಾಗಬಲ್ಲನು, ಅವನು ಧರ್ಮಾತ್ಮನಾಗಬಲ್ಲನು. ಅವನ ಪರಿಣಾಮಗಳಲ್ಲಿ ನಿರ್ಮಲತೆ ಬರಬಹುದು, ಅವನು ಆರ್ತ-ರೌದ್ರ ಧ್ಯಾನದಿಂದ ಮುಕ್ತನಾಗಬಲ್ಲನು. ಪ್ರತಿನಿತ್ಯವೂ ನೀವು ''ನನ್ನ ಜೀವನದಲ್ಲಿ ನಾನು ಎಷ್ಟು ಪರೋಪಕಾರ ಮಾಡಿದ್ದೇನೆ; ನನ್ನ ಕಲ್ಯಾಣಕ್ಕಾಗಿ ಏನು ಮಾಡಿದ್ದೇನೆ ?'' ಎಂದು ವಿಚಾರಿಸಿಕೊಳ್ಳಿ,

ಮಹಾನುಭಾವರೇ, ಪ್ರಾಚೀನ ಕರ್ಮಗಳು ಬಹಳ ಬಲವಂತವಾದವುಗಳು. ಆದುದರಿಂದ ಆ ಕರ್ಮಗಳನ್ನು ಕಡಿದುಹಾಕಲು ಪರಿಣಾಮಗಳ ನಿರ್ಮಲತೆ, ಸಾಮಾಯಿಕ, ಧ್ಯಾನ, ಜಪ-ಜಾಪ, ಸ್ತುತಿ-ಸ್ತೋತ್ರ, ತೀರ್ಥಯಾತ್ರೆ, ಸತ್ಸಂಗ ಇತ್ಯಾದಿಗಳು ಸಹಾಯಕವಾಗಿವೆ, ನಿಮಿತ್ತವಾಗಿವೆ. ಧರ್ಮದ ಎರಡು ಶಬ್ದಗಳು ಕಿವಿಗೆ ಬಿದ್ದರೆ, ಹೃದಯದಲ್ಲಿ ಕುಳಿತರೆ ಪರಿಣಾಮಗಳಲ್ಲಿ ನಿರ್ಮಲತೆ ಬರಬಹುದು. ಒಂದು ಚಿಕ್ಕ ವಾಕ್ಯದಿಂದ, ಒಂದು ಶಬ್ದದಿಂದ ಕೂಡಾ, ಪ್ರಾಣಿಯ, ಮನುಷ್ಯನ ಉದ್ಧಾರವಾಗಬಹುದು. ಔಷಧಿಯ ಒಂದು ಚಿಕ್ಕ ಮಾತ್ರೆಯಿಂದಲೂ, ಒಂದು ಬಿಂದುವಿನಿಂದಲೂ ಮಹತ್ತರ ಲಾಭವಿದೆ. ರೋಗ ನಿವಾರಣೆಯಾಗುತ್ತದೆ. ಒಂದು ಚಿಕ್ಕ ನಿರ್ಮಲೀಕರಣದ ಔಷಧಿಯಿಂದ ದೊಡ್ಡಗಾತ್ರದ ನೀರು ಕೂಡಾ ಶುದ್ಧವಾಗುತ್ತದೆ. ಮನಸ್ಸಿನ ಶುದ್ಧತೆಗಾಗಿ, ಸ್ವಚ್ಛತೆಗಾಗಿ ನಾವು ನಮ್ಮನ್ನು ಗುರುತಿಸಿಕೊಳ್ಳಬೇಕು. ಯಾವನು ತನ್ನನ್ನು ತಾನು ತಿಳಿಯುತ್ತಾನೋ, ಗುರುತಿಸುತ್ತಾನೋ, ಅವನು ಇಡೀ ಜಗತ್ತನ್ನೇ ಗುರುತಿಸಬಲ್ಲನು. ಯಾವನು ಒಂದನ್ನು ತಿಳಿಯುತ್ತಾನೋ, ಅವನು ಎಲ್ಲವನ್ನೂ ತಿಳಿಯುತ್ತಾನೆ.

**ಜೋ ಏಗಂ ಜಾಣದಿ ಸೋ ಸವ್ವಂ ಜಾಣದಿ ।**

ಯಾವನು ಒಂದು ಆತ್ಮನನ್ನು ತಿಳಿದಿರುವನೋ ಎಂದರೆ ''ನಾನು ಯಾರು? ನನ್ನ ಆತ್ಮನಲ್ಲಿ ಯಾವ ಗುಣಗಳಿವೆ ?'' ಎಂಬಿತ್ಯಾದಿಗಳನ್ನು ಯಾವನು ಅರಿತುಕೊಂಡಿರುತ್ತಾನೋ ಅವನು ಜಗತ್ತನ್ನೇ ತಿಳಿಯಬಲ್ಲನು. ನನ್ನಂತೆಯೇ ಸುಖ-ದುಃಖಗಳು ಇತರರಿಗೂ ಇದೆ, ನನ್ನಂತೆಯೇ ಈ ಜನರು ಕೂಡಾ ಚಿಂತೆಗೊಳಗಾಗಿದ್ದಾರೆ, ಮತ್ತೆ ನಾನೇಕೆ ಇತರರಿಗೆ ದುಃಖವನ್ನು ಕೊಡಬೇಕು ? ಅಜ್ಞಾನದ ಕಾರಣದಿಂದ ಅನೇಕ ಅಪಶಬ್ದಗಳನ್ನು ಮಾತಾಡುತ್ತಾರೆ. ಅವರನ್ನು ಎದುರಿಸಬಲ್ಲೆನೇ ? ಜೈಲಿಗೆ ಕಳುಹಿಸಬಲ್ಲೆನೇ ? ಭಿಕಾರಿಗಳನ್ನಾಗಿ ಮಾಡಿಬಿಡಬಲ್ಲೆನೇ ? ಬಾಯಿಯಿಂದ ಎಂತೆಂತಹ ಮಾತುಗಳನ್ನಾಡುತ್ತಾರೆ ? ಬಾಯಿಯಾದರೂ ಇರುವುದು ಯಾತಕ್ಕಾಗಿ ? ಪವಿತ್ರವಾದ ಸಹಸ್ರನಾಮ, ಭಗವಂತನ ನಾಮಸ್ಮರಣೆ, ಇತ್ಯಾದಿಗಳಿಗಾಗಿ ಅಲ್ಲವೇ ನಮ್ಮ ಬಾಯಿ ಇರುವುದು ?

ಭಾರತದಲ್ಲಿ ಮಕ್ಕಳಿಗಿಡುವ ಹೆಸರಿನ ಕಾರಣದಿಂದಾದರೂ ಬಾಯಿಯಿಂದ ಭಗವಂತನ ಹೆಸರು ಬರಲಿ ಎಂಬ ಉದ್ದೇಶದಿಂದ ಮಕ್ಕಳಿಗೆ ಭಗವಂತನ ಹೆಸರಿಡುವ ಪರಂಪರೆ ಬಂದಿದೆ. ಆದರ್ಶ ಪುರುಷರ, ಆದರ್ಶ ಮಹಿಳೆಯರ ಹೆಸರನ್ನು ಕೂಡಾ ಮಕ್ಕಳಿಗಿಡುವ ರೂಢಿ ಭಾರತದಲ್ಲಿದೆ. ರಾಮ, ಕೃಷ್ಣ ಸೀತಾ, ಇತ್ಯಾದಿಗಳು. ಬಳಕೆಯಾದುದು ಆ ಕಾರಣ

ದಿಂದಲೇ. ಇಂದಿನವರೆಗೆ ಯಾರಾದರೂ ತಮ್ಮ ಮಕ್ಕಳಿಗೆ 'ರಾವಣ' ಎಂಬ ಹೆಸರನ್ನಿಟ್ಟ ಉದಾಹರಣೆಯಿದೆಯೇ ? ಇಲ್ಲವೇ ಇಲ್ಲವೆನ್ನಬಹುದು. ಏಕೆಂದರೆ ಆ ಪಾತ್ರದ ಹಿಂದೆ ಕಲಂಕಿತ ಇತಿಹಾಸವಿದೆ. ಅಂತಹ ಹೆಸರುಗಳನ್ನಿಡಲು ಯಾರೂ ಸಿದ್ಧರಿಲ್ಲ. ಹೆಸರುಗಳ ಜೊತೆಯಲ್ಲೇ ಪವಿತ್ರತೆಯಿದೆ, ಇತಿಹಾಸವಿದೆ. ಯಾವಾಗಲೂ ಬಾಯಿಯಿಂದ ಪವಿತ್ರ ನಾಮಗಳ ಉಚ್ಚಾರಣೆಯೇ ಆಗಬೇಕು. ಆದುದರಿಂದಲೇ ಭಗವಂತನ ಹೆಸರುಗಳನ್ನೇ ಜಪಿಸುತ್ತಾರೆ.

ಭಾರತದ ಆದರ್ಶ ಪರಂಪರೆಯನ್ನು ಸುರಕ್ಷಿತಗೊಳಿಸಲು ನಾವು ನಮ್ಮ ಜೀವನವನ್ನು ಪವಿತ್ರವಾಗಿರಿಸಿಕೊಳ್ಳಬೇಕು. ಉದಾರ ವಿಚಾರ, ಪವಿತ್ರವಾದ ಯೋಚನೆಗಳು, ಧರ್ಮಧ್ಯಾನ, ಪರೋಪಕಾರ ಇತ್ಯಾದಿಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಾಧನೆಯೂ ಪವಿತ್ರವಾಗಿರಬೇಕು. ನಡೆ-ನುಡಿಗಳೂ ಪವಿತ್ರವಾಗಿರಬೇಕು. ಆಗಲೇ ಮನುಷ್ಯನು ಮನುಷ್ಯನೆಂದು ಕರೆಸಿಕೊಳ್ಳಲು ಯೋಗ್ಯನಾಗುತ್ತಾನೆ. ಅನ್ಯಥಾ ಮನುಷ್ಯನು ಮನುಷ್ಯಜನ್ಮ ಧಾರಣೆ ಮಾಡಿಯೂ ವ್ಯರ್ಥವಾಗುತ್ತದೆ. ಹಸುವಿಗೆ ಹುಲ್ಲನ್ನು ತಿನ್ನಿಸುತ್ತಾರೆ, ಅದು ಅದರಿಂದ ಕ್ಷೀರ ಧಾರೆಯನ್ನೇ ಸುರಿಸುತ್ತದೆ. ಹಸುವಿಗೆ ನಾವು ಕೊಡುತ್ತಿರುವುದು ಅತೀ ಅಗ್ಗದ ಹುಲ್ಲು, ಆದರೆ ಅದು ಮಾತ್ರ ಹುಲ್ಲಿಗೆ ಬದಲಾಗಿ ಜೀವನ ಪೂರ್ತಿ ನಮಗೆ ಹಾಲು ಉಣ್ಣಿಸುತ್ತದೆ. ನೀವು ನಿಮ್ಮ ಕೈಗಳಿಂದ ಎಷ್ಟು ಜನರಿಗೆ ನೀರು ಕೊಟ್ಟು ಕುಡಿಸಿರುವಿರಿ ? ಒಂದು ವೇಳೆ ಹಾಗೆ ಕೊಡುವಾಗಲೂ ಏನಾದರೊಂದು ಸ್ವಾರ್ಥವಶದಿಂದ ಕೊಡುತ್ತೀರಿ. ಹಾಗೆ ನೋಡಿದರೆ ಹಸು ಒಂದು ಕೇವಲ ಪ್ರಾಣಿ. ಅದು ಐವತ್ತು, ಅರವತ್ತು ವರ್ಷಗಳವರೆಗೂ ನಿಮಗೆ ಹಾಲು ಕುಡಿಸುತ್ತದೆ. ನಮ್ಮ ಮೇಲೆ ಅದು ಮಾಡುವ ಉಪಕಾರ ಎಷ್ಟೊಂದು ದೊಡ್ಡದು ! ಅದಕ್ಕಾಗಿ ನಾವಾದರೋ ಏನು ಮಾಡಿದೆವು ? ನಮ್ಮ ಸ್ವಾರ್ಥಕ್ಕಾಗಿ ಹುಲ್ಲು ತಿನ್ನಿಸಿದೆವು. ಕರ್ತವ್ಯಪಾಲನೆಯ ದೃಷ್ಟಿಯಿಂದಲಾದರೂ ಪರೋಪಕಾರ ಮಾಡೋಣ. ಆಗಲೇ ಮನುಷ್ಯ ಜನ್ಮದ ಫಲವನ್ನು ದೊರಕಿಸಿಕೊಳ್ಳಬಲ್ಲೆವು. ಸದ್ಗತಿಯನ್ನು ಪಡೆಯಬಲ್ಲೆವು.

## ವಿದ್ಯಾನಂದ ವಚನಾಮೃತ

*ಇಪ್ಪತ್ನಾಲ್ಕು ಗಂಟೆಯೂ ನೀವು ಶರೀರಕ್ಕೆ ಗಮನ ಕೊಡುತ್ತಿರುವಿರಿ. ತಿನ್ನಲು, ಉಣ್ಣಲು, ಒಡವೆ ಹಾಕಲು ಹೀಗೆ ಇಂಥವುಗಳಿಗೆಲ್ಲ ಸಮಯ ವ್ಯಯ ಮಾಡುತ್ತೀರಿ. ಆದರೆ ಆತ್ಮನಿಗೆ ಎಷ್ಟು ಸಮಯ ಕೊಡುತ್ತೀರಿ ? ''ಜ್ಞಾನಾಮೃತಂ ಭೋಜನಂ'' ಆತ್ಮನು ತುಂಬ ದುಃಖಿಯಾಗಿರುವನು. ತಾವೆಲ್ಲ ದಿನವೂ ಜಪ-ತಪ ಮಾಡಿ, ದೇವರ ದರ್ಶನ ಮಾಡಬೇಕು. ಹಾಗೆಂದು ಧವಳ, ಜಯಧವಳ ಗ್ರಂಥಗಳಲ್ಲಿ ಹೇಳಿದ್ದಾರೆ. ಪ್ರತಿನಿತ್ಯ ದೇವರ ದರ್ಶನ ಮಾಡಿದರೆ ನಿಕಾಚಿತ ಕರ್ಮ ಸಡಿಲವಾಗುತ್ತದೆ. ನಿಕಾಚಿತ ಕರ್ಮವನ್ನು ಭುಂಜಿಸಲೇಬೇಕೆಂಬ ನಿಯಮವಿದೆ. ಆದರಿಂದ ಅಂಥ ಕರ್ಮಗಳು ದೂರವಾಗುತ್ತವೆಯಂತೆ.*



-೧೩-

## ತನು ಜಿನಮಂದಿರ

ಮಹಾನುಭಾವರೇ, ಈಗ ನೀವು ಪ್ರಾಕೃತ ಭಾಷೆಯ ಕೆಲವು ಆಧ್ಯಾತ್ಮಿಕ ಗಾಥೆಗಳ ಅಭ್ಯಾಸ ಮಾಡಿದಿರಿ. ಈ ರೀತಿ ಕೆಲವು ಆಧ್ಯಾತ್ಮಿಕ ಗಾಥೆಗಳನ್ನು ಓದಿ ನೆನಪಿಸಿಕೊಂಡರೆ, ಅವುಗಳ ಮನನ ಮಾಡಿದರೆ ಭವ ಭವಾಂತರಗಳವರೆಗೆ ಅವುಗಳ ಸಂಸ್ಕಾರವು ಜೊತೆಯಲ್ಲೇ ಇರುತ್ತದೆ. ಯಾವುದೇ ಒಂದು ಮಣ್ಣಿನ ಪಾತ್ರೆಯಲ್ಲಿ ಯಾವುದಾದರೂ ಸುಗಂಧ ಭರಿತ ವಸ್ತುವನ್ನಿಟ್ಟು ಅದರ ಬಾಯಿ ಮುಚ್ಚಿ ಅನೇಕ ದಿನಗಳ ಬಳಿಕ ಮುಚ್ಚಳವನ್ನು ತೆಗೆದರೂ ಕೂಡಾ ಅದರಿಂದ ಪರಿಮಳ ಬರುತ್ತಿರುತ್ತದೆ. ಸುಗಂಧ ನಷ್ಟವಾಗುವುದಿಲ್ಲ, ಅದೇ ರೀತಿ ಆಧ್ಯಾತ್ಮಿಕ ಗಾಥೆಗಳ ಸಂಸ್ಕಾರವಿರುತ್ತದೆ. ಆಚಾರ್ಯ ಕುಂದಕುಂದರು ಗಾಥೆಗಳನ್ನು ''ಸುತತ್ಥಂ'' ಎಂದರು. ಅವುಗಳನ್ನು ಸ್ವಯಂ ಉಚ್ಚರಿಸಿರಿ. ಇತರರಿಗೆ ಕೇಳಿಸಿರಿ, ಇತರರಿಗೆ ಕಲಿಸಿರಿ. ಇವೆಲ್ಲ ಕರ್ಮನಿರ್ಜರೆಯ ಹೇತುಗಳು. ಇವುಗಳಲ್ಲಿ ಪಾಪ ಕರ್ಮಗಳ ನಿರ್ಜರೆಯುಂಟಾಗುತ್ತದೆ. ಗಾಥೆಗಳ ಉಚ್ಚಾರಣೆಯನ್ನು ಆಗಾಗ ಮಾಡುವುದು, ಅವುಗಳ ಅರ್ಥವನ್ನು ಚಿಂತನೆ ಮಾಡುವುದು, ಮತ್ತೆ ಇತರರಿಗೆ ತಿಳಿಸುವುದು ಹೇಳುವುದು ಬಹಳ ಮಹತ್ವಪೂರ್ಣವಾದುದು.

**ಸುತತ್ಥಂ ಜಪ್ಪಂತೋ ವಾಯಂತೋ ಚಾವಿ ಣಿಜ್ಜರಾಹೇದುಂ ।**
**ಆಸಾದಣಂ ಣ ಕುಜ್ಜಾ ತೇಣ ಕಿದಂ ಹೋದಿ ಬಹುಮಾಣಂ ॥**

ಈಗ ನೀವು ಓದಿದ ಗಾಥೆಯಲ್ಲಿ ಸಮ್ಮೇದ ಶಿಖರಜಿಯ ವಂದನೆಯಿದೆ. ಈ ಗಾಥೆಯು ಆಚಾರ್ಯ ಕುಂದಕುಂದರ ಮೂಲಕ ರಚಿತವಾಗಿದ್ದು ಅದು ನಿರ್ವಾಣ ಕಾಂಡದಲ್ಲಿದೆ. ಸಮ್ಮೇದ ಶಿಖರದಿಂದ ಇಪ್ಪತ್ತು ತೀರ್ಥಂಕರರು ಮೋಕ್ಷ ಪ್ರಾಪ್ತಿಸಿಕೊಂಡರು. ನೀವು ನಿಮ್ಮ ಸಂಪೂರ್ಣ ಸಮಯವನ್ನು ಅನ್ಯ ಕಾರ್ಯಗಳಲ್ಲಿ ತೊಡಗಿಸುತ್ತೀರಿ. ಇಪ್ಪತ್ತನಾಲ್ಕು ಗಂಟೆಗಳಲ್ಲಿ ಹತ್ತು ನಿಮಿಷವನ್ನಾದರೂ ಈ ಗಾಥೆಗಳ ಅಭ್ಯಾಸಕ್ಕಾಗಿ ವಿನಿಯೋಗಿಸಿದಿರಿ ಎಂದಾದರೆ ಅದರಿಂದ ಬಹಳ ಉಪಯೋಗವಾಗಬಹುದು, ನೀವು ಪ್ರತಿದಿನ ಭಗವಂತನ ಅಭಿಷೇಕ ನೋಡುತ್ತೀರಿ. ಕೆಲವರು ಅಭಿಷೇಕ ಮಾಡುವುದೂ ಇದೆ. ಅಭಿಷೇಕವಾದ ಬಳಿಕ ಅದರ ಗಂಧೋದಕವನ್ನು ಶರೀರದ ಮೇಲೆ ಹಾಕಿಕೊಳ್ಳುತ್ತೀರಿ. ಗಂಧೋದಕವನ್ನು ಎಲ್ಲಿ ಹಾಕಿಕೊಳ್ಳಬೇಕೆಂದು ನಿಮಗೆ ಗೊತ್ತಿದೆ. ಗಂಧೋದಕ ಧಾರಣೆ ಮಾಡುವುದಕ್ಕೆ ಶಾಸ್ತ್ರಗಳಲ್ಲಿ ಏನು ಆಧಾರ ಕೊಡಲಾಗಿದೆ ಎಂಬುದನ್ನು ತಿಳಿಯೋಣ;-

**ಭಾಲೇ ನೇತ್ರಯುಗಲೇ ಚ ಮೂರ್ಧ್ನಿ ತಥ್ಹಾ ಸರ್ವೈರ್ಜನೈರ್ಧಾರ್ಯತಾಂ ॥**

ಶಾಸ್ತ್ರಗಳಲ್ಲಿ ಭಾಲ(ಲಲಾಟ), ಎರಡು ಕಣ್ಣುಗಳು ಹಾಗೂ ಕಪಾಲ ಈ ಮೂರು

ಸ್ಥಾನಗಳ ಮೇಲೆ ಗಂಧೋದಕವನ್ನು ಹಾಕಬೇಕೆಂದು ಸ್ಪಷ್ಟವಾಗಿ ಹೇಳಿದೆ. ಇದಲ್ಲದೆ ಶರೀರದ ಇನ್ನಾವುದೇ ಸ್ಥಾನಗಳ ಮೇಲೂ ಗಂಧೋದಕ ಹಾಕಬಾರದು. ಕೆಲವು ಜನರು ಇಡೀ ಶರೀರದ ಮೇಲೆ ಅದನ್ನು ಹಾಕುತ್ತಾರೆ. ಕೆಲವರು ಅದನ್ನು ಕುಡಿಯುವುದೂ ಉಂಟು. ಇದು ಅನುಚಿತ, ತಪ್ಪು, ಶಾಸ್ತ್ರ ಸಮ್ಮತವಲ್ಲ, ಆದಕಾರಣ ಕೇವಲ ಉಲ್ಲಿಖಿತ ಮೂರು ಸ್ಥಾನಗಳ ಮೇಲೆ ಮಾತ್ರವೇ ಗಂಧೋದಕವನ್ನು ಹಾಕಬೇಕು. ಮಹರ್ಷಿ ವಾಸುಪೂಜ್ಯರು 'ದಾನಶಾಸ್ತ್ರ'ದಲ್ಲಿ ಹೀಗೆ ಹೇಳಿದ್ದಾರೆ;-

**ಗಂಧಾಂಭಃ ಸುಮಮರ್ಹದಂಘ್ರಿಯುಗ ಸಂಸ್ಪರ್ಶಾತ್ಪವಿತ್ರೀಕೃತಂ ।**
**ದೇವೇಂದ್ರಾದಿ ಶಿರೋಲಲಾಟ ನಯನನ್ಯಾ ಸೋಚಿತಂ ಮಂಗಲಂ ॥**
**ತೇಷಾಂ ಸ್ಪರ್ಶನತಸ್ತ ಏವ ಸಕಲಾಃ ಪೂತ ಅಭೋಗೋಚಿತಂ ।**
**ಭಾಲೇನೇತ್ರಯುಗಲೇ ಚ ಮೂರ್ಧ್ನಿ ತಥಾ ಸರ್ವೈಜನ್ಯೆರ್ಧಾರ್ಯತಾಮ್ ॥**

ಗಂಧೋದಕ ಹಚ್ಚುವುದರ ಪ್ರಯೋಜನವನ್ನು ಹೇಳುತ್ತಾ ಹೀಗೆ ಬರೆಯಲಾಗಿದೆ ''ನನಗೆ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರದ ಪ್ರಾಪ್ತಿಯಾಗಲಿ. ಅದರಿಂದ ನಾನು ಸಿದ್ಧಾಲಯವನ್ನು ಸೇರಬಲ್ಲೆ, ನನ್ನ ಸಮ್ಯಗ್ದರ್ಶನ ಶುದ್ಧವಾಗಿರಲಿ, ನನ್ನ ಸಮ್ಯಗ್‌ಜ್ಞಾನ ನಿರ್ಮಲವಾಗಿರಲಿ, ಅದರಿಂದ ಸಮ್ಯಕ್‌ಚಾರಿತ್ರದ ಪ್ರಾಪ್ತಿಯಾಗಲಿ ಮತ್ತು ಶೀಘ್ರವೇ ಮೋಕ್ಷಫಲ ಸಿಗುವಂತಾಗಲಿ'' ಎಂಬುದೇ ಗಂಧೋದಕ ಹಚ್ಚುವುದರ ಧ್ಯೇಯವಾಗಿದೆ. ಯಾರು ಗಂಧೋದಕ ಕುಡಿಯುತ್ತಾರೋ ಅಥವಾ ಇಡೀ ಶರೀರಕ್ಕೆ ಹಚ್ಚಿಕೊಳ್ಳುತ್ತಾರೋ ಅವರಿಗೆ ಅದು ಉಪಯುಕ್ತವಲ್ಲ.

ಹಾಗೆಯೇ ಅಭಿಷೇಕವು ಎರಡು ರೀತಿಯದ್ದಿದೆ ಎಂದು ಹೇಳಲಾಗಿದೆ. ಅಂತರಂಗ ಮತ್ತು ಬಹಿರಂಗ. ಬಾಹ್ಯದಲ್ಲಿ 'ಜಿನೇಂದ್ರ ಪ್ರತಿಮಾ'ದ ಅಭಿಷೇಕ ಮಾಡುತ್ತಾರೆ. ಆದರೆ ಅಂತರಂಗದಿಂದ ಅದಕ್ಕೇನು ಸಂಬಂಧವಿದೆ ? 'ಜಿನೇದ್ರ ಪ್ರತಿಮಾ'ಕ್ಕೆ ಅಭಿಷೇಕ ಮಾಡುವ ಹೊತ್ತಿಗೆ ನಿಮ್ಮ ಮನಸ್ಸಿನಲ್ಲಿ ಯಾವ ಚಿಂತನೆ ಉಂಟಾಗಬೇಕು ? ಇಲ್ಲಿ ತಿಳಿಸಿದ್ದಾರೆ;-

**ತನು ಜಿನಮಂದಿರ, ಮನ ಕಮಲಾಸನ, ತ್ಯಾವರೀ ಚಿನ್ಮಯತುಂಗ,**
**ಯಜ ಜಿನಪದ ಕಮಲಾನಿಃ ಸಂಗ ।**

ಹೇ ಭಗವಾನ್, ನನ್ನ ಶರೀರವು ಜಿನಮಂದಿರ, ನನ್ನ ಮನಸ್ಸು ವೇದಿಕೆ-ಆಸನ, ಆ ಸಿಂಹಾಸನದ ಮೇಲೆ ನನ್ನ ಆತ್ಮರೂಪೀ ಪರಮಾತ್ಮನು ವಿರಾಜಮಾನನಾಗಿದ್ದಾನೆ. ಆ ಆತ್ಮರೂಪೀ ಪರಮಾತ್ಮನ ಅಭಿಷೇಕ ಮಾಡುತ್ತಿದ್ದೇನೆ. ಇನ್ನು ಅಭಿಷೇಕದ ಕುರಿತಾಗಿ ಮುಂದೆ ಹೇಳಲಾಗಿದೆ;-

**ಜ್ಞಾನಗಂಗಾಜಲಿ, ಕ್ಷಾಲೋನೀ ನಿರ್ಮಲ, ಸಂಚಿತ ಪಾತಕ ಭಂಗ,**
**ಯಜ ಜಿನಪದ ಕಮಲಾ ನಿಃ ಸಂಗ ।**



ಸಮ್ಯಗ್‌ಜ್ಞಾನರೂಪೀ ಜಲವನ್ನು ತಮ್ಮ ಮನರೂಪೀ ಕಲಶದಲ್ಲಿ ತುಂಬಿಸಿ ನಮ್ಮ ಆತ್ಮನಿಗೆ ಅಭಿಷೇಕ ಮಾಡೋಣ.

ಹೊರಗಿನ ಕಲಶದಲ್ಲಿ ಜಲವನ್ನು ತುಂಬಿಸಿ 'ಜಿನೇಂದ್ರ ಪ್ರತಿಮಾ'ದ ಅಭಿಷೇಕ ಮಾಡುವುದು ಮತ್ತು ಅಂತರಂಗದಲ್ಲಿ ಈ ರೀತಿಯ ಭಾವವನ್ನು ಕಲ್ಪಿಸಿಕೊಂಡರೆ ಸಂಚಿತ ಪಾಪ ಕರ್ಮಗಳು ಕೂಡಾ ಆ ಅಭಿಷೇಕದಿಂದ ತೊಳೆದುಹೋಗಬಹುದು ಮತ್ತು ನಾಶವಾಗಬಹುದು.

ಹೊರಗೆ ಜಿನೇಂದ್ರ ಪ್ರತಿಮೆಗೆ ನೀರಿನಿಂದ ಅಭಿಷೇಕ ಮಾಡಿರಿ ಮತ್ತು ಅಂತರಂಗದಲ್ಲಿ ನಿಮ್ಮ ಆತ್ಮನಿಗೆ ಜ್ಞಾನರೂಪೀ ಜಲದಿಂದ ಅಭಿಷೇಕ ಮಾಡಿರಿ. ಆಗ ಜ್ಞಾನದಿಂದ ಕರ್ಮಮಲದ ಸ್ವಚ್ಛತೆಯಾಗುತ್ತದೆ.

ಹಾಗಾದರೆ ಏನು ನಮ್ಮ ಆತ್ಮನು ಪರಮಾತ್ಮನೇ ? ಸಿದ್ಧ ಭಗವಾನ್ ಮತ್ತು ನಮ್ಮ ಆತ್ಮ ಈ ಎರಡರಲ್ಲಿ ಯಾವ ಸಾಮ್ಯವಿದೆ ? ಅವುಗಳ ಸ್ವರೂಪದ ಚಿಂತನೆ ಮಾಡುತ್ತಾ ಒಬ್ಬ ಕವಿ ಹೀಗೆ ಹೇಳಿದ್ದಾನೆ;- ''ಹೇಗೆ ಸಿದ್ಧ ಭಗವಾನ್ ಇರುವನೋ ಹಾಗೆಯೇ ನಮ್ಮ ಆತ್ಮನೂ ಕೂಡ ಭಗವಾನ್ ಆಗಿರುತ್ತಾನೆ.''

ನಾವು ಬಾಹ್ಯ ಜಗತ್ತಿನ ವಸ್ತುಗಳನ್ನು ನೋಡಿ ಹೀಗೆ ಹೇಳುತ್ತೇವೆ- ''ಪರ್ವತಗಳು ಸುಂದರವಾಗಿವೆ, ಈ ಪೃಥ್ವಿ ಸುಂದರವಾಗಿದೆ, ಹೂಗಳು ಎಷ್ಟೊಂದು ಸುಂದರವಾಗಿವೆ?'' ಇದೇ ರೀತಿ ಆಭರಣ, ಬಟ್ಟೆ, ಸೂರ್ಯ, ಚಂದ್ರ, ನದಿ, ಸರೋವರ ಇತ್ಯಾದಿ ಎಲ್ಲಾ ವಸ್ತುಗಳ ಸೌಂದರ್ಯದ ವರ್ಣನೆ ಮಾಡುತ್ತೇವೆ. ಅವುಗಳನ್ನು ಪಡೆಯಲು ಇಚ್ಛಿಸುತ್ತೇವೆ. ಇದಕ್ಕೆ ಆಚಾರ್ಯ ಕುಂದುಕುಂದರು ಹೀಗೆ ಹೇಳುತ್ತಾರೆ;-

**ಏಯತ್ತಣಿಚ್ಛಯಗದೋ ಸಮವ್ರೋ ಸವ್ವತ್ಥ ಸುಂದರೋ ಲೋಗೇ ।**

ಲೋಕದಲ್ಲಿ ಆತ್ಮನೇ ಎಲ್ಲಕ್ಕಿಂತಲೂ ಸುಂದರ. ಜಗತ್ತಿನ ಸಂಪೂರ್ಣ ಸೌಂದರ್ಯವನ್ನು ಆತ್ಮನೇ ತಿಳಿಯುತ್ತಾನೆ, ಆತ್ಮನೇ ಗುರುತಿಸುತ್ತಾನೆ. ಸೌಂದರ್ಯವನ್ನು ತಿಳಿಯುವವನು ಸ್ವಯಂ ಎಷ್ಟೊಂದು ಸುಂದರವಾಗಿರಬಹುದು ! ಇತರರ ಸೌಂದರ್ಯವನ್ನು ತಿಳಿಯುವವನು, ಗುರುತಿಸುವವನು, ಆದರೆ ಚರ್ಚೆ ಮಾಡುವ ಆತ್ಮನೇ ಎಲ್ಲಕ್ಕಿಂತ ಸುಂದರ ಆದರ ಚರ್ಚೆ ಮಾಡುವ ಆತ್ಮನೇ ಎಲ್ಲಕ್ಕಿಂತ ಸುಂದರನು. ಮೂರು ಲೋಕದಲ್ಲೂ ಸರ್ವಾಧಿಕ ಸುಂದರನು ಸಿದ್ಧಭಗವಾನ್ ಅಥವಾ ನಿಮ್ಮ ಆತ್ಮನು. ಅನ್ಯ ಯಾವುದೇ ವಸ್ತುವೂ ಸುಂದರವಲ್ಲ.

ನಾವು ಬೇರೆ ವಸ್ತುಗಳ ಗುಣಗಳನ್ನು ವರ್ಣಿಸುತ್ತೇವೆ. ಆದರೆ ಆ ಗುಣಗಳನ್ನು ತಿಳಿಯುವ ಮತ್ತು ಗುರುತಿಸುವ ಆತ್ಮನ ಗುಣಗಳನ್ನು ತಿಳಿಯುವುದಿಲ್ಲ, ಗುರುತಿಸುವುದಿಲ್ಲ, ಅವನ ಗುಣಗಾನ ಮಾಡುತ್ತಿಲ್ಲ, ಯಾರನ್ನಾದರೂ ನೋಡಿ 'ಇವನು ಬಹಳ ಶಕ್ತಿಶಾಲಿ,

ವೀರ'' ಎನ್ನುತ್ತೇವೆ. ಆದರೆ ನಮ್ಮ ಆತ್ಮನು ಎಷ್ಟೊಂದು ಶಕ್ತಿಶಾಲಿ ಎಂಬುದನ್ನು ತಿಳಿಯಲಾರದವರಾಗಿದ್ದೇವೆ. ಆತ್ಮನು ನಿಜಕ್ಕೂ ಸರ್ವಶಕ್ತಿಮಾನ್. ಅದರ ಬಗ್ಗೆ ಒಬ್ಬ ಕಲಾಕಾರ ಹೀಗೆ ಹೇಳುತ್ತಾನೆ;-

**ಜ್ಞಾನ, ಕಲಾ ಜಿನ್‌ಕೇ ಘಟ ಮಾಂಹಿ ... ।**

ಅರ್ಥಾತ್ ನಮ್ಮ ಆತ್ಮನಲ್ಲಿ ಜ್ಞಾನರೂಪೀ ಕಲೆಯಿದೆ. ಅದನ್ನು ನಾವು ಗುರುತಿಸುವುದಿಲ್ಲ.

**ಆತ್ಮಾ ಜ್ಞಾನಂ, ಸ್ವಯಂ ಜ್ಞಾನಂ ।**

ಆತ್ಮನು ಸ್ವಯಂ ಜ್ಞಾನರೂಪನು. ಅವನಲ್ಲಿರುವ ಜ್ಞಾನವು ಹೊರಗಿನಿಂದ ಬಂದುದಲ್ಲ, ಸಮಸ್ತ ಪೃಥ್ವೀಮಂಡಲದ ಮೇಲೆ ಸರ್ವಥಾ ಜ್ಞಾನದ ಆಟವೇ ನಡೆಯುತ್ತಿದೆ. ಯಾವನೋ ಒಬ್ಬ ವ್ಯಕ್ತಿಯ ಕುರಿತು 'ಇವನು ಬಹಳ ಅನುಭವಿ' ಎಂದು ನಾವು ಹೇಳುತ್ತೇವೆ. ನಿಮ್ಮ ಆತ್ಮನಲ್ಲಿ ಅನುಭವಕ್ಕೆ ಏನು ಕೊರತೆಯಿದೆ ? ನೀವು ಸ್ವಯಂ ಚಿಂತನೆ ಮಾಡುವುದಿಲ್ಲ, ''ತಾನು ಸಾಯಬೇಕು ಸ್ವರ್ಗ ಪಡೆಯಬೇಕು'' ಎಂಬ ಗಾದೆ ಮಾತನ್ನು ಜನರು ಹೇಳುತ್ತಾರೆ. ಸ್ವಯಂ ಸಾಯದೆ ಸ್ವರ್ಗ ಪಡೆಯುವಂತಿಲ್ಲ, ಆತ್ಮ ಮತ್ತು ಪರಮಾತ್ಮನ ಸ್ವರೂಪವನ್ನು ನಾವೇ ಸ್ವಯಂ ಅನುಭವ ಮಾಡಿಕೊಳ್ಳಬೇಕು.

ಸಂಸಾರದಲ್ಲಿ ಅನೇಕ ಅನುಭವಗಳನ್ನು ನೀವು ಮಾಡಿಕೊಂಡಿದ್ದೀರಿ? ಪೃಥ್ವಿಯನ್ನು ಅಗೆದು-ಅಗೆದು ವಜ್ರ-ವೈಢೂರ್ಯಗಳನ್ನು ಹೊರಗೆ ತೆಗೆದಿದ್ದೀರಿ.'ಸಮುದ್ರದಲ್ಲಿದ್ದ ರತ್ನಗಳನ್ನು ಹೊರ ತೆಗೆಯಲು ಸಮರ್ಥರಾಗಿದ್ದೀರಿ. ಆದರೆ ಆತ್ಮನಲ್ಲಿರುವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪೀ ರತ್ನಗಳನ್ನು ಸಂಶೋಧಿಸಲಿಲ್ಲ, ಆತ್ಮನ ಧ್ಯಾನದಲ್ಲಿ ಮುಳುಗಿದಾಗ ಮಾತ್ರ ರತ್ನತ್ರಯದ ಪ್ರಾಪ್ತಿಯಾಗಬಲ್ಲದು. ಆದರೆ ಆ ಅಂತರಾಳಕ್ಕೆ ಮುಳುಗುವ ಸಾಧನೆ ಮಾಡುತ್ತಿಲ್ಲ, ಆದ ಕಾರಣ ಆತ್ಮ ಜ್ಞಾನದಲ್ಲಿ ಮುಳುಗುವ ಅಭ್ಯಾಸ ಮಾಡಿರಿ.

ಜಗತ್ತಿನಲ್ಲಿ ಎರಡು ವಸ್ತುಗಳು ಮಾತ್ರ ಪವಿತ್ರವಾದವುಗಳು. ಅದು ಜ್ಞಾನ ಮತ್ತು ಅಗ್ನಿ. ಚಿನ್ನ-ಬೆಳ್ಳಿಯಂತಹ ಧಾತುಗಳನ್ನು ಅಗ್ನಿಯೇ ಶುದ್ಧ-ಪವಿತ್ರಗೊಳಿಸುತ್ತದೆ. ಚಿನ್ನವನ್ನು ಅಗ್ನಿಯಲ್ಲಿ ಹಾಕಿದಾಗ ಚಿನ್ನದ ಜೊತೆ ಸೇರಿಕೊಂಡಿದ್ದ ಮಿಶ್ರಣವನ್ನು ಅಗ್ನಿ ಉರಿಸಿ ದೋಷವನ್ನು ದೂರಗೊಳಿಸುತ್ತದೆ. ಇದೇ ರೀತಿ ಜ್ಞಾನವು ಕೂಡಾ ಅಜ್ಞಾನರೂಪೀ ದೋಷಗಳನ್ನು ದೂರ ಮಾಡುತ್ತದೆ. ಜ್ಞಾನವೇ ಜೀವವನ್ನು ಪವಿತ್ರಗೊಳಿಸುತ್ತದೆ.

**ನಹೀ ಜ್ಞಾನೇನ ಸದೃಶಂ ಪವಿತ್ರಂ ಇಹ ವಿದ್ಯತೇ ॥**

ಸಂಸಾರೀ ಪ್ರಾಣಿಯು ನಾನಾವಿಧದಿಂದ ನಿದಾನ ಮಾಡುತ್ತಾನೆ. ನಿದಾನ ಅರ್ಥಾತ್ ಸಂಕಲ್ಪ, ''ನಾನು ಇದನ್ನು ಮಾಡುತ್ತೇನೆ, ಹೀಗೆ ಮಾಡುತ್ತೇನೆ'' ಇದು ನನ್ನ ಸಂಕಲ್ಪ ಅಥವಾ ನಿದಾನ. ಆಚಾರ್ಯರು ಹೇಳುತ್ತಾರೆ ''ಈ ಸಂಸಾರಿಗಳು ನಿದಾನವನ್ನೇನೋ



ಮಾಡುತ್ತಾರೆ ಆದರೆ ತಮ್ಮ ಆತ್ಮನಿಗಾಗಿ ನಿದಾನ (ಸಕಲ್ಪ) ಮಾಡುವುದಿಲ್ಲ, ನನ್ನ ಆತ್ಮನ ಗುಣಗಳ ಚಿಂತನೆ ಮಾಡುತ್ತೇನೆ, ಧರ್ಮಧ್ಯಾನ ಮಾಡುತ್ತೇನೆ ಎಂಬುದಾಗಿ ಸಂಕಲ್ಪ ಮಾಡುವುದಿಲ್ಲ''

ಶಾಂತಿಯನ್ನು ಹೊರಗೆ ಹುಡುಕುತ್ತಾರೆ. ಶಾಂತಿಯು ಅಂಗಡಿಯಲ್ಲಿ ಸಿಗುವ ವಸ್ತುವಲ್ಲ, ಅದನ್ನು ನೀವು ಹಣ ಕೊಟ್ಟು ಖರೀದಿ ಮಾಡಲಾಗುವುದಿಲ್ಲ, ಹಾಗೆ ನೋಡಿದರೆ ಹೊರಗಿರುವುದೆಲ್ಲ ಅಶಾಂತಿ, ಅಶಾಂತಿ. ಇಬ್ಬರು ಸ್ನೇಹಿತರಿದ್ದರು. ಒಂದುದಿನ ಅವರೊಳಗೆ ಮಾತು ಬೆಳೆದು ವಾದ-ವಿವಾದ ಹುಟ್ಟಿಕೊಂಡಿತು. ಒಬ್ಬ ಇನ್ನೊಬ್ಬನಿಗೆ ಹೊಡೆದೇಬಿಟ್ಟ, ಮಧ್ಯೆ ಪ್ರವೇಶಿಸಿದ ಜನರು ಅವರಿಬ್ಬರನ್ನೂ ಅವರವರ ಮನೆಗೆ ಕಳುಹಿಸಿದರು. ರಾತ್ರಿ ಅವರಿಬ್ಬರಿಗೂ ನಿದ್ರೆ ಬರಲಿಲ್ಲ, ನಿದ್ರೆ ಬಾರದ ಕಾರಣ ಅಚೀಚೆ ಮಗ್ಗುಲಿಗೆ ಮಗುಚಿ ಮಲಗುತ್ತಿದ್ದರು. ಅವರಲ್ಲಿ ಒಬ್ಬ ಹೀಗೆ ಆಲೋಚಿಸಿದ ''ಛೇ ನಾನು ಅವನಿಗೆ ಹೊಡೆಯಬಾರದಾಗಿತ್ತು;ಅವನಾದರೋ ನನ್ನ ಹಳೆಯ ಮಿತ್ರ. ನಾಳೆ ಅವನ ಹತ್ತಿರ ಕ್ಷಮೆ ಕೇಳುತ್ತೇನೆ'. ಅತ್ತ ಇನ್ನೊಬ್ಬನೂ ಕೂಡಾ ಈ ರೀತಿ ಯೋಚಿಸುತ್ತಿದ್ದ- ''ನನ್ನ ಮಿತ್ರ ನನಗೆ ಒಂದೇಟು ಹೊಡೆದುಬಿಟ್ಟನಲ್ಲಾ! ಅವನನ್ನು ಹಾಗೆಯೇ ಬಿಡಬಾರದು; ಒಂದಕ್ಕೆ ಎರಡೋ ನಾಲ್ಕೋ ಏಟುಗಳನ್ನು ಅವನಿಗೆ ಹಿಂದೆ ಕೊಡಲಾರದೇ ಹೋದರೆ ಏನು ಪ್ರಯೋಜನ?'' ಈಗ ಇಬ್ಬರೂ ಅಶಾಂತರಾದರು.

ಮಹಾನುಭಾವರೇ, ಶಾಂತಿ ಹೊರಗೆ ಪೇಟೆಯಲ್ಲಿ ಮಾರಲ್ಪಡುವುದಿಲ್ಲ, ಹಾಗಿದ್ದರೆ ಎರಡೋ ನಾಲ್ಕೋ ರೂಪಾಯಿಗಳನ್ನು ಕೊಟ್ಟು ಖರೀದಿಸಬಹುದಾಗಿತ್ತು. ಚಿನ್ನ-ಬೆಳ್ಳಿ, ಬಟ್ಟೆ-ಬರೆ, ಕಟ್ಟಡ ಇತ್ಯಾದಿಗಳನ್ನಾದರೂ ಖರೀದಿಸಬಹುದಾಗಿದೆ. ಆದರೆ ಶಾಂತಿಯನ್ನು ಹಾಗೆ ಕೊಂಡುಕೊಳ್ಳಲಾಗುವುದಿಲ್ಲ.

**ಸ್ವದೋಷ ಶಾಂತ್ಯಾ ವಿಹಿತಾತ್ಮ ಶಾಂತಿಃ ಶಾಂತೇರ್ವಿಧಾತಾ ಶರಣಂ ಗತಾನಾಮ್ ।**
**ಭೂಯಾದ್‌ಭವಕ್ಲೇಶ ಭಯೋಪಶಾಂತ್ಯೈ, ಶಾಂತಿರ್ಜಿನೋಮೆ ಭಗವಾನ್ ಶರಣ್ಯಃ ॥**

ಯಾವಾಗ ಒಬ್ಬಾತ ಸ್ವಯಂ ತನ್ನ ಜಪ, ತಪ, ಸಂಯಮ, ಪೂಜೆ, ಪಾಠ ಇತ್ಯಾದಿಗಳಿಂದ ದೋಷಗಳನ್ನು ನಿವಾರಿಸಿಕೊಳ್ಳುತ್ತಾನೋ ಆಗ ಮಾತ್ರ ಆತನ ಮನಸ್ಸಿನಲ್ಲಿ ಶಾಂತಿ ಪ್ರಸೂತವಾಗುತ್ತದೆ. ಅದು ಬೋರಿಂಗ್ ಹಾಕಿದೊಡನೆ ಭೂಮಿಯಿಂದ ಸಿಹಿ ನೀರು ಹೇಗೆ ಚಿಮ್ಮುತ್ತದೋ ಹಾಗೆ. ಏಕೆಂದರೆ ಪೃಥ್ವಿ ನೀರಿನ ಸ್ರೋತವಾಗಿದೆ. ಹಾಗೆಯೇ ಶಾಂತಿಯ ಸ್ರೋತ ನಮ್ಮ ಹೃದಯ, ಮನಸ್ಸು, ಆತ್ಮ. ಹಾಗಿದ್ದ ಮೇಲೆ ಶಾಂತಿಯನ್ನು ಏಕೆ ಹೊರಗಡೆ ಹುಡುಕುತ್ತೀರಿ ?

ಭಗವಾನ್ ಆದಿನಾಥರು ರಾಜಮಹಲಿನಲ್ಲಿ ಇರುತ್ತಿದ್ದರು. ಆ ರಾಜಮಹಲ್ ಬಹಳ ವೈಭವ ಸಂಪನ್ನವಾಗಿತ್ತು, ಯಾವುದೇ ವಸ್ತುವಿನ ಕೊರತೆಯಿಲ್ಲ, ಆದರೆ ಅಲ್ಲಿ ಅವರಿಗೆ ಶಾಂತಿ ಸಿಗಲಿಲ್ಲ, ತಮ್ಮ ಮಗನಾದ ಭರತನಿಗೆ ರಾಜ್ಯವನ್ನು ಒಪ್ಪಿಸಿ ಸ್ವಯಂ

ಕಾಡಿಗೆ ಹೋಗಿ ತಪಸ್ಸಿಗೆ ತೊಡಗಿದರು. ಆಗ ಭರತನ ಇತರ ತಮ್ಮಂದಿರು ಈ ಅಣ್ಣನ ಅಧೀನವಾಗಿ ಏಕಿರಬೇಕು. ಎಂದು ಯೋಚಿಸಿದರು. ಬಾಹುಬಲಿಯಂತೂ ಅಣ್ಣನ ಅಧೀನತೆಯನ್ನು ಒಪ್ಪಿಕೊಳ್ಳಲೇ ಇಲ್ಲ, ಋಷಭ ದೇವರು ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದರು. ಅಲ್ಲಿಯೂ ಅವರು ಪ್ರಾಣಿಗಳು ಕೂಡಾ ಜಿಂಕೆಯ ಹಿಂದೆ ಹುಲಿ ಎಂಬಂತೆ ಒಂದರ ಹಿಂದೆ ಒಂದು ಆಕ್ರಮಣ ಮಾಡುತ್ತಿರುವುದನ್ನು ಕಂಡರು. ಆಗ ಅವರಿಗೆ **ಶಾಂತಿ ಎಂಬುದು ಮನೆಯಲ್ಲಿ ಇಲ್ಲ, ಕಾಡಿನಲ್ಲಿ ಇಲ್ಲ, ಶಾಂತಿ ಇರುವುದಿದ್ದರೆ ಅದು ಮನಸ್ಸಿನಲ್ಲಿ, ಆತ್ಮನಲ್ಲಿ ಎಂಬ ಖಚಿತ ಅಭಿಪ್ರಾಯ ಮೂಡಿತು.** ಅನಂತರ ಅವರು ಕಣ್ಣುಗಳನ್ನು ಮುಚ್ಚಿ ಧ್ಯಾನಕ್ಕೆ ಕುಳಿತರು.

**ಸ್ವದೋಷ ಶಾಂತ್ಯಾ ವಿಹಿತಾತ್ಮ ಶಾಂತಿ.......... ।**

ಮೊದಲು ನಿಮ್ಮ ದೋಷಗಳನ್ನು ನಷ್ಟಗೊಳಿಸಿ. ಹಾಗಾದರೆ ಮಾತ್ರ ಶಾಂತಿಯ ಒರತೆ (ಸ್ರೋತ) ಪ್ರಕಟವಾಗುತ್ತದೆ. ಶಾಂತಿ ಹೊರಗಿಲ್ಲ, ಕಾಡಿನಲ್ಲಿಲ್ಲ, ಕಾಡಿನಲ್ಲಿ ಹಿಂಸಕ ಪಶುಗಳಿವೆ. ಅವುಗಳಲ್ಲಿ ಕೂಡಾ ನಾನಾ ವಿಧದ ರಾಗ-ದ್ವೇಷಗಳಿವೆ. ಪಶು-ಪಕ್ಷಿಗಳು ಒಂದು ಮತ್ತೊಂದರ ಮೇಲೆ ಶಿಕಾರಿ ಮಾಡುತ್ತವೆ. ಬಲಿಷ್ಠವಾದ ಪ್ರಾಣಿಗಳು ನಿರಪರಾಧಿ ಪಶು ಇತ್ಯಾದಿಗಳನ್ನು ಕೊಂದು ಸ್ವಲ್ಪ ತಿಂದು ಕಾಲ ಕಳೆಯುತ್ತವೆ. ಅವು ಹುಲ್ಲು ಕಡ್ಡಿಗಳನ್ನು ತಿಂದು ಬದುಕುವ ಹರಿಣಗಳನ್ನು ಕೊಲ್ಲುತ್ತವೆ.

ಯೌವನಸ್ಥ ಯುವಕ-ಯುವತಿಯರ ಮದುವೆಗಳಾಗುತ್ತವೆ. ವರನು ಸುಂದರವಾದ ಉಡುಗೆ ತೊಡುಗೆಗಳನ್ನು ಧರಿಸಿಕೊಂಡು ತನ್ನ ದರ್ಪವನ್ನು ತೋರಿಸುವುದಕ್ಕಾಗಿ ಎಲೆ-ಅಡಿಕೆ ತಿಂದು ಬಾಯಿ ಕೆಂಪು ಮಾಡಿಕೊಂಡು ಕುದುರೆಯ ಮೇಲೇರಿ ಹೋಗುತ್ತಾನೆ. ಅತ್ತ ವಧುವಾದವಳು ಚಿನ್ನ-ಬೆಳ್ಳಿಯ ಆಭರಣಗಳಿಂದಲೇ ಮೈ ಮುಚ್ಚಿಕೊಂಡು ಶರೀರದ ಸೌಂದರ್ಯವನ್ನು ಮೆಚ್ಚಿಕೊಳ್ಳಲು ಏನೇನು ಬೇಕೋ ಅದನ್ನೆಲ್ಲಾ ಮಾಡಿಸಿಕೊಳ್ಳುತ್ತಾಳೆ. ಇವೆಲ್ಲ ಕೃತ್ರಿಮ ಸೌಂದರ್ಯವೇ ಹೊರತು ಬೇರೇನಿಲ್ಲ, ಆದರೆ ಒಂದನ್ನು ತಿಳಿಯಿರಿ, ನಿಮ್ಮ ಆತ್ಮನ ಸೌಂದರ್ಯ ಯಾವುದಿದೆಯೋ ಅದು ನೈಸರ್ಗಿಕವಾದುದು. ನಿಮ್ಮ ಆತ್ಮನಲ್ಲಿ ಎಂತಹ ಸೌಂದರ್ಯವಿದೆಯೋ ಅಂತೆಯೇ ಅದು ನಮ್ಮ ಆತ್ಮನಲ್ಲೂ ಇದೆ. ನಾವು ಮಾತ್ರ ಈ ಆತ್ಮನ ಸೌಂದರ್ಯವನ್ನು ಮರೆತು ಶರೀರದ ಸೌಂದರ್ಯವನ್ನು ಹೆಚ್ಚಿಸುವುದರ ಕಡೆಗೆ ಗಮನ ಹರಿಸುತ್ತೇವೆ. ಆದ ಕಾರಣ ಆಚಾರ್ಯ ಕುಂದಕುಂದರು ಹೀಗೆ ಹೇಳುತ್ತಾರೆ- ''ಸವ್ವತ್ತಸುಂದರೋಲೋಗೋ'' ಇಡೀ ಲೋಕದ ಸೌಂದರ್ಯವನ್ನು ಗುರುತಿಸುವ ಶಕ್ತಿ ಆತ್ಮನಲ್ಲಿದೆ. ಆ ಆತ್ಮನು ಚೈತನ್ಯರೂಪಿಯು. ಅವನನ್ನು ಕತ್ತಿಯಿಂದ ಕಡಿಯಲು ಸಾಧ್ಯವಿಲ್ಲ, ನೀರು ಅದನ್ನು ಒದ್ದೆ ಮಾಡಲಾರದು, ಅಗ್ನಿಗೆ ಅವನನ್ನು ಉರಿಸುವ ಶಕ್ತಿಯಿಲ್ಲ, ಆದರೆ ಶರೀರ ಹಾಗಲ್ಲ ಅದನ್ನು ಕತ್ತರಿಸಬಹುದು, ನೆನಸಬಹುದು, ಉರಿಸಬಹುದು. ಆತ್ಮನು ಅಜರಾಮರ. ಅಜರ ಎಂದರೆ ಜೀರ್ಣವಾಗದುದು, ಅಮರ ಎಂದರೆ ಮರಣವಿಲ್ಲದುದು.''



ಆದ ಕಾರಣವೇ ಹೆಸರಿಡುವಾಗ 'ಅಮರ' ಎಂಬ ಹೆಸರಿಡುತ್ತಾರೆ. ಆದರೆ ಕೇವಲ ಹೆಸರಿಡುವುದರಿಂದ ಗುಣ ಬರಲಾರದು. ಅದಕ್ಕೊಂದು ರೂಪಕವಿದೆ. ಒಬ್ಬ ಪ್ರಯಾಣಿಕ ಎಲ್ಲಿಗೋ ಹೋಗುತ್ತಿದ್ದ, ದಾರಿಯಲ್ಲಿ ಒಬ್ಬ ಸುಂದರ ಹುಡುಗಿ ಬೆರಣಿಯನ್ನು ಹೊತ್ತು ಮಾರುತ್ತಿದ್ದಳು. ಆ ಪ್ರಯಾಣಿಕ ಅವಳ ಹೆಸರನ್ನು ಕೇಳಿದ. ಹುಡುಗಿ 'ನನ್ನ ಹೆಸರು ಲಕ್ಷ್ಮೀ' ಎಂದಳು. ಪ್ರಯಾಣಿಕ ಮುಂದೆ ಹೋದ. ಅಲ್ಲೊಬ್ಬ ಭಿಕ್ಷುಕ ಕಾಣಸಿಕ್ಕಿದ. ಪ್ರಯಾಣಿಕ ಅವನ ಹೆಸರು ಕೇಳಿದಾಗ ಅವನು 'ನನ್ನ ಹೆಸರು ಧನಪಾಲ' ಎಂದ. ಹೆಸರು ಧನಪಾಲ, ಮಾಡುವ ಕೆಲಸ ಭಿಕ್ಷೆ ಬೇಡುವುದು. ಇದನ್ನು ಯೋಚಿಸುತ್ತಾ ಪ್ರಯಾಣಿಕ ಮುಂದೆ ಹೋದ. ಸ್ವಲ್ಪ ದೂರ ಹೋದಾಗ ಒಂದು ಮನೆಯ ಮುಂದೆ ಅನೇಕ ಜನರು ಅಳುತ್ತಿರುವುದು ಅವನಿಗೆ ಕಾಣಿಸಿತು. ಪ್ರಯಾಣಿಕ 'ಅವರು ಏಕೆ ಅಳುತ್ತಿದ್ದಾರೆ'ಂದು ಕೇಳಿದ. ಅವರು ನಮ್ಮ ಮುಖಂಡ ಅಮರ್‌ಚಂದಜೀ, ತೀರಿಕೊಂಡರು' ಎಂದನು. ಈ ಪ್ರಯಾಣಿಕ ಅವರ ಉತ್ತರ ಕೇಳಿ ಯೋಚಿಸುತ್ತಾ ಮುಂದೆ ನಡೆದ.

**ಲಕ್ಷ್ಮೀ ಗೋಬರಿಯಾ ಬೇಚೇ, ಧನಪಾಲ್ ಮಾಂಗೇ ಭೀಖ್ ।**
**ಎಮರ್‌ಭೀ ಮರ್‌ಡಾಯೇ ಹೈಂ, ಮನವಾ ಕುಛ್ ತೋ ಸೀಖ್ ॥**

ಮಹಾನುಭಾವರೇ, ಬಹಿರಂಗ ಹೆಸರುಗಳು ಅನೇಕವಿರಬಹುದು. ಹೊರಗೆ ಅನೇಕ ವಿಚಿತ್ರತೆಗಳಿರುತ್ತವೆ, ವಿಭಿನ್ನತೆಗಳಿರುತ್ತವೆ. ಹೊಡೆಯುವುದು, ಕೊಲ್ಲುವುದು, ಅಶಾಂತಿ ಇವೆಲ್ಲ ಇಡೀ ಜಗತ್ತಿನಲ್ಲಿದೆ. ಆಸ್ತಿಗಾಗಿ ಕೊಲೆ ಇತ್ಯಾದಿಗಳು ನಡೆಯುತ್ತವೆ. ಸಂಸಾರದಲ್ಲಿ ದುಃಖಕ್ಕೆ ಅಂತ್ಯವಿಲ್ಲ, ನೀವಾದರೂ ಸ್ವಲ್ಪ ಮಟ್ಟಿಗೆ ಸುಖಿಗಳು. ಅದಕ್ಕೆ ಧರ್ಮವೇ ಕಾರಣ. ನೀವು ಪೂರ್ವ ಜನ್ಮದಲ್ಲಿ ಕೂಡಾ ಧರ್ಮ ಮಾಡಿ ಬಂದವರಿದ್ದೀರಿ. ಆದುದರಿಂದಲೇ ನಿಮ್ಮ ಅಂಗೋಪಾಂಗಗಳು, ಶರೀರ ಪೂರ್ಣವಾಗಿವೆ. ಕಣ್ಣು, ಮೂಗು, ಕಿವಿ ಎಲ್ಲ ಇಂದ್ರಿಯಗಳು ಸರಿಯಾಗಿವೆ. ಒಂದು ವೇಳೆ ಈ ಜನ್ಮವನ್ನು ವ್ಯರ್ಥಗೊಳಿಸಿದಿರೆಂದಾದರೆ ಭವಿಷ್ಯ ಕೆಟ್ಟುಹೋಗಬಹುದು. ಧರ್ಮಧ್ಯಾನ ಮಾಡಿ ಭವಿಷ್ಯವನ್ನು ಸುಧಾರಿಸಿಕೊಳ್ಳಿ, ಸ್ವರ್ಗಕ್ಕೆ ಹೋಗುವುದು, ಮೋಕ್ಷ ಸಿಗುವುದು ಎಲ್ಲವೂ ನಿಮ್ಮ ಕೈಯಲ್ಲಿದೆ. ಈ ಕ್ಷಣದಿಂದ ನೀವು ಧರ್ಮಧ್ಯಾನ ಪೂರ್ವಕ ಬಾಳುವುದಾದರೆ ನಿಮ್ಮ ಭವಿಷ್ಯ ಉಜ್ವಲವಾಗುವುದು. ಮುಂದಿನ ಭವವನ್ನು ಉತ್ತಮಗೊಳಿಸುವುದಕ್ಕಾಗಿ ಈ ಭವದಲ್ಲೇ ಧರ್ಮವನ್ನು ಹಿಡಿದು ಸಾಗಬೇಕು. ಈ ಭವವನ್ನು ಹಾಳು ಮಾಡಿದಿರೆಂದಾದರೆ, ನಾನಾ ವ್ಯಸನಗಳಲ್ಲಿ ಮುಳುಗಿದಿರೆಂದಾರೆ ಈ ಭವವೂ ಕೆಟ್ಟು ಹೋಗುತ್ತದೆ, ಭವಿಷ್ಯವು ಹಾಳಾಗುತ್ತದೆ. ಜೂಜಾಟದ ವ್ಯಸನದಿಂದಾಗಿ ಪಾಂಡವರು ರಾಜ್ಯವನ್ನು ಕಳೆದುಕೊಳ್ಳಬೇಕಾಯಿತು, ವನವಾಸಕ್ಕೆ ಹೋಗಬೇಕಾಯಿತು. ಅದೇ ರೀತಿ ಮದ್ಯಪಾನದ ಕಾರಣದಿಂದ ಅನೇಕ ಜನರು ಕಷ್ಟವನ್ನನುಭವಿಸಿದರು, ಅನುಭವಿಸುತ್ತಿದ್ದಾರೆ.

ನಮ್ಮ ಶಾಸ್ತ್ರಗಳಲ್ಲಿ ಅಂಜನ ಚೋರನಂತಹ ಅನೇಕ ಜನರ ಕಥೆಗಳ ಉಲ್ಲೇಖವಿದೆ. ಅಂಜನ ಚೋರ ಬಹಳ ಬುದ್ಧಿವಂತ ಕಳ್ಳನಾಗಿದ್ದ. ಅವನು ತನ್ನ ಕಣ್ಣುಗಳಿಗೆ ಯಾವುದೋ

ವಿಶೇಷ ಅಂಜನವನ್ನು ಹಚ್ಚಿ ರಾಜಮಹಲುಗಳಲ್ಲಿ ದೊಡ್ಡ ದೊಡ್ಡ ಶ್ರೀಮಂತರ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ. ಅವನನ್ನು ಯಾರಿಗೂ ಹಿಡಿಯಲು ಆಗುತ್ತಿರಲಿಲ್ಲ. ಒಮ್ಮೆ ಅವನು ರಾಣಿಯ ಹಾರವನ್ನು ಕದ್ದು ಹೋಗುತ್ತಿದ್ದ. ಆಗ ರಾಜನ ಸಿಪಾಯಿ ಅದನ್ನು ನೋಡಿ ಅವನ ಹಿಂದೆಯೇ ಹೋದ. ಈಗ ತಾನು ಸಿಕ್ಕಿಬೀಳುತ್ತೇನೆಂದು ತಿಳಿದು ಅಂಜನ ಚೋರನು ಓಡತೊಡಗಿದ. ದಾರಿಯಲ್ಲಿ ಒಬ್ಬ ವ್ಯಕ್ತಿ ಒಂದು ಸಾಮಾನ್ಯ ಹಸಿ ನಾರಿನ ಉಯ್ಯಾಲೆಯ ಮೇಲೆ ಕುಳಿತುಕೊಂಡು ಏನೋ ಮಂತ್ರ ಸಾಧನೆ ಮಾಡುತ್ತಿದ್ದ. ಕೆಳಗೆ ಕತ್ತಿಗಳನ್ನು ಇಡಲಾಗಿತ್ತು. ಆ ಮಂತ್ರದೊಂದಿಗೆ ಒಂದು ನಿಬಂಧವಿತ್ತು. ಮಂತ್ರದಲ್ಲಿ ಆಸ್ಥೆ ಮತ್ತು ಸಾಧನಗಳ ಕೊರತೆಯುಂಟಾದರೆ ಮಂತ್ರ ಸಿದ್ಧಿಯಾಗುತ್ತಿರಲಿಲ್ಲ ಮತ್ತು ಈ ಉಯ್ಯಾಲೆ ಮುರಿದುಹೋಗುವುದರಿಂದ ವ್ಯಕ್ತಿ ಕತ್ತಿಯ ಮೇಲೆ ಬಿದ್ದು ಸಾಯಬಹುದಾಗಿತ್ತು. ಅಂಜನ ಚೋರನು ಆ ವ್ಯಕ್ತಿಯೊಡನೆ ''ನಾನು ಕೂಡಾ ಒಮ್ಮೆ ಈ ಮಂತ್ರ ಸಾಧನೆ ಮಾಡಬಹುದೇ ?'' ಎಂದು ಕೇಳಿದ. ಆಗ ಆ ವ್ಯಕ್ತಿ ಅದಕ್ಕೆ ಒಪ್ಪಿಗೆ ಕೊಟ್ಟ. ಅಂಜನ ಚೋರ ಮೊದಲೇ ಓದಿದವನಾಗಿರಲಿಲ್ಲ, ಜೊತೆಗೆ ಭಯಭೀತನೂ ಆಗಿದ್ದ. ಅವನಿಗೆ ಸರಿಯಾದ ಕ್ರಮದಲ್ಲಿ ಮಂತ್ರ ಹೇಳಲು ಬರುತ್ತಿರಲಿಲ್ಲ, ಶುದ್ಧ ಮಂತ್ರ ಹೋಗಲಿ, ಅವನಿಗೆ ಶುದ್ಧವಾಗಿ ಮಾತನಾಡಲೂ ಬರುತ್ತಿರಲಿಲ್ಲ, ಆದರೆ ಅತ್ಯಂತ ಶ್ರದ್ಧೆಯಿಂದ, ಶಂಕಾರಹಿತವಾಗಿ ಸಾಧನೆ ಮಾಡಲು ತೊಡಗಿದ; ಈ ಕಾರಣ ಅವನಿಗೆ ಸ್ವಲ್ಪಹೊತ್ತಿನಲ್ಲೇ ಮಂತ್ರ ಸಿದ್ಧಿಯಾಯಿತು. ಮಂತ್ರ ಸಿದ್ಧಿಯಿಂದಾಗಿ ಅವನಿಗೆ ಧರ್ಮದ ಮೇಲೆ ದೃಢವಾದ ಶ್ರದ್ಧೆಯುಂಟಾಯಿತು. ಮುನಿದೀಕ್ಷಾ ಧಾರಣೆ ಮಾಡಿ ಅವನು ತಪಸ್ಸು ಮಾಡಿದನು ಮತ್ತು ಅದೇ ಭವದಲ್ಲಿ ಮೋಕ್ಷ ಪ್ರಾಪ್ತಿಯನ್ನು ಮಾಡಿಕೊಂಡನು.

ಜೈನಧರ್ಮವು ಸಂಕೀರ್ಣವಾದುದು, ಸಂಕುಚಿತವಾದುದಲ್ಲ, ಸಪ್ತವ್ಯಸನಧಾರಿ ಅಂಜನಚೋರನಿಗೆ ಕೂಡಾ ಈ ಧರ್ಮವು ತೀರ್ಥವಾಯಿತು. ಇಂದು ನಾವು ನೆರೆಹೊರೆಯವರನ್ನು ನಮ್ಮಂತೆ ಮಾಡಲು ಅಸಮರ್ಥರಾಗಿದ್ದೇವೆ. ನಮ್ಮ ಶಾಸ್ತ್ರಗಳಲ್ಲಿ ಈ ರೀತಿಯ ಅನೇಕ ಕಥೆಗಳ ಉಲ್ಲೇಖವಿದೆ. ಇನ್ನೊಂದು ಚಿಕ್ಕ ಕಥೆಯನ್ನು ನಿಮಗೆ ನಾವು ತಿಳಿಸುತ್ತೇವೆ ಕೇಳಿ-

ಒಬ್ಬ ರಾಜಕುಮಾರನಿದ್ದ, ಹೆಸರು ಅಗಡದತ್ತ, ಅವನು ರಾಜನಿಗೆ ಒಬ್ಬನೇ ಮಗ. ಒಬ್ಬನೇ ಮಗನೆಂಬ ಕಾರಣದಿಂದ ಅತ್ಯಂತ ಮುದ್ದಿನಿಂದ ಅವನನ್ನು ಸಾಕಿದರೆ ಅವನು ಕುಸಂಗತಿ ಅರ್ಥಾತ್ ಕೆಟ್ಟ ಸಹವಾಸಕ್ಕೆ ಬಿದ್ದು, ದುರ್ವ್ಯಸನಗಳಲ್ಲಿ ಮುಳುಗಿಹೋದನು. ಅವನಿಗೆ ಕಳ್ಳತನ, ಜೂಜು ಇತ್ಯಾದಿ ಎಲ್ಲ ವ್ಯಸನಗಳೂ ಅಂಟಿಕೊಂಡವು. ಲೋಕದಲ್ಲಿ ಯಾವೆಲ್ಲ ದುರ್ವ್ಯಸನಗಳಿವೆ ಅವುಗಳಲ್ಲಿ ಯಾವೊಂದನ್ನೂ ಅವನು ಬಿಟ್ಟಿರಲಿಲ್ಲ. ಆಗ ನಗರದ ದೊಡ್ಡ ದೊಡ್ಡ ಪ್ರತಿಷ್ಠಿತ ವ್ಯಕ್ತಿಗಳು ಒಂದೆಡೆ ಸೇರಿ ರಾಜನ ಬಳಿಗೆ ಹೋಗಿ ಹೀಗೆ ದೂರಿಕೊಂಡರು.- ''ಮಹಾರಾಜ್, ನಿಮ್ಮ ಪುತ್ರ ರಾಜಕುಮಾರರು ನಮ್ಮ ಭಾವೀ ರಾಜರಾಗುವವರಿದ್ದಾರೆ. ಅವರು ಈ ರೀತಿಯಲ್ಲಿ ನಾನಾ ದುರ್ವ್ಯಸನಗಳಲ್ಲಿ ಮುಳುಗಿದರಾದರೆ



ನಮ್ಮಂಥವರ ಗತಿಯೇನು ?''. ಆದರೆ ಇದಾವುದೂ ರಾಜನಿಗೆ ತಿಳಿದಿರಲಿಲ್ಲ, ಅವನು ಬಂದವರೊಡನೆ ''ನೀವೆಲ್ಲಾ ಏನು ಹೇಳುತ್ತಿದ್ದೀರಿ ? ಇವೆಲ್ಲ ಸತ್ಯವೇ ? ಇರಲಿ, ಮೊದಲು ನಾನು ಇದನ್ನು ಪರೀಕ್ಷಿಸಿ ನೋಡುತ್ತೇನೆ' ಎಂದು ಹೇಳಿ ಕಳುಹಿಸಿದನು. ಅನಂತರ ರಾಜನು ತನ್ನ ಗುಪ್ತಚರರ ಮೂಲಕ ಪರೀಕ್ಷಿಸಿ ನೋಡಿದಾಗ ಆ ಪ್ರತಿಷ್ಠಿತ ಜನರು ಬಂದು ದೂರು ಕೊಟ್ಟಿದುದೆಲ್ಲವೂ ಸತ್ಯವೆಂದು ತಿಳಿಯಿತು. ಅವರೆಲ್ಲ ''ಮಹಾರಾಜ್, ರಾಜಕುಮಾರರು ಅತ್ಯಂತ ದುರ್ವ್ಯಸನಿಗಳಾಗಿದ್ದಾರೆ' ಎಂದು ಏಕಕಂಠದಿಂದ ಹೇಳಿದೊಡನೆ ರಾಜನು ರಾಜಕುಮಾರನನ್ನು ದರ್ಬಾರಿಗೆ ಕರೆಸಿ ''ಮಗನೇ, ನೀನು ನನ್ನ ನಂತರ ಭಾವೀ ರಾಜನಾಗುವವನು, ಹೀಗೆಲ್ಲಾ ಏಕೆ ಮಾಡುತ್ತಿರುವೆ ? ಈ ದುರ್ವ್ಯಸನಗಳನ್ನೆಲ್ಲ ಬಿಟ್ಟುಬಿಡು'' ಎಂದು ಹೇಳಿನೋಡಿದನು. ಅವನಿಗಾದರೋ ಈ ಕೆಟ್ಟ ಚಟ ಆಳವಾಗಿ ಅಂಟಿಕೊಂಡಿತ್ತು. ಆದುದರಿಂದ ಅದನ್ನು ಬಿಟ್ಟುಬಿಡಲು ಅವನು ಎಂದಿಗೂ ಸಿದ್ಧನಾಗಿರಲಿಲ್ಲ, ಬೇರೆ ಉಪಾಯ ಕಾಣದೆ ರಾಜನು ತನ್ನ ಮಗನನ್ನು ದೇಶದಿಂದಲೇ ಹೊರಗೆ ಹೋಗುವಂತೆ ಮಾಡಿದನು. ಅಗಡದತ್ತ ರಾಜ್ಯ ಬಿಟ್ಟು ಹೊರಗೆ ಹೋದ. ಗೊತ್ತಿಲ್ಲದ ಊರಿಗೆ ಗೊತ್ತಿಲ್ಲದ್ದ ದಾರಿಯಲ್ಲಿ ಅವನು ಹೋಗಬೇಕಾಯಿತು.

ಅಡಗದತ್ತ ಗುಡ್ಡ-ಕಾಡು-ನದಿಗಳನ್ನೆಲ್ಲ ದಾಟಿ ಹೋಗುತ್ತಾ ಹೋಗುತ್ತಾ ಬನಾರಸಿಗೆ ಮುಟ್ಟಿದ. ಅಲ್ಲಿಯೂ ಸ್ವಲ್ಪ ಕಾಲ ತಿರುಗಾಡುತ್ತಲೇ ಇದ್ದ. ಆಗ ಅಲ್ಲೊಂದು ಗುರುಕುಲ ಅವನಿಗೆ ಕಾಣಿಸಿತು. ಆ ಗುರುಕುಲದಲ್ಲಿ ಕೇವಲ ರಾಜಕುಮಾರರಿಗೆ ಮಾತ್ರ ಕಲಿಸಲಾಗುತ್ತಿತ್ತು. ಅಲ್ಲಿ ಅಗಡದತ್ತ ಹೋಗಿ ನಿಂತುಕೊಂಡ. ಅದೇ ಸಮಯಕ್ಕೆ ಸರಿಯಾಗಿ ಒಬ್ಬರು ಅಧ್ಯಾಪಕರು ಅಲ್ಲಿ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ಅವರು ಅಗಡದತ್ತನನ್ನು ನೋಡಿದರು. ಆ ಅಧ್ಯಾಪಕರು ದೊಡ್ಡ ಜ್ಞಾನಿಗಳಾಗಿದ್ದರು, ಅನುಭವಿಗಳಾಗಿದ್ದರು. ಅಗಡತ್ತನ ಮುಖವನ್ನು ನೋಡಿ ಅವರು ಈ ಬಾಲಕನು ಯಾವುದೋ ಉಚ್ಚ ಮನೆತನಕ್ಕೆ ಸೇರಿದ ಹುಡುಗನಿರಬೇಕೆಂದು ಭಾವಿಸಿದರು. ಅವರು ಅವನನ್ನು ತಮ್ಮ ಸಮೀಪಕ್ಕೆ ಕರೆದರು. ಅವನ ಹೆಸರು, ಊರು, ವಿಳಾಸ, ನಗರ ಇತ್ಯಾದಿಗಳನ್ನೆಲ್ಲಾ ವಿಚಾರಿಸಿದರು. ಅವನು ಮೊದಲು ಸ್ವಲ್ಪ ಒರಟು ಮಾತುಗಳನ್ನಾಡಿದರೂ ಕೊನೆಗೆ ಹೆಸರು, ನಗರ ಇತ್ಯಾದಿ ವಿವರಗಳನ್ನೆಲ್ಲ ನೀಡಿದ. ಅಧ್ಯಾಪಕರು ಅವನ ಶಾರೀರಿಕ ಲಕ್ಷಣಾದಿಗಳನ್ನೆಲ್ಲ ನೋಡಿ ಈತ ದೊಡ್ಡ ಶಾಸಕನಾಗತಕ್ಕಂಥ ಯೋಗ್ಯತೆಯುಳ್ಳವನೆಂದೂ, ಆದರೆ ಕುಸಂಗತಿಯ ಕಾರಣದಿಂದ ತಪ್ಪು ದಾರಿಯಲ್ಲಿ ಹೆಜ್ಜೆ ಇಟ್ಟಿದ್ದಾನೆಂದೂ ತಿಳಿದರು. ಇವನ ಪಾಲನೆ ಪೋಷಣೆಗಳೆಲ್ಲಾ ಸರಿಯಾದ ಕ್ರಮದಲ್ಲಿ ಆಗಬೇಕಾಗಿದೆ. ಅದಕ್ಕೇನು ಮಾಡಬೇಕು ? ಹೀಗೆಲ್ಲ ಯೋಚನೆ ಮಾಡಿದ ಆ ಅಧ್ಯಾಪಕರು ಅವನನ್ನು ತನೊಂದಿಗೆ ತನ್ನ ಮನೆಗೆ ಕರೆದುಕೊಂಡು ಬಂದರು. ಮನೆಗೆ ಬಂದು ತನ್ನ ಪತ್ನಿಯೊಂದಿಗೆ ''ನನಗೊಬ್ಬಳು ತಂಗಿ ಇದ್ದಳು, ಅವಳ ಮಗನು ಇವನು. ಈಗ ಈತನ ಪರಿವಾರದವರು ಯಾರೂ ಇಲ್ಲ, ಆದ ಕಾರಣ ಈ ಬಾಲಕ ಇಲ್ಲಿಯೇ ಇರುತ್ತಾನೆ. ಈಗ ನಾವು ಅವನ ಪಾಲನೆ ಮಾಡಬೇಕು'' ಎಂದು

ಸಮಯಪ್ರಜ್ಞೆಗೆ ಅನುಗುಣವಾಗಿ ಹೇಳಿದರು. ಅವರ ಪತ್ನಿಗೆ ಇದು ಸತ್ಯವಿರಬೇಕೆಂದು ಅನ್ನಿಸಿ ಒಪ್ಪಿದಳು ಮಾತ್ರವಲ್ಲ ಆಕೆ ಆತನನ್ನು ಒಳ್ಳೆಯ ರೀತಿಯಲ್ಲಿ ನೋಡಿಕೊಂಡಳು. ಅಧ್ಯಾಪಕರು ವಿದ್ಯಾಭ್ಯಾಸದ ಜೊತೆಗೆ ಅನೇಕ ಕಲೆಗಳನ್ನು ಕಲಿಸಿದರು.

### ಬಹತ್ತರ್ ಕಲಾ - ಕುಸಲಾ ಪಂಡಿಯಾ ।

ಒಂದು ದಿನ ನಗರದಲ್ಲಿ ಒಂದು ಆನೆ ದೊಡ್ಡ ಉತ್ಪಾತವೆಬ್ಬಿಸಿತು. ಸೈನಿಕರಿಗೆ ಕೂಡಾ ಆ ಆನೆಯನ್ನು ಹಿಡಿಯುವುದಕ್ಕಾಗಲಿಲ್ಲ, ಆಗ ಇಂತಹ ಕಲೆಯಲ್ಲಿ ಪರಿಣತನಾದ ಅಗಡದತ್ತನು ಆ ಆನೆಯನ್ನು ಹಿಡಿದು ತನ್ನ ವಶಕ್ಕೆ ತೆಗೆದುಕೊಂಡನು. ಅಷ್ಟರಲ್ಲಿ ಸಮಸ್ತ ನಗರದಲ್ಲಿ ಅವನ ಹೆಸರು ಹಬ್ಬಿತು. ಅಲ್ಲಿಯ ಮಹಾರಾಜನವರೆಗೂ ಅವನ ಕೀರ್ತಿ ಹೋಯಿತು. ರಾಜನು ಅವನನ್ನು ತನ್ನಲ್ಲಿಗೆ ಕರೆಸಿ ಅವನ ಪರಿಚಯ ಕೇಳಿ ತಿಳಿದುಕೊಂಡನು.

ಕೆಲವು ದಿನಗಳ ಬಳಿಕ ಅಲ್ಲಿ ರಾಜಮಹಲ್ಲಿನಲ್ಲಿ ಒಂದು ಕಳ್ಳತನ ನಡೆಯಿತು. ಈ ಹಿಂದೆಯೂ ಅಲ್ಲಿ ಅನೇಕ ಸಲ ಕಳ್ಳತನಗಳಾಗಿದ್ದವು. ಆದರೆ ಕಳ್ಳರ ಪತ್ತೆಯಾಗಿರಲಿಲ್ಲ, ಅದಕ್ಕಾಗಿ ಎಲ್ಲರೂ ದುಃಖಿತರಾಗಿದ್ದರು. ಆಗಲೇ ರಾಜನಿಗೆ ಅಗಡದತ್ತನ ನೆನಪಾಯಿತು. ಕೂಡಲೇ ರಾಜನು ಅಗಡದತ್ತನನ್ನು ಕರೆಸಿ "ಅಯ್ಯಾ, ನೀನು ತುಂಬಾ ಚುರುಕು ಬುದ್ಧಿಯುಳ್ಳವನಾಗಿರುವೆ. ಆದ ಕಾರಣ ಈಗ ಈ ರಾಜಮಹಲಿನಲ್ಲಿ ನಡೆದ ಕಳ್ಳತನದ ಪತ್ತೆ ಹಚ್ಚುವ ಕೆಲಸ ಮಾಡು" ಎಂದು ಹೇಳಿ ಆ ಕೆಲಸವನ್ನು ಅವನಿಗೆ ಒಪ್ಪಿಸಿದನು. ಅದನ್ನು ಅಗಡದತ್ತನು ಒಪ್ಪಿಕೊಂಡು ಅದರ ಪೂರ್ವಾಪರ ವಿಚಾರಗಳನ್ನು ಸಂಗ್ರಹಿಸಿ ಆ ಕಳ್ಳನು ಇದೇ ರಸ್ತೆಯಲ್ಲಿ ಬರುವನೆಂದು ತಿಳಿದನು. ಅಗಡದತ್ತನು ಅಮಾವಾಸ್ಯೆಯ ರಾತ್ರಿ ಒಂದು ದಿನ ಅದೇ ರಸ್ತೆಯ ಓಣಿಯಲ್ಲಿ ಒಂದು ಕಡೆ ಮಲಗಿಕೊಂಡನು. ಕಳ್ಳನು ಬಂದ. ಅಗಡದತ್ತನನ್ನು ನೋಡಿದ. ಅನಂತರ ನೀನು ಯಾರೆಂದು ಕೇಳಿದ. ಅಗಡದತ್ತನು "ನಾನೊಬ್ಬ ಕಳ್ಳ, ಸ್ವಲ್ಪ ಹೊತ್ತಿನಲ್ಲಿ ಕಳ್ಳತನ ಮಾಡಲು ಹೋಗುತ್ತಿದ್ದೇನೆ" ಎಂದು ಹೇಳಿದ. ಆಗ ಕಳ್ಳನು "ಈಗ ಎಲ್ಲಿ ಕಳ್ಳತನ ಮಾಡುವುದು?" ಎಂದು ಕೇಳಿದ. ಅಗಡದತ್ತನು ಒಬ್ಬ ಸೇಠನ ಹೆಸರು ಮತ್ತು ವಿಳಾಸವನ್ನು ಅವನಿಗೆ ಕೊಟ್ಟನು. ಆ ಎಲ್ಲ ಕಳ್ಳರೂ ಕೂಡ ಅಗಡದತ್ತನ ಜೊತೆಯಲ್ಲಿ ಕಳ್ಳತನ ಮಾಡಲು ಹೋದರು. ಅಗಡದತ್ತನು ಮೊದಲೇ ಸಿಪಾಯಿಗಳ ವ್ಯವಸ್ಥೆ ಮಾಡಿದ್ದನು. ಅವನು ತಿಳಿಸಿದ ಸ್ಥಳಕ್ಕೆ ಮುಟ್ಟಿದ ಕೂಡಲೇ ಕಳ್ಳರನ್ನು ಹಿಡಿಯುವ ಉಚಿತ ಸಮಯವನ್ನು ನೋಡಿಕೊಂಡು ಸಿಪಾಯಿಗಳಿಗೆ ಸಂಕೇತ ನೀಡಿದನು. ಎಲ್ಲ ಸಿಪಾಯಿಗಳು ಓಡಿ ಬಂದರು ಮತ್ತು ಕಳ್ಳರನ್ನು ಹಿಡಿದೇ ಬಿಟ್ಟರು. ಅನಂತರ ಆ ಕಳ್ಳರಿಂದ ಇಷ್ಟರ ತನಕ ಕಳ್ಳತನ ಮಾಡಿ ಸಂಗ್ರಹವಾಗಿದ್ದ ಏನೇನು ಧನಕನಕಾದಿ ವಸ್ತುಗಳಿದ್ದವೋ ಅವೆಲ್ಲವನ್ನೂ ಸಿಪಾಯಿಗಳು ವಶಪಡಿಸಿಕೊಂಡರು. ರಾಜನು ಯೋಚಿಸಿದ- "ಧನಕನಕಾದಿಗಳೇನೋ ಸಿಕ್ಕಿದವು, ಆದರೆ ಇವರಿಗೆ ಎಂತಹ ಶಿಕ್ಷೆ ಕೊಡಬಹುದು ?" ಕೊನೆಗೆ ಅವನು ಈ ಕಳ್ಳರನ್ನು ತನ್ನ ದೇಶದಿಂದ ಹೊರಗೆ ಹೋಗುವ ಶಿಕ್ಷೆ ನೀಡಿದನು. ಹಿಂದೆಲ್ಲಾ



ದೇಶದಿಂದ ಹೊರಗೆ ಉಚ್ಚಾಟಿಸುವ ಶಿಕ್ಷೆ ಬಹಳ ದೊಡ್ಡದೆಂದು ಪರಿಗಣಿಸಲಾಗುತ್ತಿತ್ತು. ಆದುದರಿಂದಲೇ ಅದರ ಪರಿಪಾಟಿ ಕೂಡಾ ಜೋರಾಗಿತ್ತು.

ರಾಜನಿಗೆ ಅಗಡದತ್ತನ ಮೇಲೆ ಬಹಳ ಸಂತೋಷ ಉಂಟಾಗಿತ್ತು. ಅವನು ಅಗಡದತ್ತನಿಗೆ ಒಂದು ಒಳ್ಳೆಯ ಇನಾಮು (ಪಾರಿತೋಷಕ) ಕೊಡಲು ಇಚ್ಛಿಸಿದ. ಆ ವಿಚಾರವನ್ನು ಪ್ರಕಟಪಡಿಸಿದಾಗ ಅಗಡದತ್ತನು "ತಾವು ನನಗೆ ಇನಾಮು ಕೊಡುವುದಾದರೆ ಬೇರೇನನ್ನೂ ನಾನು ಬಯಸುವುದಿಲ್ಲ, ನನಗೆ ಒಂದು ಕುದುರೆ ಮತ್ತು ರಥವನ್ನು ಕೊಡಿರಿ. ಅದರಲ್ಲಿ ನಾನು ನನ್ನ ನಗರಕ್ಕೆ ಹೋಗಲು ಬಯಸುತ್ತೇನೆ" ಎಂದನು. ಕೂಡಲೇ ರಾಜನು ಅವನಿಗೆ ಕುದುರೆ ಮತ್ತು ರಥವನ್ನು ಕೊಟ್ಟನು. ಅಗಡದತ್ತನು ಯಾವ ಅಧ್ಯಾಪಕರ ಮನೆಯಲ್ಲಿದ್ದುಕೊಂಡು ಅಧ್ಯಯನ ಮಾಡಿದ್ದನೋ, ಆ ಮನೆಯಲ್ಲಿ ಮದನಮಂಜರಿ ಎಂಬ ಹುಡುಗಿಯೊಬ್ಬಳಿದ್ದಳು. ಅಗಡದತ್ತನಿಗೆ ಅವಳೊಂದಿಗೆ ಮಿತ್ರತ್ವ ಉಂಟಾಗಿತ್ತು. ಅಂತೆಯೇ ಅವನು ಮದನ ಮಂಜರಿಯನ್ನು ಸಂಧಿಸಿ ಅವಳನ್ನು ತನ್ನೊಂದಿಗೆ ಕರೆದುಕೊಂಡು ತನ್ನ ನಗರದ ಕಡೆಗೆ ಹೋದನು. ದಾರಿಯಲ್ಲಿ ಅವನಿಗೆ ಢಕಾಯಿತರು ಕಾಣಸಿಕ್ಕಿದರು. ಅವರು ಅಗಡದತ್ತನನ್ನು ಕೊಲ್ಲಲು ಇಚ್ಛಿಸುತ್ತಿದ್ದರು. ಆದರೆ ಅಗಡದತ್ತನು ಕತ್ತಿಯನ್ನೆತ್ತಿ ಯುದ್ಧ ಮಾಡಲು ತೊಡಗಿದಾಗ ಆ ಸಮಸ್ತ ಢಕಾಯಿತರು ಓಡಿಹೋದರು. ಯಾವಾಗ ಅವನು ತನ್ನ ನಗರಕ್ಕೆ ಬಂದು ತಂದೆಯನ್ನು ನೋಡಿದನೋ ಆಗ ಅವನ ತಂದೆಯು ಅವನಿಗೆ ಬಾಗಿಲು ತೆಗೆಯಲಿಲ್ಲ. ಈ ಘಟನೆಯಿಂದ ಅಗಡದತ್ತನು ಹೀಗೆ ಯೋಚಿಸಿದ- "ಅರೆ! ನಾನು ಇಷ್ಟೊಂದು ಅಧ್ಯಯನ ಮಾಡಿ ಹೆಸರುವಾಸಿಯಾದರೂ, ಇಲ್ಲಿಗೆ ಬಂದಾಗ ತಂದೆ-ತಾಯಿ ನನ್ನನ್ನು ತಿರಸ್ಕರಿಸಿರುವರಲ್ಲಾ!" ಎಂದು ವೈರಾಗ್ಯ ತಾಳಿದ ಅವನು ಅಲ್ಲಿಂದಲೇ ಹಿಂದಿರುಗಿ ಒಂದು ಪರ್ವತದ ಮೇಲೇರಿ ನೋಡಿದಾಗ ಅಲ್ಲೊಬ್ಬರು ಮುನಿರಾಜರು ತಪಸ್ಸು ಮಾಡುತ್ತಿರುವುದು ಕಂಡಿತು. ಅಗಡದತ್ತನು ಮದನಮಂಜರಿಯ ಜೊತೆಯಲ್ಲೇ ಆ ಮುನಿರಾಜರಿಂದ ದೀಕ್ಷಾಧಾರಣೆ ಮಾಡಿದನು. ಅಲ್ಲಿಯೇ ಅವರಿಗೆ ಬನಾರಸಿನಲ್ಲಿ ಹಿಡಿಯಲ್ಪಟ್ಟ ಯಾವ ಢಕಾಯಿತರಿದ್ದರೋ ಅವರು ಜೊತೆಗೂಡಿದರು. ಆ ಢಕಾಯಿತರೂ ಕೂಡ ದೀಕ್ಷಾಧಾರಣೆ ಮಾಡಿಕೊಂಡಿದ್ದರು. ಹೀಗೆ ಎಲ್ಲರೂ ತಪಸ್ಸು ಮಾಡಿ ಸದ್ಗತಿ ಪ್ರಾಪ್ತಿ ಮಾಡಿಕೊಂಡರು.

ಮನುಷ್ಯನ ಜೀವನ ಯಾವಾಗ ಎಲ್ಲಿ ತಿರುಗು ಮುರುಗು ಆಗುತ್ತದೆ ಎಂಬುದು ಗೊತ್ತಾಗುವುದಿಲ್ಲ, ದರೋಡೆಕೋರನು ಕೂಡಾ ಸಾಧುವಾಗಿ ಸದ್ಗತಿ ಪಡೆಯುತ್ತಾನೆ. ಜೈನಧರ್ಮದಲ್ಲಿ ಕಥೆಗಳ ಮಾಧ್ಯಮದಿಂದ ಶಿಕ್ಷಣ ನೀಡಲಾಗುತ್ತದೆ. ಜೈನ ಕಥಾ ಸಾಹಿತ್ಯ ಅನುಪಮವಾದುದು. ರಾಹುಲ್ ಸಾಂಕೃತ್ಯಾನಂದರು "ಕಥಾ ಲೇಖಿನಗಳಿಗೆ ಜೈನ ಕಥಾ ಸಾಹಿತ್ಯದಿಂದಲೇ ಪ್ರೇರಣೆ ದೊರಕಿದುದು" ಎಂದು ಬರೆದಿದ್ದಾರೆ. ಬಲದೇವ್ ಉಪಾಧ್ಯಾಯ, ರಾಮಸಿಂಹ ತೋಮರ್ ಮೊದಲಾದ ವಿದ್ವಾಂಸರು ಕೂಡಾ ಇತರ ಸಾಹಿತ್ಯಗಳಲ್ಲಿ ಅನೇಕ ಕಥೆಗಳು ಜೈನರಿಂದಲೇ ಬಂದವುಗಳೆಂದು ಬರೆದಿದ್ದಾರೆ. ಅಪಭ್ರಂಶ ಭಾಷೆಯಲ್ಲಿ ರಚಿತವಾದ 'ಸುಗಂಧದಶಮಿ' ಎಂಬ ಕಥೆಯು ಜರ್ಮನಿಯಲ್ಲಿ ಕಲಿಸಲಾ

ಗುತ್ತದೆ. ನಮ್ಮಲ್ಲಿ ಕಥೆಗಳ ಮಾಧ್ಯಮದಿಂದ ಧರ್ಮವನ್ನು ತಿಳಿಸಿಕೊಡುವ ಪರಂಪರೆಯಿದೆ. ''ಪ್ರಥಮಾನುಯೋಗ'' ಕಥಾ ಸಾಹಿತ್ಯವು ಅದಕ್ಕೆ ಉದಾಹರಣೆಯಾಗಿದೆ.

ಕೆಲವು ವರ್ಷಗಳ ಹಿಂದೆ ರಷ್ಯಾದಿಂದ ಒಂದು ಅಧ್ಯಯನ ತಂಡವು ಭಾರತಕ್ಕೆ ಬಂದಿತ್ತು. ಡಿಲ್ಲಿಯ ಟಂಡನ್ ಭವನದಲ್ಲಿ ಅವರ ಕಾರ್ಯಕ್ರಮವಿತ್ತು. ನಾವು ಕೂಡಾ ಅಲ್ಲಿಗೆ ಹೋಗಿದ್ದೆವು. ಆ ತಂಡದ ಅಧ್ಯಕ್ಷ ಚೇಲಿಸೇವ ಎಂಬುವವರಾಗಿದ್ದರು. ನಾವು ಅವರಿಗೆ ಒಂದು ಪುಸ್ತಕ ಕೊಟ್ಟೆವು. ಅವರು ಆ ಪುಸ್ತಕದ ಹಾಳೆಗಳನ್ನು ಮಗುಚುತ್ತಾ 'ಮುನೀಜಿ, ನಾವು ಈ ಗೂಢ ತಥ್ಯವನ್ನು ತಿಳಿಯಲಾರೆವು' ಎಂದು ಹೇಳಿದರು. 'ನಮಗೆ ಜೈನ ಕಥೆಗಳ ಮಾಧ್ಯಮದಿಂದ ತಿಳಿಸಿಕೊಡಿರಿ' ಎಂದು ಹೇಳಿದರು. ಅವರು ಮತ್ತೆ ಹೇಳಿದರು- ''ಜೈನರ 'ಧರ್ಮಪರೀಕ್ಷಾ' ಎಂಬ ಗ್ರಂಥವೊಂದಿದೆ. ಅದು ಕಥೆಗಳ ಸಂಕಲನ. ಅದನ್ನು ರಷಿಯನ್ ಭಾಷೆಗೆ ಅನುವಾದ ಮಾಡಿಸಿದೆವು ಮತ್ತು ಈಗ ಅದು ನಮ್ಮ ರಷ್ಯಾದಲ್ಲಿ ಕಲಿಸಲಾಗುತ್ತಿದೆ.'' ಎಂದು ಹೇಳಿದರು.

'ಧರ್ಮಪರೀಕ್ಷಾ' ಕಥಾತ್ಮಕ ಗ್ರಂಥವಾಗಿರುತ್ತದೆ. ಅದರಲ್ಲಿ ಮಿಥ್ಯಾತ್ವವನ್ನು ದೂರಗೊಳಿಸುವುದಕ್ಕಾಗಿ ಕಥೆಗಳ ಮಾಧ್ಯಮದಿಂದ ತಿಳಿವಳಿಕೆ ನೀಡಲಾಗಿದೆ. ಇದರಲ್ಲಿ ವಾಯುಕುಮಾರ ಮತ್ತು ಅಗ್ನಿಕುಮಾರ ಎಂಬ ಎರಡು ಪ್ರಮುಖ ಪಾತ್ರಗಳಿವೆ. ಇಬ್ಬರೂ ಮಿತ್ರರು. ಈ ಇಬ್ಬರ ಮಾಧ್ಯಮದಿಂದಲೇ ಅನೇಕ ಕಥೆಗಳ ಮೂಲಕ ಸಿದ್ಧಾಂತಗಳು ನಿರೂಪಿಸಲ್ಪಟ್ಟಿವೆ.

ಒಮ್ಮೆ ವಾಯುಕುಮಾರನು ಜನರನ್ನು ಒಂದುಗೂಡಿಸಿ ಹೀಗೆ ಹೇಳಿದನು- ''ನಾನೊಂದು ಬೆಕ್ಕನ್ನು ತಂದಿದ್ದೇನೆ. ಈ ಬೆಕ್ಕು ಎಲ್ಲಿ ವಾಸಿಸುತ್ತದೋ ಅಲ್ಲಿಂದ ಹನ್ನೆರಡು ಮೈಲು ದೂರದವರೆಗೆ ಇರುವ ಇಲಿಗಳು ಈ ಬೆಕ್ಕಿನ ವಾಸನೆಯಿಂದ ಇಲ್ಲಿಗೆ ಬರಲಾರವು. ಮಾತ್ರವಲ್ಲ, ಅಲ್ಲಿರುವ ಎಲ್ಲ ಇಲಿಗಳೂ ಓಡಿ ಹೋಗುತ್ತವೆ. ಆಗ ಎಲ್ಲರೂ ಈ ಬೆಕ್ಕನ್ನು ನೋಡಬೇಕೆಂಬ ಜಿಜ್ಞಾಸೆಯನ್ನು ವ್ಯಕ್ತಗೊಳಿಸಿದರು. ವಾಯುಕುಮಾರನು ತನ್ನ ಜೋಳಿಗೆಯಿಂದ ಬೆಕ್ಕನ್ನು ಹೊರತೆಗೆದು ಜನರೆದುರು ಇಟ್ಟನು. ಆಗ ಬೆಕ್ಕಿನ ಕಿವಿಯಿಂದ ಸ್ವಲ್ಪ ರಕ್ತ ಹೊರಬರುತ್ತಿರುವುದನ್ನು ಜನರು ನೋಡಿದರು. 'ಇದೇನು ?' ಎಂದರು. ವಾಯುಕುಮಾರನು ಆಗ ''ಅದೋ, ಅದು ಮತ್ತೇನಿಲ್ಲ, ಕೆಲವು ಇಲಿಗಳು ಆ ಬೆಕ್ಕಿನ ಕಿವಿಯನ್ನು ಕಚ್ಚಿ ತುಂಡು ಮಾಡಿಬಿಟ್ಟವು, ಆದರಿಂದಾಗಿ ರಕ್ತ ಸುರಿಯುತ್ತಿದೆ'' ಎಂದನು. ಈ ಮಾತು ಕೇಳಿ ಜನರಿಗೆ ಆಶ್ಚರ್ಯ. ''ಒಮ್ಮೆ ನೀವು ಹೇಳಿದಿರಿ, ಬೆಕ್ಕಿನ ವಾಸನೆ ತಿಳಿದ ಇಲಿಗಳು ಹನ್ನೆರಡು ಮೈಲುಗಳಷ್ಟು ದೂರ ಓಡಿ ಹೋಗುತ್ತವೆ ಮತ್ತು ಅಷ್ಟು ದೂರದಿಂದ ಇಲ್ಲಿಗೆ ಬರುವುದಿಲ್ಲ'' ಎಂದು. ಈಗ ಆ ಇಲಿಗಳೇ ಬೆಕ್ಕಿನ ಹತ್ತಿರ ಬಂದು ಅದರ ಕಿವಿಯನ್ನು ಕಚ್ಚಿದವೆಂದರೆ ಈ ಮಾತಿನ ಅರ್ಥವೇನು ?'' ಎಂದು ಕೇಳಿದರು. ಆಗ ವಾಯುಕುಮಾರ ಹೇಳಿದ- ''ಹೌದು, ನೀವು ಕೂಡಾ ಇದೇ ರೀತಿಯ ಚಮತ್ಕಾರಗಳ ಮಾತುಗಳಿಂದ ಲೋಕದ ಜನರನ್ನು ಭ್ರಮಿತಗೊಳಿಸುವುದಿಲ್ಲವೇ ?''



ಮನುಷ್ಯನ ಮನಸ್ಸು ಮಾಯಾಚಾರದಿಂದ ಎಷ್ಟೊಂದು ತುಂಬಿಕೊಂಡಿದೆ ? ಇದನ್ನು ಬಾಹ್ಯದಿಂದ ಯಾರೂ ಗುರುತಿಸಲಾರರು. ಇದರ ಸಂಬಂಧದಲ್ಲಿ 'ಧರ್ಮಪರೀಕ್ಷಾ' ಗ್ರಂಥದಲ್ಲಿ ಒಂದು ಉತ್ತಮ ಕಥೆ ಬಂದಿದೆ, ಅದನ್ನು ಕೇಳಿ.

ಒಬ್ಬ ಬ್ರಾಹ್ಮಣನಿದ್ದ, ಅವನಿಗೆ ಒಬ್ಬಳು ರೂಪವತಿಯಾದ ಮಗಳಿದ್ದಳು. ಒಮ್ಮೆ ಆ ಬ್ರಾಹ್ಮಣನಿಗೆ ಕಾಶಿಗೆ ಹೋಗಬೇಕೆಂಬ ಇಚ್ಛೆಯಾಯಿತು. ಆದರೆ ಮಗಳ ಬಗ್ಗೆ ಚಿಂತೆ. ಅವಳನ್ನು ಯಾರಲ್ಲಿ ಬಿಟ್ಟು ಹೋಗುವುದು ? ಕೊನೆಗೆ ಯೋಚನೆ ಮಾಡಿ ಯಮರಾಜನ ಹತ್ತಿರ ಹೀಗೆ ಹೇಳಿದನಂತೆ- ''ಯಮರಾಜಾ ನಾನು ನನ್ನ ಮಗಳನ್ನು ನಿನ್ನ ರಕ್ಷಣೆಯಲ್ಲಿ ಬಿಟ್ಟು ಕಾಶಿಗೆ ಹೋಗುತ್ತಿದ್ದೇನೆ. ನೀನು ಅವಳನ್ನು ನಾನು ಬರುವವರೆಗೆ ನೋಡಿಕೊಳ್ಳಬೇಕು. ಅವಳ ರಕ್ಷಣೆಗೆ ನೀನೊಬ್ಬನೇ ಸಮರ್ಥನೆಂದು ತಿಳಿದು ಈ ಹೊಣೆಯನ್ನು ನಿನಗೆ ಕೊಟ್ಟಿದ್ದೇನೆ.'' ಅದನ್ನು ಕೇಳಿದ ಯಮರಾಜ 'ಆಗಲಿ' ಎಂದು ಒಪ್ಪಿಕೊಂಡು ಆಕೆ ತನ್ನ ಮನೆಯಲ್ಲಿ ಇಟ್ಟುಕೊಂಡನು. ಆದರೆ ಅವನು ಆಕೆಯ ಸೌಂದರ್ಯವನ್ನು ನೋಡಿ, ಇಂತಹ ಸೌಂದರ್ಯವತಿಯ ಸುರಕ್ಷೆ ಹೇಗೆ ಮಾಡುವುದೆಂದು ಚಿಂತಿತನಾದನು. ತುಂಬಾ ಯೋಚಿಸಿದಾಗ ಅವನಿಗೊಂದು ಒಳ್ಳೆಯ ಉಪಾಯ ಹೊಳೆಯಿತು. ಅದರಂತೆ ಅವನು ಆಕೆಯನ್ನು ನುಂಗಿ ತನ್ನ ಹೊಟ್ಟೆಯಲ್ಲಿರಿಸಿಕೊಂಡನು. ಊಟಕ್ಕೆ ಕುಳಿತುಕೊಳ್ಳುವಾಗಲೆಲ್ಲ ಅವಳನ್ನು ಹೊರಗೆ ತೆಗೆಯುತ್ತಿದ್ದ. ಒಂದು ದಿನ ಅವನು ಗಂಗಾಸ್ನಾನಕ್ಕೆ ಹೋದನು. ಸ್ನಾನಕ್ಕೆ ಇಳಿಯುವ ಮೊದಲು ಅವಳನ್ನು ಹೊಟ್ಟೆಯಿಂದ ಹೊರತೆಗೆದು ನದಿಯ ಕಿನಾರೆಯಲ್ಲಿ ಕುಳ್ಳಿರಿಸಿ ತಾನು ಸ್ನಾನಕ್ಕಿಳಿದ. ಅದೇ ಹೊತ್ತಿಗೆ ಆ ಕಡೆಯಿಂದ ಅಗ್ನಿ ಕುಮಾರ ಬಂದ. ಅವನು ಈ ರೂಪವತಿಯನ್ನು ನೋಡುತ್ತಾ ನೋಡುತ್ತಾ ಆ ರೂಪಾತಿಶಯವನ್ನು ತಡೆಯಲಾರದೆ ತನ್ಮಯನಾದ. ಆ ಕನ್ಯೆಯು ಕೂಡಾ ಅಗ್ನಿಕುಮಾರನ ಸೌಂದರ್ಯವನ್ನು ನೋಡಿ ಅದರಿಂದ ಪ್ರಭಾವಿತಳಾಗಿದ್ದಳು. ಇಬ್ಬರೂ ಪರಸ್ಪರ ಮಾತನಾಡಿಕೊಂಡರು. ಅಷ್ಟು ಹೊತ್ತಿಗೆ ಯಮರಾಜ ಸ್ನಾನ ಮುಗಿಸಿ ಬರುವುದು ಕಾಣಿಸಿತು. ಆಕೆ ಭಯಭೀತಳಾದಳು. ಈಗ ಅಗ್ನಿಕುಮಾರನು ಯಮರಾಜನಿಗೆ ಕಾಣಿಸದಂತೆ ಮಾಡುವುದು ಹೇಗೆ ಎಂಬ ವಿಚಾರದಲ್ಲಿ ಏನೂ ಹೊಳೆಯದೆ ಇದ್ದಾಗ ಕೊನೆಗೆ ತಾನೇ ಅವನನ್ನು ನುಂಗಿ ತನ್ನ ಉದರದಲ್ಲಿಟ್ಟುಕೊಂಡಳು. ಯಮರಾಜ ಬಂದಾಗ ಇವಳೊಬ್ಬಳೇ ಕಾಣಿಸಿದಳು. ಅವಳ ಹೊಟ್ಟೆಯಲ್ಲಿ ಒಬ್ಬ ಅಡಗಿದ್ದಾನೆಂದು ಅವನಿಗೇನು ಗೊತ್ತು ? ಆತ ಎಂದಿನಂತೆ ಆಕೆಯನ್ನು ನುಂಗಿ ತನ್ನ ಹೊಟ್ಟೆಯಲ್ಲಿಟ್ಟುಕೊಂಡ.

ಅತ್ತ ಅಗ್ನಿಕುಮಾರನ ಮಿತ್ರನಾದ ವಾಯುಕುಮಾರನು ತನ್ನ ಗೆಳೆಯನನ್ನು ಕಾಣದೆ ಚಿಂತಿತನಾದ; ಅಗ್ನಿಕುಮಾರ ಹೋದದ್ದಾದರೂ ಎಲ್ಲಿಗೆ ? ಎಂದು ಯೋಚಿಸಿ ಅವನನ್ನು ಹುಡುಕುತ್ತಾ ಎಲ್ಲ ಊರುಗಳಲ್ಲೂ ಸುತ್ತಾಡಿದ. ಕೊನೆಗೆ ಜ್ಯೋತಿಷಿಯ ಬಳಿಗೆ ಹೋಗಿ ತನ್ನ ಮಿತ್ರನ ವಿಚಾರವನ್ನು ಹೇಳಿಕೊಂಡ. ಜ್ಯೋತಿಷಿ ತುಂಬಾ ಲೆಕ್ಕಾಚಾರ ಮಾಡಿ ವಾಯುಕು

ಮಾರನೊಡನೆ ವಿಷಯ ತಿಳಿಸಿ ಹೀಗೆ ಹೇಳಿದ- "ನಿನಗೆ ನಿನ್ನ ಮಿತ್ರ ಸಿಗಬೇಕೆಂದಾದರೆ ನಾನು ಹೇಳಿದ ಹಾಗೆ ಮಾಡಬೇಕು. ಅವನೀಗ ಯಮರಾಜನ ವಶದಲ್ಲಿದ್ದಾನೆ. ನೀನು ಯಮರಾಜನನ್ನು ನಿನ್ನ ಮನೆಗೆ ಭೋಜನಕ್ಕೆ ಆಮಂತ್ರಿಸು. ಭೋಜನಕ್ಕೆ ಬಡಿಸುವಾಗ ಮೂರು ತಟ್ಟೆಗಳನ್ನು ಅವನ ಮುಂದಿಟ್ಟು ಅದಕ್ಕೆ ಬಡಿಸು. ನಿನ್ನ ಕೆಲಸವಾಗುತ್ತದೆ, ಹೋಗು" ಎಂದನು. ಜ್ಯೋತಿಷಿಯಿಂದ ಇಷ್ಟನ್ನು ಕೇಳಿದ ವಾಯುಕುಮಾರನು ಅಲ್ಲಿಂದ ಹೊರಟು ಮನೆಗೆ ಬಂದನು. ಅವನು ಜ್ಯೋತಿಷಿ ಹೇಳಿದಂತೆ ಯಮರಾಜನನ್ನು ತನ್ನ ಮನೆಗೆ ಭೋಜನಕ್ಕೆ ಆಮಂತ್ರಿಸಿದನು. ಯಮರಾಜ ಬಂದೊಡನೆ ಅವನನ್ನು ಯಥೋಚಿತವಾಗಿ ಉಪಚರಿಸಿ ಊಟಕ್ಕೆ ಕುಳ್ಳಿರಿಸಿದನು. ಅವನ ಮುಂದೆ ಮೂರು ತಟ್ಟೆಗಳನ್ನಿಟ್ಟು ಬಡಿಸಿದನು. ಆಗ ಯಮರಾಜನು "ಇನ್ನೆರಡು ತಟ್ಟೆಗಳಿವೆಯಲ್ಲಾ ಇವು ಯಾರಿಗೆ? ಊಟಕ್ಕೆ ಇನ್ನಾರಾದರೂ ಬರುವವರಿದ್ದಾರೆಯೇ?" ಎಂದು ಕೇಳಿದನು. ಆಗ ವಾಯುಕುಮಾರ "ನಿನ್ನ ಹೊಟ್ಟೆಯೊಳಗೆ ಒಬ್ಬಳಿದ್ದಾಳಲ್ಲಾ! ಅವಳನ್ನು ಹೊರಗೆ ಹಾಕು" ಎಂದು ಹೇಳಿದ. ಯಮರಾಜ ಹಾಗೆಯೇ ಮಾಡಿದ. ಬ್ರಾಹ್ಮಣ ಕನ್ಯೆ ಹೊರಗೆ ಬಂದಳು. ಈಗ ಯಮರಾಜನಿಗೆ ಆಶ್ಚರ್ಯ ! ತನ್ನ ಹೊಟ್ಟೆಯೊಳಗೆ ಆಕೆ ಇದ್ದಾಳೆಂದು ಈ ವಾಯು ಕುಮಾರನಿಗೆ ತಿಳಿದುದಾದರೂ ಹೇಗೆ ? ಎಂದು. ಅದರೊಂದಿಗೆ ಈತ ಮೂರು ತಟ್ಟೆಗಳಲ್ಲಿ ಭೋಜನ ಬಡಿಸಿ ಏಕೆ ಇಟ್ಟನೆಂಬುದು ಇನ್ನೊಂದು ಕುತೂಹಲದ ಸಂಗತಿಯಾಗಿತ್ತು. ಆಗ ವಾಯುಕುಮಾರನು ಈ ಕನ್ಯೆಯೊಂದಿಗೆ "ನೀನೀಗ ನನ್ನ ಮಿತ್ರನಾದ ಅಗ್ನಿಕುಮಾರನನ್ನು ಹೊರತೆಗೆ ಎಂದನು. ಯಮರಾಜನಿಗೆ ಆಗಲೂ ಆಶ್ಚರ್ಯ! "ನಾನು ಇಷ್ಟೊಂದು ಜಾಣತನದಿಂದ ಕನ್ಯೆಯನ್ನು ನನ್ನ ಹೊಟ್ಟೆಯಲ್ಲಿ ಸುರಕ್ಷಿತವಾಗಿರಿಸಿದರೆ ಇವನಿಗೆ ಹೇಗೆ ತಿಳಿಯಿತು ? ಇಲ್ಲಿಯೂ ಆಕೆಯನ್ನು ಸುರಕ್ಷಿತವಾಗಿ ಇರಿಸಿಕೊಳ್ಳಲಾಗಲಿಲ್ಲವಲ್ಲಾ ?" ಎಂದುಕೊಂಡು ತನ್ನ ಅಸಾಮರ್ಥ್ಯತೆಯನ್ನು ತಿಳಿದುಕೊಂಡ.

ನೋಡಿ, ಮನಸ್ಸು ಎಷ್ಟೊಂದು ಚಂಚಲವಾದುದು ? ಯಾವಾಗ ಎಂತಹ ವಿಕೃತಿ ಬರಬಹುದೆಂದು ಯಾರೂ ಎಣಿಸುವಂತಿಲ್ಲ, ಆದುದರಿಂದ ಮಾತಾಪಿತರ ಕರ್ತವ್ಯವೇನೆಂದರೆ ತನ್ನ ಸಂತಾನದ ಕುರಿತು, ತನಗೆ ಹುಟ್ಟಿದ ಹೆಣ್ಣುಮಕ್ಕಳ ಬಗ್ಗೆ ಸಂಪೂರ್ಣ ಧ್ಯಾನ ವಿರಿಸಿಕೊಳ್ಳಬೇಕು. ಅವರ ಸ್ವಚ್ಛಂದತೆಗೆ ಎಲ್ಲೂ ಧಕ್ಕೆ ಬರಬಾರದು. ಯೋಗ್ಯ ವ್ಯಕ್ತಿಗಳೊಡನೆ ಹೆಣ್ಣುಮಕ್ಕಳ ವಿವಾಹ ನಡೆಸಬೇಕು. ಅದು ಬಿಟ್ಟು ಹೆಣ್ಣು ಮಕ್ಕಳನ್ನು ಯಾರಿಗೋ ಅಯೋಗ್ಯರಿಗೆ ಕೊಟ್ಟು ಅವರನ್ನು ಕಷ್ಟಕ್ಕೆ ಗುರಿ ಪಡಿಸುವುದು ಸರಿಯಲ್ಲ, ಹಾಗೆಯೇ ಯಾವುದೇ ವಸ್ತುವನ್ನು ಕೊಳ್ಳುವಾಗಲೂ ತುಂಬಾ ಯೋಚಿಸಬೇಕು. ಯೋಚಿಸಿ ಕೆಲಸ ಮಾಡುವುದರಿಂದ ಜೀವನವಿಡೀ ಸಂತೋಷವನ್ನು ಪಡೆಯಬಹುದು. ಹಾಗೆ ಮಾಡದಿದ್ದರೆ ಜೀವನದಲ್ಲಿ ಕಷ್ಟವನ್ನೇ ಅನುಭವಿಸಬೇಕಾಗುತ್ತದೆ.

---



-೧೪-

## ಮೂಲ ಮಹಾಮಂತ್ರ

ಣಮೋ ಅರಿಹಂತಾಣಂ,
ಣಮೋ ಸಿದ್ಧಾಣಂ,
ಣಮೋ ಆಇರಿಯಾಣಂ,
ಣಮೋ ಉವಜ್ಝಾಯಾಣಂ,
ಣಮೋ ಲೋಏ ಸವ್ವಸಾಹೂಣಂ ।

ಈ ಪ್ರಸಂಗದಲ್ಲಿ ಒಂದು ಮಾತು ಮತ್ತು ಒಂದು ಸ್ಪಷ್ಟೀಕರಣ ಉಚಿತವಾಗಬಹುದು. ಣಮೋಕಾರ ಮಂತ್ರದಲ್ಲಿ ಯಾವ ಪ್ರಥಮ ಪದ 'ಣಮೋ ಅರಿಹಂತಾಣಂ' ಎಂಬುದಾಗಿ ಬಂದಿದೆಯೋ ಆ ಸ್ಥಾನದ ಮೇಲೆ ಎಲ್ಲೋ 'ಅರಹಂತಾಣಂ' ಎಂಬ ಪಾಠ ಬಂದಿರುವುದನ್ನೂ ಗುರುತಿಸಬಹುದು. ಇನ್ನು ಪ್ರಾಕೃತ ಭಾಷೆಯ ಪ್ರಕೃತಿಯನ್ನು ಧ್ಯಾನದಲ್ಲಿರಿಸಿಕೊಂಡಾಗ ಇದರಲ್ಲಿ ಯಾವುದೇ ಆಶ್ಚರ್ಯದ ಮಾತಿಲ್ಲ, ಆದರೆ ಷಟ್ಖಂಡಾಗಮದಂತೆ ಪ್ರಜ್ಞಾಪನಾ ಸೂತ್ರವೇ ಮೊದಲಾದ ಗ್ರಂಥಗಳಲ್ಲಿ ಕೂಡಾ ಈ 'ಅರಿಹಂತಾಣಂ' ರೂಪವು ಕಾಣಸಿಕೊಳ್ಳುತ್ತದೆ. ಹಾಗೆಯೇ ಅದರ ಟೀಕಾಕಾರರಾದ ಹರಿಭದ್ರ ಮತ್ತು ಮಲಯಗಿರಿ ಇವರು ಅದನ್ನೇ ಗ್ರಹಣ ಮಾಡಿದ್ದಾರೆ. ಧವಲಾಕಾರರ ಮತದಂತೆ 'ಅರಿಹನನಾದ್ ಅರಿಹಂತಾ, ರಜೋಹನನಾದ್ ವಾ ಅರಿಹಂತಾ, ರಹಸ್ಯಾಭಾವಾದ್ ವಾ ಅರಿಹಂತಾ, ಅತಿಶಯ ಪೂಜಾರ್ಹತ್ವಾದ್ ವಾ ಅರ್ಹಂತಃ" ಎಂದಾಗುತ್ತದೆ. ಈ ರೀತಿಯಾಗಿ ಧವಲಾಕಾರರ ಸಮ್ಮುಖವಾದರೋ ವಿಕಲ್ಪದಿಂದಾದರೂ ಅರಹಂತ ಪಾಠ ಬರಲಿಲ್ಲ, (ಷಟ್‌ಖಂಡಾಗಮ-ಭಾಗ-1, ಪುಟ-42) ಆದ ಕಾರಣ ದಿಗಂಬರ-ಶ್ವೇತಾಂಬರರ ದೀರ್ಘಕಾಲೀನ ಸೈದ್ಧಾಂತಿಕ ಪರಂಪರೆಯು 'ಅರಿಹಂತಾಣಂ' ಪಾಠದ ಪಕ್ಷದಲ್ಲಿಯೇ ಇರುವುದೆಂದು ಸಿದ್ಧವಾಗುತ್ತದೆ.

*-(ಸಾಭಾರ್ ಉದ್ಧೃತ್-ಷಟ್‌ಖಂಡಾಗಮ, ಪುಟ-6)*

ಸಂಪಾದಕರು: 1. ಪಂ. ದೇವಕೀನಂದನ್‌ಜೀ ಶಾಸ್ತ್ರಿ, 2. ಪಂ. ಫೂಲ್‌ಚಂದ್ ಸಿದ್ಧಾಂತ ಶಾಸ್ತ್ರಿ, 3. ಡಾ॥ ಹೀರಾಲಾಲ್ ಜೈನ್, 4. ಡಾ॥ ಎ.ಎನ್. ಉಪಾಧ್ಯೆ, 5. ಪಂ. ನರೇಂದ್ರ ಕುಮಾರ್ ಭಿ. ಸೀಕರ್ ಶಾಸ್ತ್ರಿ, 6. ದೇವೇಂದ್ರ ಕುಮಾರ್ ಶಾಸ್ತ್ರಿ.

**"ಅರುಹ ಶ್ರೀಚರಣವ ನೆನೆವೆನು ಅನುದಿನ"**

ಒಂದು ಪಾಠ 'ಅರುಹಾ' ಎಂಬುದಾಗಿಯೂ ಉಂಟಾಗಿದೆ. ಏಕೆಂದರೆ 'ರುಹ' ಧಾತುವಿನ ಅರ್ಥ ಅಂಕುರಿಸುವುದು. ಅರ್ಥಾತ್ ಯಾವುದರ ಭಾವರೂಪ ಅಂಕುರವು ನಷ್ಟವಾಯಿತೋ ಅದು 'ಅರುಹಾ' ಎಂದು ಕರೆಯಲ್ಪಡುತ್ತದೆ. ಅಂದರೆ ಕರ್ಮರೂಪೀ

ಬೀಜವು ಉರಿದುಹೋದ ಮೇಲೆ ಪುನಃ ಸಂಸಾರರೂಪೀ ಅಂಕುರದ ಉತ್ಪತ್ತಿಯಾಗದು. 'ದಗ್ಧೇ ಬೀಜೇ ಯಥಾತ್ಯಂತಂ ಪ್ರಾದುರ್ಭವತಿ ನಾಂಕುರಃ । ಕರ್ಮಬೀಜೇ ತಥಾದಗ್ಧೇನ ರೋಹತಿ ಭವಾಂಕುರಃ ।

ಶಿಷ್ಯನಿಗೆ ಗುರು ಹೇಳಿದ;-

**ಬುದ್ಧಿ ವಿಹೀನೇ ಶ್ರೋತರಿ, ವಕ್ತೃತ್ವಮನರ್ಥಕಂ ಭವತಿ ಪುಂಸಾಂ ।**
**ನೇತ್ರವಿಹೀನೇ ಭರ್ತ್ತರಿ, ವಿಲಾಸ ಲಾವಣ್ಯಮಿವ ಸ್ತ್ರೀಣಾಂ ॥**

*-(ಪಂಚಸಂಗ್ರಹ, ಪುಟ-585, ಧವಲಾ ಪು4, ಪುಟ 414)*

**ಅರ್ಥ:** ಯಾವ ರೀತಿ ಪತಿಯು ನೇತ್ರಹೀನನಾದಾಗ ಪತ್ನಿಯ ವಿಲಾಸ ಮತ್ತು ಸೌಂದರ್ಯವು ವ್ಯರ್ಥವಾಗುತ್ತದೋ, ಅದೇ ರೀತಿ ಶಿಷ್ಯ -ಶ್ರೋತಾ ಜ್ಞಾನಹೀನನಾದಾಗ ಗುರುವಿನ ಉಪದೇಶವು ವ್ಯರ್ಥವಾಗುತ್ತದೆ.

*ಪ್ರಾಕೃತದಲ್ಲಿ 'ಅರಿಹಂ', ಸಂಸ್ಕೃತದಲ್ಲಿ 'ಅರ್ಹನ್'.*

1. 'ಅ' ಅಕ್ಷರವು ಅನಂತ ಜ್ಞಾನದ ವಾಚಕವಾಗಿರುತ್ತದೆ.
2. 'ರ' ಶೇಷ ಸಮಂತ ವಿಶ್ವದ ಅನಂತ ದರ್ಶಕವಾಗಿರುತ್ತದೆ.
3. 'ಹ' ಅನಂತ ಬಲದ ಸೂಚಕವಾಗಿರುತ್ತದೆ.
4. '.' ಬಿಂದು ಅನಂತ ಸುಖದ ಪ್ರತೀಕವಾಗಿರುತ್ತದೆ.

*-(ವಿರಾಮೇ ವಾ ಹಾ ತಂತ್ರ 1-4-15)*

'ಅರಿಹಂ'ದಲ್ಲಿ ಅನಂತ ಚತುಷ್ಟಯದ ಗೂಢ ಅರ್ಥ ಅಡಗಿಕೊಂಡಿದೆ.

**ಅಕಾರಃ ಪರಮೋ ಬೋಧೋ, ರೇಫೋ ವಿಶ್ವಾವಲೋಕದೃಕ್ ।**
**ಹಕಾರೋಽನಂತ ವೀರ್ಯಾತ್ಮಾ, ಬಿಂದು ಸ್ಯಾದುತ್ತಮಂ ಸುಖಂ ॥**

*-(ಆಚಾರ್ಯ ಮಾಘನಂದಿ, ಶಾಸ್ತ್ರ ಸಮುಚ್ಚಯ, 38)*

**ಸಾರಾಂಶ:** ಶಬ್ದಬ್ರಹ್ಮನು ಕೂಡಾ ಆತ್ಮಬ್ರಹ್ಮನಲ್ಲಿ ಹೇತುವಾಗಿರುತ್ತಾನೆ.

ಶಬ್ದಬ್ರಹ್ಮನಲ್ಲಿ ಪಾರಂಗತನಾದ ವ್ಯಕ್ತಿ ಪರಬ್ರಹ್ಮನನ್ನು ಪ್ರಾಪ್ತಿಸಬಲ್ಲನು. ಈ ಸಿದ್ಧಾಂತವು ಸಾಧಕನಿಗೆ ಮೊದಲು ಶಬ್ದಶಕ್ತಿ ಮತ್ತು ಅದರ ಮರ್ಯಾದೆ ಹಾಗೂ ಭಾವದ ಜ್ಞಾನವು ಅವಶ್ಯಕವೆಂಬ ಮಾತಿಗೆ ಸೂಚನೆ ನೀಡುತ್ತದೆ. ಒಂದು ವೇಳೆ ಅವನಿಗೆ ಶಬ್ದಗಳ ವಾಚ್ಯಾರ್ಥ, ಭಾವಾರ್ಥ ಮತ್ತು ತಾತ್ಪರ್ಯಾರ್ಥದ ಬೋಧೆ ಇಲ್ಲವೆಂದಾದರೆ, ಅವನು ತೊಳಕಾಡುವುದಕ್ಕೂ ಸಾಧ್ಯವಿದೆ.

*ಕೋಶವೇ ಶಬ್ದದ ಅರ್ಥವನ್ನು ತಿಳಿಯಲು ಏಕಮಾತ್ರ ಉಪಾಯವಾಗಿದೆ.*



**ಶಕ್ತಿಗ್ರಹಂ ವ್ಯಾಕರಣೋಪಮಾನಕೋಶಾಪ್ತವಾಕ್ಯಾದ್ ವ್ಯವಹಾರತಶ್ಚ ।**
**ವಾಕ್ಯಸ್ಯ ಶೇಷಾದ್ ವಿವೃತ್ತೇರ್ವದಂತಿ ಸಾನ್ನಿಧ್ಯತಃ ಸಿದ್ಧ ಪದಸ್ಯ ವೃದ್ಧಃ ॥**

**ಅರ್ಥ:** ವ್ಯಾಕರಣ, ಉಪಮಾನ, ಕೋಶ, ಆಪ್ತ ವಾಕ್ಯ, ವ್ಯವಹಾರ, ವಾಕ್ಯ ಶೇಷ, ವಿವರಣ ಮತ್ತು ಪ್ರಸಿದ್ಧ ಶಬ್ದದ ಸಾನ್ನಿಧ್ಯದಿಂದ ಸಂಕೇತ ಗ್ರಹಣವಾಗುತ್ತದೆ. ಇವುಗಳಲ್ಲಿ ವ್ಯಾಕರಣದಿಂದ ಯೌಗಿಕ ಶಬ್ದಗಳ ವ್ಯುತ್ಪತ್ತಿ ಮೂಲಕ ಸಂಕೇತ ಗ್ರಹಣ ಆದರೂ ಆಗಬಹುದು, ಆದರೆ ರೂಢ ಮತ್ತು ಯೋಗರೂಢ ಶಬ್ದಗಳ ಸಂಕೇತ ಗ್ರಹಣವು ವ್ಯಾಕರಣದಿಂದ ಆಗಲಾರದು. ಕೊನೆಯಲ್ಲಿ ಕೋಶವೇ ಎಂತಹ ಒಂದು ಉಪಾಯವನ್ನು ಬಚ್ಚಿಟ್ಟುಕೊಳ್ಳುತ್ತದೆಂದರೆ ಅದರಿಂದ ಎಲ್ಲರೀತಿಯ ಶಬ್ದಗಳ ಸಂಕೇತ ಗ್ರಹಣ ಆಗಬಹುದಾಗಿದೆ.

*ಪ್ರಾಕೃತ ಭಾಷೆಯಲ್ಲಿ 'ಅರಿಹಂತ' ಶಬ್ದದ ವ್ಯುತ್ಪತ್ತಿ ಮತ್ತು ಸಂಪೂರ್ಣ ಪರಿಭಾಷೆ*

**ಅರಿಹಂತಿ ವಂದಣ ನಮಂ ಸಣಾಣಿ ಅರಿಹಂತಿ ಪೂಯಸಕ್ಕಾರಂ ।**
**ಸಿದ್ಧಿಗಮಣಂ ಚ ಅರಿಹಾ ಅರಿಹಂತಾ ತೇಣ ವುಚ್ಚಂತಿ ॥**

*-(ಅಭಿಧಾನ ರಾಜೇಂದ್ರ ಕೋಶ, ಭಾಗ-1, ಪುಟ-760)*

**ಅರ್ಥ:** ಯಾರು ವಂದನ ನಮಸ್ಕರಣಕ್ಕೆ ಯೋಗ್ಯರಾದ ಅರಿಹಂತರೋ ಅಥವಾ ಯಾರು ಪೂಜಾ ಸತ್ಕಾರಕ್ಕೆ ಯೋಗ್ಯರಾದ ಅರಿಹಂತರೋ ಅಥವಾ ಯಾರು ಸಿದ್ಧಿ ಗಮನಗಳಿಗೆ ಯೋಗ್ಯರಾದ ಅರಿಹಂತರೋ ಅವರಿಗೆ 'ಅರಿಹಂತ'ಎಂದು ಕರೆಯುತ್ತಾರೆ.

**ಘಣಘಾದಿಕಮ್ಮರಹಿದಾ ಕೇವಲಣಾಣಾದಿ ಪರಮಗುಣ ಸಹಿದಾ ।**
**ಚೋತ್ತಿಸ ಅದಿಸಯಜುತ್ತಾ 'ಅರಿಹಂತಾ' ಏರಿಸಾ ಹೊಂತಿ ॥**

*-(ಆಚಾರ್ಯ ಕುಂದಕುಂದ, ಣಿಯಮಸಾರ-76)*

**ಆಮ್ನಾಯಃ ಸಂಪ್ರದಾಯಃ ಇತಿ ಗುರುಪರಂಪರಾಗತಸ್ಯ ಸಮುಪದೇಶಸ್ಯ ।**

*-(ಇತ್ಯಮರಃ 2/4/2264)*

**ಅರ್ಥ:** ಆಮ್ನಾಯವೇ ಸಂಪ್ರದಾಯ ಮತ್ತು ಅದು ಗುರು ಪರಂಪರೆಯಿಂದ ಆಗತವಾದ ಉಪದೇಶ. ಅದೇ ಸ್ವೀಕಾರಕ್ಕೆ ಯೋಗ್ಯವಾದುದು.

*ಣಮೋಕಾರ ಮಹಾಮಂತ್ರದಲ್ಲಿ ಹದಿನಾಲ್ಕು ಪೂರ್ವಗಳ ಜ್ಞಾನ ತುಂಬಿಕೊಂಡಿದೆ.*

**ಜಿಣಸಾಸಣಸ್ಸ ಸಾರೋ ಚಉದಸಪುವ್ವಾಣಂ ಸಮುದ್ಧಾರೋ ।**
**ಜಸ್ಸ ಮಣೇ ಣಮೋಕಾರೋ ಸಂಸಾರೋ ತಸ್ಸಿಂ ಕುಣದಿ ॥**

*-(ಆಇರಿಯ ಬಸುಣಂದಿ, ತಚ್ಚವಿಯಾರೋ 1/28)*

**ಅರ್ಥ:** ಯಾವುದು ಸಂಪೂರ್ಣ ಜಿನಶಾಸನದ ಸಾರವೋ, ಹದಿನಾಲ್ಕು ಪೂರ್ವಗಳಿಂದಲೂ ಹಿಂಡಿದ ಸಾರವಾಗಿದೆಯೋ, ಅಂತಹ ಣಮೋಕಾರ ಮಂತ್ರವು ಯಾರ

ಹೃದಯದಲ್ಲಿ ಸದಾ ನೆಲೆಸಿರುತ್ತದ್ದೋ ಅಂಥವನನ್ನು ಈ ಸಂಸಾರ ಹೇಗೆ ಹಾಳು ಮಾಡಬಲ್ಲದು ?

**ಅಂಗಪೌರ್ವಮಯಾರ್ಥ ಸಂಗ್ರಹ ಮಧೀತ್ಯ ಶಾಸ್ತ್ರಾಂತರಃ ।**

*-(ಶಿವಾಶಾಧರ ಸೂರಿ, ಸಂಗ್ರಹಧರ್ಮಾಮೃತ 2/21)*

**ಅರ್ಥ:** ಪ್ರಥಮ ಕೋಮಲಮತಿ ಬಾಲಕರಿಗೆ ಪ್ರಾಕೃತ ಭಾಷಾಯುಕ್ತ ಣಮೋಕಾರ ಮಹಾಮಂತ್ರವನ್ನು ಕಲಿಸಿ, ಅನಂತರ ಅನ್ಯ (ಲೌಕಿಕ ಭಾಷಾ ಗಣಿತಾದಿ) ವಿಷಯ ಜ್ಞಾನವನ್ನು ಕೊಡಿಸಬೇಕು. ಇಂದು ಕೂಡಾ ಯಾವಾಗ ಶಿಶು ಪ್ರಥಮ ಬಾರಿಗೆ ಜಿನ ದರ್ಶನ ಮಾಡುತ್ತದ್ದೋ ಆಗ ಅದಕ್ಕೆ ಣಮೋಕಾರ ಮಹಾಮಂತ್ರವನ್ನು ಗುರು ಕೇಳಿಸುವಂತೆ ಮಾಡುವುದಕ್ಕೆ ಇದೇ ಕಾರಣವಾಗಿದೆ.

**ಜೆ ಕೆ ವಿ ಗಯಾ ಮೂಕ್ಖಂ ಗಚ್ಛಂತಿ ಯ ಜೆ ಕೆ ವಿ ಕಮ್ಮಲಮುಕ್ಕಾ ।**
**ತೇ ಸವ್ವಂ ವಿ ಯ ಜಾಣಸು ಜೆಣಣಮೋಕ್ಕಾರಪ್ಪಭಾವೇಣ ॥**

*-(ತಚ್ಚವಿಯಾರೋ 1/20)*

**ಅರ್ಥ:** ಯಾರು ಇಷ್ಟರವರೆಗೆ ಮೋಕ್ಷಕ್ಕೆ ಹೋಗಿದ್ದಾರ್ರೋ, ಕರ್ಮಮಲದಿಂದ ಮುಕ್ತರಾಗಿದ್ದರ್ರೋ, ಅದೆಲ್ಲ ಣಮೋಕಾರ ಮಹಾಮಂತ್ರದ ಪ್ರಭಾವವೆಂದು ತಿಳಿ.

*ಒಂದೊಂದು ಪದ 32 ದೋಷ ರಹಿತವಾಗಿರಬೇಕು.*

**ತತ್ರ ವ್ಯಂಜನ ಶುದ್ಧಿರ್ನಾಮ ಯಥಾ ಗಣಧರಾದಿಭಿರ್ದ್ವಾತ್ರಿಂಶದ್ದೋಷ ವರ್ಜಿತ-ಸೂತ್ರಾಣಿ ಕೃತಾನಿ ತೇಷಾಂ ತಥೈವ ಪಾಠಃ ।**

*-(ಭಗವತೀ ಆರಾಧನಾ, ಗಾಥಾ 192, ಪುಟ-144)*

**ಅರ್ಥ:** ಗಣಧರಾದಿಗಳು ಮೂವತ್ತೆರಡು ದೋಷರಹಿತ ಸೂತ್ರಗಳನ್ನು ಹೇಳಿದ್ದಾರೆ. ಅವುಗಳನ್ನು ಅದೇ ಪ್ರಕಾರ ಮನ್ನಿಸುವುದು ವ್ಯಂಜನ ಶುದ್ಧಿಯಾಗಿದೆ.

*ಪ್ರಮಾಣ ಪದ (ಅನುಷ್ಟುಪ್ ಛಂದ)*

**ಏಸೋ ಪಂಚ ಣಮೋಕಾರೋ ।**
**ಸವ್ವಪಾವ ಪಣಾಸಣೋ ॥**
**ಮಂಗಲಾಣಂ ಚ ಸವ್ವೇಸಿಂ ।**
**ಪ್ರಥಮಂ ಹೋಇ ಮಂಗಲಂ ॥**

**ಅರ್ಥ:-** ಈ ಪಂಚ ನಮಸ್ಕಾರ ಮಹಾಮಂತ್ರವು ಸರ್ವ ಪಾಪಗಳನ್ನು ನಾಶ ಮಾಡುವಂತಹುದಾಗಿದೆ. ಹಾಗೆಯೇ ಎಲ್ಲ ಮಂಗಲಗಳಲ್ಲೂ ಇದು ಪ್ರಥಮ ಮಂಗಲವಾಗಿದೆ.



-೧೫-

## ಭಾವ ತುಂಬಿ ಪೂಜೆ ಮಾಡು

ಮಹಾನುಭಾವರೇ, ಮನುಷ್ಯ ಮೊಟ್ಟಮೊದಲು ದುರ್ಧ್ಯಾನದಿಂದ, ಅಪಧ್ಯಾನದಿಂದ ಪಾರಾಗಬೇಕು. ಮನಸ್ಸಿಗೆ ಯಾವೆಲ್ಲ ಕೆಟ್ಟ ವಿಚಾರಗಳು ಬರುತ್ತವೋ ಅವನ್ನೆಲ್ಲ ಎಲ್ಲಕ್ಕಿಂತ ಮೊದಲು ತೊಡೆದುಹಾಕಬೇಕು. ಬಕಪಕ್ಷಿಯು ಏಕಾಗ್ರತೆ ಹೊಂದಿ ತನ್ನ ಕಾಲುಗಳ ಮೇಲೆ ನಿಲ್ಲುತ್ತದೆ, ಆದರೆ ಅದರ ಧ್ಯಾನ ನಿಜವಾದ ಧ್ಯಾನವಲ್ಲ, ದುರ್ಧ್ಯಾನ. ಅದು ಧ್ಯಾನರತವಾಗುವುದು ಕೇವಲ ಹಿಂಸೆಗಾಗಿ ಹೊರತು ಬೇರೇನಲ್ಲ, ಜೀವ ತೆಗೆಯುವ ಕೆಲಸಕ್ಕಾಗಿ ಮಾಡಲ್ಪಡುವ ಧ್ಯಾನವೇ ದುರ್ಧ್ಯಾನ. ಈ ಕಾರಣಗಳಿಂದ ದುರ್ಧ್ಯಾನಕ್ಕೆ 'ಬಕಧ್ಯಾನ'ದ ಉಪಮೆ ಕೊಡಲಾಗಿದೆ. ಬಕಧ್ಯಾನವು ಇತರರಿಗೆ ಹಿಂಸೆ ಕೊಡುವುದಕ್ಕಾಗಿಯೇ ಇರುತ್ತದೆ. ಆದುದರಿಂದ ಅದು ರೌದ್ರಧ್ಯಾನವಾಗುತ್ತದೆ. ಈ ರೀತಿಯಾಗಿ ಯಾವುದೇ ಹಿಂಸಾ ದೃಷ್ಟಿಯಿಂದ ಮಾಡುವ ದುರ್ಧ್ಯಾನ ಎಂದಿಗೂ ನಡೆಯದಂತಾಗಲಿ. ಇದಕ್ಕಾಗಿ ನಾವು ಸಚೇತಕರಾಗಬೇಕು. ದುರ್ಧ್ಯಾನದಿಂದ ಪಾರಾಗಲು ಧರ್ಮಧ್ಯಾನ ಮಾಡಬೇಕು. ಧ್ಯಾನವೆಂದರೆ ಅದರ ಅರ್ಥ ಏಕಾಗ್ರತೆ. ಹಾಗಾದರೆ ಯಾರ ಧ್ಯಾನ ಮಾಡಬೇಕು ? ನಾವು ಮಾಡಬೇಕಾದುದು ಆತ್ಮನ ಧ್ಯಾನ, ಪರಮಾತ್ಮನ ಧ್ಯಾನ, ಧರ್ಮದ ಧ್ಯಾನ.

"ಧ್ಯಾನಹೀನಂ ಪಶುವತ್" ಅರ್ಥಾತ್-ಧ್ಯಾನರಹಿತನಾದ ಮಾನವನು ಪಶುವಿಗೆ ಸಮಾನನಾಗುತ್ತಾನೆ. ಪಶುಗಳು ಧ್ಯಾನ ಮಾಡುವುದಿಲ್ಲ, ಪೂಜೆ ಮಾಡುವುದಿಲ್ಲ. ತಿನ್ನುವುದು, ಕುಡಿಯುವುದು, ಕಾಡಿನಲ್ಲಿ ಅಲೆದಾಡುವುದು, ಆಯುಷ್ಯ ಮುಗಿದಾಗ ದೇಹವನ್ನು ಬಿಡುವುದು ಇಲ್ಲಿಗೆ ಅವುಗಳ ಅಲೆದಾಟ ಮುಗಿಯಿತು. ಅವುಗಳಿಗೆ ಯಾವುದೇ ವಿಚಾರದ ಕುರಿತಾಗಲೀ, ಧರ್ಮದ ವಿಚಾರದಲ್ಲಾಗಲೀ ಗೊಡವೆ ಇರುವುದಿಲ್ಲ.

ನಿನ್ನೆ ಅಭಿಷೇಕದ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದೆವು. ಇಂದು ಪೂಜೆಯ ವಿಚಾರವಾಗಿ ಸ್ವಲ್ಪ ಹೇಳಲು ಇಚ್ಛಿಸುತ್ತೇವೆ. ನೀವೆಲ್ಲ ಮಹಿಳೆಯರಾಗಲೀ, ಪುರುಷರಾಗಲೀ ಅಷ್ಟದ್ರವ್ಯಗಳಿಂದ ಪೂಜೆ ಮಾಡುತ್ತೀದ್ದಿರಿ. ದ್ರವ್ಯಪೂಜೆಯನ್ನು ನಿತ್ಯ ನಡೆಸುತ್ತಿರಬಹುದು. ಇದರ ಜೊತೆಗೆ ಭಾವಪೂಜೆ ಮಾಡಬೇಕಾದ ಅವಶ್ಯಕತೆಯೂ ಇದೆ. ಭಾವಪೂಜೆ ಇಲ್ಲದಿದ್ದರೆ ದ್ರವ್ಯ ಪೂಜೆಗೆ ಯಾವುದೇ ಮಹತ್ವವೂ ಇರುವುದಿಲ್ಲ, ಕೇವಲ ದ್ರವ್ಯ ಪೂಜೆಯಿಂದ ಯಾವುದೇ ಇಚ್ಛಿತ ಉಪಲಬ್ಧಿ ದೊರಕಬಹುದೆಂದಾದರೆ ಧನಿಕರಾದ ಸೇಠ್‌ಜೀಗಳು ನಿತ್ಯ ಇಪ್ಪತ್ತೈದು ಚೀಲ ಅಕ್ಕಿ ಬಾದಾಮ್ ಇತ್ಯಾದಿ ವಸ್ತುಗಳನ್ನು ಭಗವಂತನಿಗೆ ಅರ್ಪಿಸಿ ದೊಡ್ಡ ಧರ್ಮಾತ್ಮರಾಗಿ ಪುಣ್ಯದ ರಾಶಿಯನ್ನೇ ಪಡೆಯಬಹುದಿತ್ತು, ಹಾಗೇನಾದರೂ ಆಗಿದ್ದರೆ ಹರಕು ಗುಡಿಸಲಿನಲ್ಲಿ ವಾಸಿಸುವ ಬಡಜನರಿಗೆ ಯಾವುದೇ ಧರ್ಮದ ಉಪಲಬ್ಧಿ ಆಗುತ್ತಿರಲಿಲ್ಲ, ಅವನು ಅಕಿಂಚನ, ಕೇವಲ ನಾಲ್ಕು ಬಾದಾಮನ್ನು ದೇವರಿಗೆ ಏರಿಸಿದರೆ

ಅವನಿಗೆ ಧರ್ಮದ ಫಲ ಸಿಗಲಾರದೆ ? ಅಕ್ಕಿ ಬಾದಾಮಿ ಇತ್ಯಾದಿ ದ್ರವ್ಯಗಳೆಲ್ಲ ಪ್ರತೀಕ ರೂಪದಲ್ಲಿರುತ್ತವೆ. ಅವು ಸಾಧನವೇ ಹೊರತು ಸಾಧ್ಯವಲ್ಲ. ನಾವು ಸಾಧನ ಮತ್ತು ಸಾಧ್ಯದ ಅಂತರ ತಿಳಿದಿರಬೇಕು. ಬಟ್ಟೆಯ ಅಂಗಡಿಯಲ್ಲಿ ಬಟ್ಟೆಗಳನ್ನಳೆಯುವ ಒಂದು ಸಾಧನವಿರುತ್ತದೆ, ಅದಕ್ಕೆ ಮೀಟರ್ ಎನ್ನುತ್ತಾರೆ. ಅದರ ಮಾಧ್ಯಮದಿಂದ ಬಟ್ಟೆಗಳನ್ನಳೆದು ಮಾರಾಟ ಮಾಡಲಾಗುತ್ತದೆ. ಅಲ್ಲಿ ಮೀಟರ್ ಧನ ಸಂಪಾದನೆ ಮಾಡುತ್ತಿದೆಯೇ ಅಥವಾ ಆ ಮೀಟರ್‌ನಿಂದ ಅಳತೆ ಮಾಡಿ ಮಾರಾಟ ಮಾಡುವವನು ಧನ ಸಂಪಾದನೆ ಮಾಡುತ್ತಿದ್ದಾನೆಯೇ? ಅಲ್ಲಿ ಬಟ್ಟೆಯನ್ನು ಮಾರಾಟ ಮಾಡುವ ಮೂಲಕ ತನ್ನ ಬುದ್ಧಿಶಕ್ತಿಯಿಂದ ಧನ ಸಂಪಾದನೆ ಮಾಡುತ್ತಾನೆ. ಒಂದು ವೇಳೆ ಧನ ಸಂಪಾದನೆ ಮಾಡುವುದು ಮೀಟರ್ ಎಂದಾಗಿದ್ದರೆ ಪ್ರಾಯಶಃ ಜನರು ತಮ್ಮ ತಮ್ಮ ಅಂಗಡಿಗಳಲ್ಲಿ ಐದೋ, ಹತ್ತೋ ಮೀಟರ್‌ಗಳನ್ನಿಟ್ಟುಕೊಳ್ಳುತ್ತಿದ್ದರು. ಇದೇ ರೀತಿ ತಕ್ಕಡಿ ಧನ ಸಂಪಾದನೆ ಮಾಡುವುದಿಲ್ಲ, ತಕ್ಕಡಿಯಲ್ಲಿ ಸಾಮಾನುಗಳನ್ನು ತೂಗುವವನೂ ಧನ ಸಂಪಾದನೆ ಮಾಡುವುದಿಲ್ಲ, ಹಾಗೆಯೇ ಮೀಟರ್ ಎಂದರೆ ತಕ್ಕಡಿ, ಇನ್ನು ಅಕ್ಕಿ ಬಾದಾಮ್ ಎಲ್ಲವೂ ಸಾಧನ. ಅಕ್ಕಿ ಬಾದಾಮಿಯ ಮಾಧ್ಯಮದಿಂದ ಏಕಾಗ್ರತೆಯಿಂದ ಯಾವ ಪೂಜೆ ಮಾಡಲಾಗುತ್ತದೋ ಅದೇ ಧರ್ಮ. ಕೇವಲ ಅಕ್ಕಿ ಬಾದಾಮಿಯನ್ನು ದೇವರಿಗೆ ಅರ್ಪಿಸುವ ಮಾತ್ರದಿಂದ ಧರ್ಮವಾಗುವುದಿಲ್ಲ, ಅವುಗಳನ್ನು ಅರ್ಪಣೆ ಮಾಡುವ ಹೊತ್ತಿನಲ್ಲಿ ನಿಮ್ಮ ಮನಸ್ಸಿನಲ್ಲಿ ಯಾವ ಧರ್ಮದ ಭಾವ ಉತ್ಪನ್ನವಾಗುತ್ತದೋ, ಯಾವ ಆನಂದ ಉತ್ಪನ್ನವಾಗುತ್ತದೋ ಅದುವೇ ಧರ್ಮ. ಆಗ ಪೂಜೆಯಿಂದ ಉತ್ಪನ್ನವಾಗುವ, ಯಾವ ಆನಂದ ಉತ್ಪನ್ನವಾಗುತ್ತದೋ ಅದುವೇ ಧರ್ಮ. ಹಾಗಾದರೆ ಧರ್ಮವಿರುವುದು ಅಕ್ಕಿ, ಬಾದಾಮಿಯಲ್ಲೋ ಅಥವಾ ಮನಸ್ಸಿನಲ್ಲೋ ? ಧರ್ಮವಿರುವುದು ಮನಸ್ಸಿನಲ್ಲೇ. ನಾವು ಅಕ್ಕಿ ಬಾದಾಮಿ ಇತ್ಯಾದಿ ಸಾಧನಗಳಲ್ಲೇ ಮುಳುಗಿ ಹೋಗಿದ್ದೇವೆ. ಅವುಗಳಲ್ಲೇ ಧರ್ಮವಿರುವುದೆಂದು ನಂಬಿದ್ದೇವೆ. ಈ ಕ್ರಿಯಾಕಾಂಡಗಳಲ್ಲೇ ಧರ್ಮವು ಅಡಕವಾಗಿದೆಯೆಂದು ತಿಳಿದಿದ್ದೇವೆ. ಧರ್ಮವಿರುವುದು ಕೇವಲ ಸಾಧನಗಳಲ್ಲಿ ಎಂಬ ಭ್ರಮೆಗೆ ಸಿಲುಕಿದ್ದೇವೆ ಮತ್ತು ಭಾವ ಪೂಜೆಯನ್ನು ಮರೆತೇಬಿಟ್ಟಿದ್ದೇವೆ.

ಸಾಧ್ಯ ಮತ್ತು ಸಾಧನ ಇವುಗಳ ಅಂತರವೇನೆಂದು ನಾವು ತಿಳಿದಿರಬೇಕು. ಯಾರೋ ಒಬ್ಬರು ಸಾಧು ನಿಮ್ಮ ಮನೆಗೆ ಬರುತ್ತಾರೆಂದು ತಿಳಿಯಿರಿ. ಆಗ ನೀವೇನು ಮಾಡುತ್ತೀರಿ. ಅವರಿಗೆ ತಿಂಡಿ ತಿನಿಸು ಕೊಡುತ್ತೀರಿ, ಭೋಜನ ಮಾಡಿಸುತ್ತೀರಿ. ಅಷ್ಟರಿಂದ ಅದು ಧರ್ಮವಾಗುವುದಿಲ್ಲ, ಭೋಜನ ಮಾಡಿಸುವ ಹೊತ್ತಿನಲ್ಲಿ ನಾನಿಂದು ಒಬ್ಬ ಸಾಧುವಿಗೆ ಆಹಾರ ಕೊಡುವುದರ ಮೂಲಕ ಧನ್ಯನಾದೆನೆಂಬ ಹರ್ಷ, ತೃಪ್ತಿ, ಆನಂದ ನಿಮ್ಮ ಮನಸ್ಸಿನಲ್ಲಿ ಯಾವಾಗ ಉಂಟಾಗುತ್ತದೋ ಆಗ ಅದು ಧರ್ಮವಾಯಿತು. ಧರ್ಮವಿರುವುದು ತಿಂಡಿ ತಿನಿಸುಗಳಲ್ಲಲ್ಲ, ಧರ್ಮವಿರುವುದು ಕೇವಲ ಮನಸ್ಸಿನಲ್ಲಿ. ಅಲ್ಲಿ ತಿಂಡಿ ತಿನಿಸು, ಆಹಾರ ದ್ರವ್ಯಗಳೆಲ್ಲ ಬರೇ ಸಾಧನಗಳು.



ಆದಕಾರಣ ದ್ರವ್ಯ ಪೂಜೆಯು ಕೇವಲ ಸಾಧನವಾಗುತ್ತದೆ. ನೀವು ಈ ದ್ರವ್ಯ ಪೂಜೆಗೆ ಬಹಳ ಮಹತ್ವ ಕೊಡುತ್ತಿದ್ದೀರಿ. ಅಲ್ಲಿ ಬರೇ ಕ್ರಿಯಾಕಾಂಡಕ್ಕೆ ಮಹತ್ವ ಕೊಟ್ಟಂತಾಗುತ್ತದೆ. ಆಚಾರ್ಯ ಕುಂದಕುಂದರು ಕೇವಲ ಕ್ರಿಯಾಕಾಂಡಕ್ಕೆ 'ಭಾವಶೂನ್ಯ' ಎಂಬ ಶಬ್ದ ಪ್ರಯೋಗ ಮಾಡಿದ್ದಾರೆ. ನಮ್ಮಲ್ಲಿ ಬಹಳ ಮಹತ್ವವಿರುವುದು ಭಾವಕ್ಕೆ ಮಾತ್ರ. ರತ್ನಾಕರ ಕವಿ ಒಂದು ಕಡೆ ಹೀಗೆ ಬರೆದಿದ್ದಾನೆ- ನೀವು ಕಲ್ಲಿನ ಮೂರ್ತಿಯ ಮುಂದೆ ನಿಂತು ಪೂಜೆ ಮಾಡುತ್ತೀರಿ. ಆ ಮೂರ್ತಿಯು ಪಂಚಕಲ್ಯಾಣ ಪ್ರತಿಷ್ಠೆಯಿಂದಾಗಿದೆ. ನಾವು ಪೂಜಿಸುವಂಥಾದ್ದು ಸಾಮಾನ್ಯ ಮೂರ್ತಿಯನ್ನಲ್ಲ. ಯಾವಾಗ ಅದರಲ್ಲಿ ಭಾವದ ಪ್ರತಿಷ್ಠೆ ಆಗುತ್ತದೋ ಆಗ ಮಾತ್ರ ಆ ಪೂಜೆ ಸಾರ್ಥಕ್ಯವಾಗುವುದು. ಆಚಾರ್ಯ ವೀರ ಸೇನರು ತೀರ್ಥಂಕರ ಪ್ರತಿಮೆಗೆ ಧವಲಾ ಗ್ರಂಥದಲ್ಲಿ ಒಂದು ಸ್ಥಾನವನ್ನು ನೀಡುತ್ತಾ- "ಇದು ಪರ್ವತದ ಮಗು. ಕಲಾಕಾರನು ಪರ್ವತದಿಂದ ಒಂದು ಶಿಲೆಯನ್ನು ತುಂಡು ಮಾಡಿ ತೆಗೆದು ಅದರಿಂದ ಮೂರ್ತಿಯನ್ನು ನಿರ್ಮಿಸುತ್ತಾನೆ." ಅದಕ್ಕಾಗಿಯೇ ಧವಲಾದಲ್ಲಿ ಪರ್ವತದಿಂದ ಹುಟ್ಟಿದ ಮಗು ಎಂಬ ಉಲ್ಲೇಖ ಕೊಡಲಾಗಿದೆ. ಆ ಮೂರ್ತಿಗೆ ಪಂಚಕಲ್ಯಾಣ ಪ್ರತಿಷ್ಠೆ ಮಾಡಲಾಗುತ್ತದೆ. ಹಾಗೆ ಮಾಡಿದ ಮೇಲೆಯೇ ಅದಕ್ಕೆ ಅಭಿಷೇಕ ಮಾಡುತ್ತೇವೆ. ಆ ಅಭಿಷೇಕವಾಗಲೀ, ಆ ಪೂಜೆಯಾಗಲೀ ಅದು ಭಾವಪೂರ್ವಕವಾಗಿರುತ್ತದೆ. ಆಗಲೇ ಅದು ಧರ್ಮವಾಗುತ್ತದೆ. ಅಲ್ಲಿ ಬಾಹ್ಯ ಗಂಗಾಜಲದ ಅಭಿಷೇಕಕ್ಕೆ ಮಹತ್ವವಿಲ್ಲ. ಮಹತ್ವವಿರುವುದು ಅಲ್ಲಿರುವ ಜ್ಞಾನರೂಪೀ ಗಂಗಾಜಲಕ್ಕೆ ಮತ್ತು ಭಾವರೂಪೀ ಗಂಗಾಜಲಕ್ಕೆ ಮಾತ್ರ.

ಮಹಾಭಾರತದಲ್ಲಿ ಮಾರ್ಮಿಕವಾದ ಒಂದು ರೂಪಕವಿದೆ. ಅದನ್ನಿಲ್ಲಿ ನೋಡಿ. ಒಮ್ಮೆ ಪಾಂಡವರು ಗಂಗಾಸ್ನಾನ ಮಾಡಿ ಪಾಪವೇನಾದರೂ ಮಾಡಿದ್ದರೆ ಅದನ್ನು ತೊಳೆದು ಬರಬೇಕೆಂದು ಹೊರಟಿದ್ದರು. ಅವರು ನಾರಾಯಣ ಶ್ರೀಕೃಷ್ಣನನ್ನು ಕೂಡಾ ತಮ್ಮೊಡನೆ ಕರೆದುಕೊಂಡು ಹೋಗಬೇಕೆಂದು ಅವನನ್ನು ಬೇಡಿದರು. ನಾರಾಯಣ ಶ್ರೀಕೃಷ್ಣನು ಏನೋ ಕಾರಣ ಹೇಳಿ ಈಗ ಬರಲಾಗುವುದಿಲ್ಲವೆಂದು ತಿಳಿಸಿದ. ಆದಕ್ಕೆ ಪಾಂಡವರು ಆಗ್ರಹಪೂರ್ವಕವಾಗಿ "ನಿನಗೆ ಬರಲಾಗದಿದ್ದರೆ ನಿನ್ನ ಪ್ರತಿನಿಧಿಯಾಗಿ ಯಾರನ್ನಾದರೂ ಅಥವಾ ಯಾವುದಾದರೂ ವಸ್ತುವೊಂದನ್ನಾದರೂ ನಮ್ಮೊಡನೆ ಕಳುಹಿಸಿಕೊಡೆಂದು" ಕೇಳಿಕೊಂಡರು. ಆಗ ಶ್ರೀಕೃಷ್ಣನು ಕಹಿ ಸೋರೆಕಾಯಿಯೊಂದನ್ನು ನೀಡಿದ. ಪಾಂಡವರು ಸಹರ್ಷಿತರಾಗಿ ಅದನ್ನು ತೆಗೆದುಕೊಂಡು ಹೊರಟರು. ಅವರು ಗಂಗಾ ನದೀ ತೀರಕ್ಕೆ ಬಂದ ಬಳಿಕ ತಾವು ಒಬ್ಬೊಬ್ಬರು ನೀರಿನಲ್ಲಿ ಮುಳುಗಿ ಸ್ನಾನ ಮಾಡುವಾಗಲೂ ಆ ಕಾಯಿಯನ್ನು ತಮ್ಮೊಂದಿಗೆ ಅದಕ್ಕೂ ಸ್ನಾನ ಮಾಡಿಸಿದರು. ಶ್ರೀಕೃಷ್ಣನಿಂದ ಕೊಡಲ್ಪಟ್ಟ ಫಲವಸ್ತುವೆಂಬ ಕಾರಣದಿಂದ ಅದರ ಜೊತೆಯಲ್ಲಿ ಸ್ನಾನ ಮಾಡುವುದು ಪುಣ್ಯಪ್ರದವೆಂದು ಎಲ್ಲರೂ ಭಾವಿಸಿದ್ದರು. ಅಲ್ಲಿಗೆ ಬಂದಿದ್ದ ಸಾವಿರಾರು ಯಾತ್ರಿಕರೂ ಕೂಡಾ ಈ ವಸ್ತುವಿನೊಂದಿಗೆ

ಸ್ನಾನ ಮಾಡಿ ಧನ್ಯರಾದೆವೆಂದು ತಿಳಿದರು. ಯುಧಿಷ್ಠಿರನೇ ಮೊದಲಾದ ಪಾಂಡವರು ಸ್ನಾನ ಮುಗಿಸಿ ಧನ್ಯತಾಭಾವದೊಂದಿಗೆ ಆ ಕಹಿ ಸೋರೇಕಾಯಿಯೊಡನೆ ಶ್ರೀಕೃಷ್ಣನಲ್ಲಿಗೆ ಬಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಶ್ರೀಕೃಷ್ಣನು ಕೊಟ್ಟ ಸೋರೇಕಾಯಿ ಮಾತ್ರ ಗಂಗಾಸ್ನಾನಕ್ಕಾಗಿ ಬಂದ ಯಾತ್ರಿಕರೊಂದಿಗೆ ಗಂಗಾಸ್ನಾನ ಮಾಡಿತೆಂಬ ವಿಚಾರವನ್ನು ಶ್ರೀಕೃಷ್ಣನಿಗೆ ನಿವೇದಿಸಿದರು. ಕೂಡಲೇ ಅವನು ''ಗಂಗಾಸ್ನಾನದಿಂದ ನಾನು ಕೊಟ್ಟ ಈ ಫಲವು ಕೂಡಾ ಅತ್ಯಂತ ಪವಿತ್ರವಾಗಿರಬಹುದಲ್ಲವೇ ? ಆದ ಕಾರಣ ನೀವೆಲ್ಲರೂ ಪ್ರಸಾದ ರೂಪದಲ್ಲಿ ಇದನ್ನು ಹಂಚಿ ತಿನ್ನಿರಿ'' ಎಂದನು. ಅಡುಗೆಯವನು ಈ ಫಲವನ್ನು ತುಂಡು ತುಂಡು ಮಾಡಿ ಎಲ್ಲರಿಗೂ ಕೊಟ್ಟನು. ಅದನ್ನು ತಿಂದವರೆಲ್ಲ ಥೂ ಥೂ ಎಂದು ಹೇಳುತ್ತಾ ಉಗುಳುವುದಕ್ಕೆ ತೊಡಗಿದರು. ಆಗ ಶ್ರೀಕೃಷ್ಣನು- ''ಏನಾಯಿತು, ಏನಾಯಿತು ?'' ಎಂದು ಕೇಳಿದನು. ಎಲ್ಲರೂ ಮುಖ ಸಪ್ಪಗೆ ಮಾಡಿಕೊಂಡು ತುಂಬಾ ಕಹಿಯಾಗಿದೆ ಎಂದರು. ಅದಕ್ಕೆ ಶ್ರೀಕೃಷ್ಣನು ಅರೆ ಇದು ಸಾವಿರಾರು ಬಾರಿ ಗಂಗಾಸ್ನಾನ ಮಾಡಿದ ಫಲವಸ್ತುವಲ್ಲವೇ ? ಹಾಗಿದ್ದರೂ ಅದು ಸಿಹಿಯಾಗಿಲ್ಲವೇಕೆ ? ನಾನು ಇದನ್ನೇ ತಿಳಿಯಬೇಕೆಂದಿದ್ದೆ' ಎಂದನು.

**ನ ವಾರಿಣಾ ಶುದ್ಧಯತೇ ಚಾಂತರಾತ್ಮಾ..... ।**

ನೀರಿನಲ್ಲಿ ಮುಳುಗಿ ಸ್ನಾನ ಮಾಡುವುದರಿಂದ ಅಂತರಾತ್ಮ ಎಂದಿಗೂ ಶುದ್ಧವಾಗನು. ಚರ್ಮವನ್ನು ಒಗೆದರೆ ಕರ್ಮದ ಕೊಳೆ ಹೋಗದು. ಗಂಗಾಜಲದಲ್ಲಿ ನೀವೇನೋ ಚರ್ಮವನ್ನು ತೊಳೆದಿರಿ. ಆದರೆ ಮನಸ್ಸನ್ನು ತೊಳೆಯದಿದ್ದರೆ, ಮನಸ್ಸನ್ನು ಪವಿತ್ರ ನಿರ್ಮಲಗೊಳಿಸದಿದ್ದರೆ; ಆ ಸ್ನಾನದಿಂದ ಏನು ಲಾಭ? ಜ್ಞಾನರೂಪೀ ಗಂಗಾ ಜಲದಿಂದ ಮನಸ್ಸಿಗೆ ಸ್ನಾನ ಮಾಡಿಸಿರಿ. ಜ್ಞಾನಕ್ಕೆ ಸಮಾನವಾದ ಪವಿತ್ರ ವಸ್ತು ಬೇರೆ ಯಾವುದೂ ಇಲ್ಲ.''

**ನಹೀ ಜ್ಞಾನೇನ ಸದೃಶಂ ಪವಿತ್ರಂ ಇಹ ವಿದ್ಯತೇ ।**

ಅಕಲಂಕದೇವರು ಕೂಡಾ ''**ಸಮ್ಯಗ್‌ಜ್ಞಾನರೂಪೀ ಜಲದಿಂದ ಆತ್ಮನಿಗೆ ಸ್ನಾನ ಮಾಡಿಸು**'' ಎಂದಿದ್ದಾರೆ. ಭಾರತೀಯ ಆಧ್ಯಾತ್ಮದಲ್ಲಿ ತತ್ವಾರ್ಥಜ್ಞಾನದಲ್ಲಿ ಅಂತರಂಗಕ್ಕೆ ಕೂಡಾ ಮಹತ್ವ ನೀಡಲಾಗಿದೆ. ಬಹಿರಂಗ ಪದಾರ್ಥಕ್ಕೆ ಮಹತ್ವ ಕೊಡಲಿಲ್ಲ, ಆದ ಕಾರಣ ಬಹಿರಂಗ ಪದಾರ್ಥಗಳನ್ನು ಏರಿಸುವುದರಿಂದಲೇ ಭಕ್ತಿಯುಂಟಾಗುವುದಿಲ್ಲ, ಅಂತಃಕರಣದಲ್ಲಿ ಯಾವ ಭಾವಗಳಿವೆಯೋ, ಜ್ಞಾನವಿದೆಯೋ, ಅದರಿಂದ ಭಕ್ತಿಯುಂಟಾಗುತ್ತದೆ. ಬಾಹ್ಯ ವಸ್ತುವಿನಿಂದ ಭಕ್ತಿ ಹೇಗೆ ಉಂಟಾಗಲು ಸಾಧ್ಯ? ಒಂದು ವೇಳೆ ಬಾಹ್ಯ ವಸ್ತುವಿನಲ್ಲಿ ಭಕ್ತಿಯು ಸಂಭವವಾಗಿದ್ದರೆ ಹತ್ತೋ ಹನ್ನೆರಡೋ ಚೀಲಗಳಷ್ಟು ಅಕ್ಕಿಯನ್ನೇರಿಸಿ ಕೈಜೋಡಿಸಿ ಸಂಪೂರ್ಣ ಧರ್ಮವನ್ನು ಖರೀದಿಸಬಹುದಾಗಿತ್ತು ಮತ್ತು ಬಡವರಾದವರು ಕುಳಿತಲ್ಲೇ ಇರಬೇಕಾಗುತ್ತಿತ್ತು. ಏಕೆಂದರೆ ಅವರ ಹತ್ತಿರ ಸಾಧನಗಳಿಲ್ಲ, ನಾವು



ಸಾಧನಕ್ಕೆ ಮಹತ್ವ ಕೊಟ್ಟಿದ್ದೇವೆ, ಸಾಧ್ಯವನ್ನು ಮರೆತುಬಿಟ್ಟಿದ್ದೇವೆ. ಭಾವಶೂನ್ಯ ಕ್ರಿಯೆಯು ಫಲೀಭೂತವಾಗುವುದಿಲ್ಲ, ಮನಸ್ಸಿನಲ್ಲಿ ಸಂತಾಪವಿಟ್ಟುಕೊಂಡು ಶ್ರೀಗಂಧವನ್ನರೆದು ಸುಗಂಧವನ್ನು ಹೊರಡಿಸಿ ''ಸಂಸಾರತಾಪ ವಿನಾಶನಾಯ....... ಎಂದು ಹೇಳಿದರೆ ಅದರಿಂದ ಏನು ಲಾಭ ?''

ಒಬ್ಬ ಸೇಠ್ ಇದ್ದ, ಅವನಿಗೊಮ್ಮೆ ತಲೆನೋವು ಉಂಟಾಯಿತು. ಅವನ ಪತ್ನಿಯು ಅವನ ತಲೆಗೆ ಲೇಪ ಹಚ್ಚುವುದಕ್ಕಾಗಿ ಶ್ರೀಗಂಧವನ್ನು ಅರೆಯತೊಡಗಿದಳು. ಸೇಠ್ ಹೇಳಿದ- ''ನೀನು ಚಂದನ ಅರೆಯುವುದರಿಂದಲೇ ನನ್ನ ತಲೆನೋವು ಹೆಚ್ಚಾಗಿದೆ. ಈಗ ಅರೆಯುವುದನ್ನು ನಿಲ್ಲಿಸಿಬಿಡು.' ಪತ್ನಿ ಹೇಳಿದಳು- ''ಗಂಧವನ್ನು ಅರೆಯುತ್ತಾ ಇದ್ದೇನೆ ಹೊರತು ನಿಮ್ಮ ತಲೆಗೆ ಹಚ್ಚಲಿಲ್ಲವಲ್ಲ, ನಿಮ್ಮ ತಲೆ ನೋವು ಹೋಗುವುದಾದರೂ ಹೇಗೆ?'' ಸೇಠ್ ಹೇಳಿದ- ''ಹಾಗಲ್ಲ ಮಾರಾಯ್ತಿ, ನೀನು ಶ್ರೀಗಂಧ ಅರೆಯುವಾಗ ನಿನ್ನ ಕೈಗಳಲ್ಲಿ ಧರಿಸಿದ ಬಳೆಗಳ ಸದ್ದು ಇದೆಯಲ್ಲಾ ಅದನ್ನು ಕೇಳುವುದಕ್ಕಾಗುವುದಿಲ್ಲ'' ಪತ್ನಿಗೆ ಅರ್ಥವಾಯಿತು. ಅವಳು ಬಳೆಗಳನ್ನು ಕಳಚಿಬಿಟ್ಟು ಮತ್ತೆ ಗಂಧವನ್ನು ತೇಯಲು ತೊಡಗಿದಳು. ಆಗ ಸೇಠ್‌ಜೀ ''ಈಗ ನನ್ನ ಮನಸ್ಸಿಗೆ ಶಾಂತಿ ಸಿಕ್ಕಿತು'' ಎಂದ. ಆದರೆ ಅವನ ಮನಸ್ಸಿನಲ್ಲಿ ಏನೋ ಒಂದು ವಿಚಾರ ಸುಳಿಯುತ್ತಲೇ ಇತ್ತು. ಅದು ಹೀಗಿತ್ತು- ''ನನ್ನ ಪತ್ನಿಯ ಎರಡು ಬಳೆಗಳ ಸದ್ದು ನನ್ನ ತಲೆನೋವನ್ನು ಇಷ್ಟೊಂದು ಹೆಚ್ಚಿಸಿತಲ್ಲಾ ! ಹಾಗಾದರೆ ಈ ಸಂಸಾರದ ಜಂಜಾಟ ಎಷ್ಟಿರಲಿಕ್ಕಿಲ್ಲ ! ಸಂಸಾರವೆಂದರೆ ಸಂಪೂರ್ಣ ನೋವೇ ನೋವು. ಈ ಸಂಸಾರವೇ ಅಸಾರವಾದುದು.'' ಹೀಗೆ ಯೋಚಿಸಿದ ಅವನು ದೀಕ್ಷಾಧಾರಣೆ ಮಾಡಿದನು. ಯಾವಾಗಲೂ ಮನಸ್ಸಿನಲ್ಲಿ ಎರಡು ವಿಚಾರಗಳು ಹುಟ್ಟಿಕೊಂಡಾಗ ಒಂದಕ್ಕೊಂದು ಸರಿಹೊಂದದೆ ತಾಕಲಾಟ ಪ್ರಾರಂಭವಾಗುತ್ತದೆ. ವಿಕಲ್ಪಗಳು ನಡೆಯುತ್ತಲೇ ಇರುತ್ತವೆ. ಆಗ ಸಂಸಾರ ತಾಪದ ನಿವಾರಣೆ ಹೇಗೆ ? ಮನಸ್ಸಿನಲ್ಲಿ ರಾಗದ, ದ್ವೇಷದ ಬೆಂಕಿ ಉರಿಯುತ್ತಲೇ ಇರುತ್ತದೆ. ಇದಕ್ಕೊಂದು ಮಾರ್ಗೋಪಾಯ ನೋಡಲೇಬೇಕಲ್ಲವೇ ? ಆಗ ಗಂಧವನ್ನೇರಿಸಿ, ಬಾಹ್ಯ ಪದಾರ್ಥಗಳನ್ನೊಟ್ಟುಗೂಡಿಸಿ ಶಾಂತಿ ಹೇಗೆ ಸಿಗಬಹುದೆಂದು ಪ್ರಯತ್ನಿಸಬೇಕು. ಇದರಲ್ಲಿ ಭಾವ ಪೂಜೆಯೇ ಸ್ಥಾಯಿಯಾದುದು ಮತ್ತು ಪ್ರಭಾವಶಾಲಿಯಾದುದು. ಒಂದೆಡೆ ಆಚಾರ್ಯ ಅಮಿತಗತಿಯವರು ಹೀಗೆ ಹೇಳಿದ್ದಾರೆ.

**ವಚೋ ವಿಗ್ರಹ ಸಂಕೋಚೋ ದ್ರವ್ಯಪೂಜಾ ನಿಗದ್ಯತ ॥**

ಅರ್ಥ:- ಭಾವ ಪೂಜೆಯೇ ಶಾಶ್ವತವಾದುದು. ನಾವು ಈ ಭಾವ ಪೂಜೆಯನ್ನೇ ಮರೆತುಬಿಟ್ಟಿದ್ದೇವೆ. ಪಂಡಿತ್ ತೋಡರಮಲ್ಲಜೀಯವರು ಮೋಕ್ಷಮಾರ್ಗ ಪ್ರಕಾಶಕದಲ್ಲಿ ಈ ರೀತಿ ಬರೆದಿದ್ದಾರೆ- ''ಉತ್ತಮ ವಸ್ತುವನ್ನು ಏರಿಸುವುದರಿಂದ ಅದರ ಫಲವೂ ಉತ್ತಮವಾಗಿರುತ್ತದೆ. ಜೊತೆಗೆ ಭಾವವೂ ಉತ್ತಮವಾಗಿರಬೇಕು. ಎಲ್ಲಿ ಭಾವವು ಜಾಗೃತ

ವಾಗಿರುದಿಲ್ಲವೋ ಮನಸ್ಸಿನಲ್ಲಿ ಗದ್ಗದತೆ ಉಂಟಾಗಿರುವುದಿಲ್ಲವೋ, ಆನಂದ ಇರುವುದಿಲ್ಲವೋ ಅದರಿಂದ ಲಾಭವಾದರೂ ಏನು ?''

ವಸ್ತುವೆಂದರೆ ಅದು ಸಾಧನ ಮಾತ್ರ. ಆನಂದವಿರುವುದು ಮನಸ್ಸಿನಲ್ಲಿ. ಪೂಜೆಯಲ್ಲಿ ಅಕ್ಷತೆ ಹಾಕುತ್ತಾರೆ. ಶುಭ್ರ, ಬಿಳಿ, ನಿರ್ಮಲ ಅಖಂಡ ಅಕ್ಷತೆ ಹಾಕುತ್ತಾರೆ. ಇದೇ ರೀತಿ ಅಖಂಡ ಆತ್ಮನ ಧ್ಯಾನ ಮಾಡಿರಿ. ಆತ್ಮನನ್ನು ಖಂಡ-ಖಂಡವಾಗಿ ಮನ್ನಿಸಿದರೆ ಅಕ್ಷತೆ ಹಾಕುವುದರ ಅರ್ಥವೇನು ? ಲಾಭವೇನು ? ನಮ್ಮ ಜ್ಞಾನವು ಅಕ್ಷಯವಾದುದು, ಆತ್ಮನು ಅಕ್ಷಯ. ಇವು ಎಂದಿಗೂ ನಾಶವಾಗುವಂಥಹುಗಳಲ್ಲ ಆದುದರಿಂದಲೇ ಭಗವಂತರನ್ನು ಅಕ್ಷರ, ಅಕ್ಷಯ, ಅಕ್ಷತ ಎಂದು ಹೇಳಲಾಗಿದೆ. ಮಹಾನುಭಾವರೇ, ನಾವು ಮನಸ್ಸಿನಲ್ಲಿ ಶುದ್ಧ ಭಾವವನ್ನಿರಿಸಿಕೊಳ್ಳೋಣ. ಶುದ್ಧೋಪಯೋಗವೇ ಧರ್ಮವಾಗಿರುತ್ತದೆ.

**ಧರ್ಮೋ ಶುದ್ಧೋಪಯೋಗಃ ।**

ಶುದ್ಧ ಪರಿಣಾಮವೇ ಧರ್ಮ. ಯಾವಾಗ ಧರ್ಮಧ್ಯಾನದಲ್ಲಿ ಮುಳುಗುತ್ತಾರೋ ಆಗಲೇ ಪ್ರತೀಕರೂಪ ಅಕ್ಷತೆಯನ್ನು ಏರಿಸುವ ಲಾಭ ಉಂಟಾಗುತ್ತದೆ. ಅಕ್ಷತೆಯ ನಂತರ ಪುಷ್ಪ ಏರಿಸುತ್ತಾರೆ. ಧರ್ಮದ ಸುಗಂಧ ಎಲ್ಲಕಡೆಗೂ ಹಬ್ಬಿದಾಗ ಪುಷ್ಪ ಏರಿಸುವುದರ ಲಾಭ ದೊರಕುತ್ತದೆ. ಯಾವಾಗ ಮನೆಯಲ್ಲಿ ಧರ್ಮ-ಧ್ಯಾನದ ಸುಗಂಧ ಪಸರಿಸುತ್ತದೋ, ವಾತಾವರಣ ಸುಗಂಧಿತವಾಗುತ್ತದೋ ಆಗಲೇ ಪೂಜೆ ಮಾಡುವುದು ಸಾರ್ಥಕವೆನಿಸುತ್ತದೆ. ಮನೆಯಲ್ಲಿ ಮಗಳು ಮತ್ತು ಸೊಸೆ ಇವರೊಳಗೆ ಪಕ್ಷಪಾತ, ಸೊಸೆಗೆ ಕಷ್ಟ ಕೊಟ್ಟು ಸತಾಯಿಸಿದರೆ ಅದು ಧರ್ಮವಾಗುವುದು ಹೇಗೆ ? ಸೊಸೆಯನ್ನು ಕಂಡೊಡನೆ ದ್ವೇಷ ಕಾರುವುದು, ಅತ್ತ ಮಗಳ ಬಗ್ಗೆ ಅತಿಯಾದ ಪ್ರೀತಿ ತೋರಿಸುವುದು, ಇದು ನನ್ನದು-ಇದು ಅವನದು ಎಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು. ಹೀಗೆ ಮಾಡುತ್ತಾ ಪುಷ್ಪವನ್ನು ದೇವರಿಗೆ ಏರಿಸಿದರೆ ಏನು ಮಾಡಿದ ಹಾಗಾಯಿತು ? ಯಾವಾಗ ಸೊಸೆ ಮತ್ತು ಮಗಳ ಕಡೆಗೆ ಸಮಾತಾಭಾವ ಬೆಳೆಯುತ್ತದೋ ಆಗ ಮಾತ್ರ ಧರ್ಮ ಪ್ರಾರಂಭವಾಗುತ್ತದೆ.

ಇಂದು ಎಲ್ಲ ಬಾಹ್ಯ ಕ್ರಿಯಾಕಾಂಡವನ್ನು ಮಾತ್ರವೇ ಧರ್ಮವೆಂದು ತಿಳಿದುಬಿಟ್ಟಿದ್ದಾರೆ. ಈ ಎಲ್ಲ ಕ್ರಿಯಾಕಾಂಡಗಳಲ್ಲೂ ಮನಸ್ಸಿನಿಂದ, ಅಂತರಂಗದಿಂದ, ಚಾರಿತ್ರದಿಂದ ಸಂಬಂಧ ಇಲ್ಲದೆ ಹೋದರೆ ಅದರಿಂದ ಯಾವ ಪ್ರಯೋಜನವೂ ಇರಲಾರದು. ಮೋಹವು ಎಲ್ಲರನ್ನೂ, ಮೂರು ಲೋಕವನ್ನು ತನ್ನ ವಶದಲ್ಲಿರಿಸಿಕೊಂಡಿದೆ. ಭಗವಾನ್ ಮಹಾವೀರರು ಅಂತಹ ಮೋಹವನ್ನು ತಮ್ಮ ವಶವಿರಿಸಿಕೊಂಡರು. ಮೋಹವನ್ನು ಗೆದ್ದುಕೊಂಡರು. ಈ ಕಾರಣದಿಂದಲೇ ಇಂದು ಅವರ ಸುಗಂಧ ಎಲ್ಲಕಡೆಗೂ ಹಬ್ಬಿದೆ. ನೀವು ಕೂಡಾ ಆ ಪುಷ್ಪದಂತೆ ಮನೆಯಲ್ಲಿ, ಪರಿವಾರದಲ್ಲಿ, ಗಲ್ಲಿಯಲ್ಲಿ, ಮೊಹಲ್ಲಾಗಳಲ್ಲಿ, ಸಮಾಜದಲ್ಲಿ ಧರ್ಮದ ಸುಗಂಧವನ್ನು ಯಾವಾಗ ಹಬ್ಬಿಸುತ್ತೀರೋ, ಆವಾಗ ಮಾತ್ರವೇ



ಧರ್ಮದ ಸಾರ್ಥಕತೆಯುಂಟಾಗುತ್ತದೆ. ಹಾಗೆ ಮಾಡದೆ ಹೋದರೆ ಹೊರಗಿನ ಕ್ರಿಯಾಕಾಂಡಗಳಿಂದ ಜಗತ್ತಿನಲ್ಲಿ ಅಶಾಂತಿಯೇ ಹಬ್ಬಿಕೊಳ್ಳಬಹುದು. ಕ್ರಿಯಾಕಾಂಡಗಳಿಂದಲೇ ನಾನಾ ರೀತಿಯ ದ್ವಂದ್ವಗಳು ಹಬ್ಬುತ್ತವೆ. ರಾಗ-ದ್ವೇಷಗಳು ಹಬ್ಬುತ್ತವೆ. ಕೇವಲ ಕ್ರಿಯಾಕಾಂಡಗಳಲ್ಲೆ ನಿರತರಾದರೆ ನಿಮ್ಮ ಸಮಸ್ತ ಕ್ರಿಯೆಯೂ ಬಂಜರು ಭೂಮಿಯಲ್ಲಿ ಬೀಜ ಬಿತ್ತಿದಂತೆ ಆಗುತ್ತದೆ.

ಪುಷ್ಪದ ನಂತರ ಏರಿಸುವುದು ಚರು ಅರ್ಥಾತ್ ನೈವೇದ್ಯವನ್ನು. ನೈವೇದ್ಯದಲ್ಲಿ ಐದೇ ಭಕ್ಷಣಗಳನ್ನಿಡುತ್ತಾರೆ. ಆದರೆ ಭಗವಂತನಾದರೋ ತೃಪ್ತನು, ವೀತರಾಗನು. ಅವನಿಗೆ ಯಾವುದೇ ಇಚ್ಛೆ ಇರುವುದಿಲ್ಲ. ಯಾವುದೇ ಕಾಮನೆಗಳಿರುವುದಿಲ್ಲ. ಈಗಲಾದರೂ ತೃಪ್ತರಾಗಿರಬೇಕಾದವರು ನಾವು. ಆದರೆ ನಾವು ಮಾತ್ರ ನಮ್ಮ ಆಕಾಂಕ್ಷೆಗಳೆಲ್ಲಾ ಪೂರೈಸುವಂತಾಗಲಿ, ಸಮಾಪ್ತವಾಗುವಂತಾಗಲಿ ಎಂದು ಬಯಸುತ್ತೇವೆ. ಈ ರೀತಿಯ ಹಸಿವೆ ಎಂಬುದು ಬಹಳ ವಿಚಿತ್ರವಾದುದು. ''**ಬುಭಿಕ್ಷಿತಂ ಕಿಂ ನ ಕರೋತಿ ಪಾಪಂ**'' ಅರ್ಥಾತ್ ಹಸಿವೆಯು ಏನೇನು ಮಾಡಿಸುತ್ತದೆ ಎಂಬುದನ್ನು ಹೇಳುವಂತಿಲ್ಲ.

ಒಬ್ಬ ವ್ಯಕ್ತಿ ಈಗ ತಾನೇ ಕೆಲವು ದಿನಗಳ ಹಿಂದೆ ಜಪಾನಿಗೆ ಹೋಗಿ ಬಂದಿದ್ದರು. ಅವರು ''ಒಂದು ಕಾಲದಲ್ಲಿ ಜಪಾನಿನಲ್ಲಿ ಕೂಡಾ ಸಂಪೂರ್ಣ ಶಾಕಾಹಾರವಿತ್ತು'' ಎಂದು ಹೇಳುತ್ತಿದ್ದರು. ಹೀಗೆ ಯಾವನೋ ಒಬ್ಬ ನಾಗರಿಕ ಅವರಿಗೆ ಹೇಳಿದನಂತೆ ಯುದ್ಧ ಅಕಾಲ ಇತ್ಯಾದಿ ವಿಶೇಷ ಪರಿಸ್ಥಿತಿಯಲ್ಲಿ ಮಾಂಸಾಹಾರದ ಪ್ರಚಲನ ಆಗುವುದು ಸಹಜ. ಭಾರತವು ಹಿಂದೆ ಪೂರ್ಣತಃ ಶಾಕಾಹಾರಿಯಾಗಿತ್ತು. ಮನು ಮಹಾರಾಜನು ಕೂಡಾ ಈ ತಥ್ಯದ ಉಲ್ಲೇಖ ಮಾಡಿದ್ದಾನೆ. ಯಾವಾಗ ಭಾರತಕ್ಕೆ ವಿದೇಶೀಯರು ಆಗಮಿಸಿದರೋ, ಆಗ ಭಾರತದಲ್ಲಿ ಮಾಂಸಾಹಾರ ಪ್ರಾರಂಭವಾಯಿತು. ಈಗ ಸ್ವಾತಂತ್ರ್ಯನಂತರವಂತೂ ದೇಶದಲ್ಲಿ ಪ್ರತಿ ಮನೆಯ ಪಕ್ಕದಲ್ಲೂ ಒಂದೊಂದು ಕಸಾಯಿಖಾನೆ ತಲೆಯೆತ್ತಿರುವುದನ್ನು ಕಾಣಬಹುದಾಗಿದೆ. ಆ ವಿಷಯದಲ್ಲಿ ರಾಜರು ಪ್ರಜೆಗಳು ಎಲ್ಲರೂ ಏಕಾಭಿಪ್ರಾಯ ಹೊಂದಿದವರಾಗಿರುತ್ತಾರೆ. ಹೀಗಿದ್ದರೆ ಯಾರಮೇಲೆ ದೋಷಾರೋಪಣೆ ಮಾಡುವುದು?

ಮಹಾನುಭಾವರೇ, ''**ಜೈಸಾ ಖಾಲೇ ಅನ್ನ್, ವೈಸಾ ಹೋವೇ ಮನ್, ಜೈಸಾ ಪೀವೆ ಪಾನೀ, ವೈಸೀ ಬೋಲೇ ವಾಣೀ**'' ಅರ್ಥಾತ್ ಎಂತಹ ಆಹಾರ ಸೇವಿಸುತ್ತೀರೋ ಅಂತಹ ಮನಸ್ಸು ಇರುತ್ತದೆ. ಎಂತಹ ನೀರು ಕುಡಿಯುತ್ತೀರೋ ಅಂತಹ ಮಾತು ಬಾಯಿಯಿಂದ ಹೊರಡುತ್ತದೆ. ಎಂಬಂತೆ ನಮ್ಮ ದೇಹ, ಮನಸ್ಸುಗಳ ಮೇಲೆ ಈ ಆಹಾರ ಪಾನೀಯಗಳು ಪರಿಣಾಮ ಬೀರುತ್ತವೆ. ಆದಕಾರಣ ಪವಿತ್ರವಾದ ನೈವೇದ್ಯವನ್ನು ದೇವರಿಗೆ ಸಮರ್ಪಿಸುತ್ತಾ ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳಿರಿ, ಭೋಜನದ ಕಡೆಗೆ ಮಾತ್ರ ಹೆಚ್ಚು ಆಸಕ್ತಿ ತೋರಿಸದಿರಿ. ಸಾಂಸಾರಿಕ ದೆಸೆಯಲ್ಲಿ ಭೋಜನ ಸ್ವೀಕಾರಕ್ಕೆ ನಿಷೇಧವಿಲ್ಲ, ಆದರೆ ಜೀರ್ಣಶಕ್ತಿಗೆ ಅನುಗುಣವಾಗಿ ಆಹಾರ ಸ್ವೀಕರಿಸು ಎಂದು ಹೇಳಿದೆ. ಒಟ್ಟಿನಲ್ಲಿ

ತಿಂದ ಮೇಲೆ ಅದರಿಂದಾಗಿ ರೋಗ ಬರಬಾರದು. ಹಾಗೆ ಮಿತಿಯಲ್ಲಿ ತಿನ್ನಬೇಕು. ಸಂಸಾರಕ್ಕೆ ಅಂತ್ಯವೆಂಬುದಿಲ್ಲ. ಅದನ್ನು ಹೆಚ್ಚಿಸಿದಂತೆ ಅದು ವೃದ್ಧಿ ಹೊಂದುತ್ತಾ ಹೋಗುತ್ತದೆ. ಆಸೆ-ಆಕಾಂಕ್ಷೆಗಳಿಗೂ ಯಾವುದೇ ಸೀಮೆ ಇರುವುದಿಲ್ಲ. ಇಂದು ಮನುಷ್ಯ ಅನ್ನದ ಕೀಟವಾಗಿದ್ದಾನೆ. ಹಾಗೆಯೇ ಭಕ್ಷ್ಯ-ಅಭಕ್ಷ್ಯ ಎಂಬ ವಿವೇಚನೆಯಿಲ್ಲದೆ ಮನುಷ್ಯ ಸರ್ವಭಕ್ಷಿಯಾಗಿದ್ದಾನೆ. ಶುದ್ಧ-ಅಶುದ್ಧದ ಬಗ್ಗೆಯೂ ಅವನಿಗೆ ಗಮನವಿರುವುದಿಲ್ಲ. ಹೋಟೆಲುಗಳಲ್ಲಿ ರೈಲ್ವೇ ಸ್ಟೇಷನ್‌ಗಳಲ್ಲಿ ಅಲ್ಲಿಯ ಪಾತ್ರೆಗಳಲ್ಲೇ ತಿನ್ನುತ್ತಾರೆ. ಕ್ಷಯರೋಗಿಗಳು ತಿಂದ ಬಟ್ಟಲಲ್ಲೇ ಇನ್ನೊಬ್ಬನು ತಿನ್ನುತ್ತಾನೆ. ಸ್ವಚ್ಛತೆ ಎಂಬುದೇ ಇಲ್ಲ. ಹೀಗಿದ್ದರೆ ರೋಗಗಳು ಎಲ್ಲೆಡೆ ಹೆಚ್ಚುತ್ತಿರುವುದು ಸಹಜವಲ್ಲವೇ ?

ಇಂದಿನ ದಿನಗಳಲ್ಲಿ ನಾಯಿ, ಬೆಕ್ಕು ಮುಂತಾದ ಪ್ರಾಣಿಗಳನ್ನು ಸಾಕುವ ಕ್ರಮ ಜೋರಾಗಿ ನಡೆಯುತ್ತಿದೆ. ಯಥಾರ್ಥ ಹೇಳುವುದಾದರೆ ಅಂತಹ ಪ್ರಾಣಿಗಳ ಸ್ಪರ್ಶದಿಂದಲೇ ಅನೇಕ ರೋಗಗಳು ಹೆಚ್ಚಾಗುತ್ತವೆ. ಅವುಗಳಾದರೋ ಪಶುಗಳಾಗಿರುತ್ತವೆ. ಅವು ನೆಕ್ಕುತ್ತವೆ, ಉಗುರುಗಳಿಂದ ಗಾಯ ಮಾಡುತ್ತವೆ. ಅದರಿಂದಾಗಿಯೂ ರೋಗಗಳು ಉಂಟಾಗುತ್ತವೆ.

ಮಹಾನುಭಾವರೇ, ನಾವು ಶುದ್ಧತೆಯ ಬಗ್ಗೆ ಮತ್ತು ಆಹಾರ, ಪಾನೀಯದ ಪವಿತ್ರತೆಯ ಬಗ್ಗೆ ಯೋಚಿಸಬೇಕು. ನಿಮ್ಮ ಶರೀರವು ಪವಿತ್ರವಾಗಿದ್ದರೆ ಮಾತ್ರ ಮನಸ್ಸು ಕೂಡಾ ಪವಿತ್ರವಾಗಿರುತ್ತದೆ, ವಾಣಿ ಪವಿತ್ರವಾಗಿರುತ್ತದೆ ಮತ್ತು ಆತ್ಮನು ಕೂಡಾ ಆಗಲೇ ಪವಿತ್ರನಾಗಿರುತ್ತಾನೆ.

ಚರುವಿನ (ನೈವೇದ್ಯದ) ನಂತರ ದೀಪವನ್ನು ಏರಿಸುತ್ತಾರೆ. ದೀಪವು ಒಂದು ಭೌತಿಕ ಪದಾರ್ಥ. ಒಂದು ದೀಪದಿಂದ ಅನೇಕ ದೀಪಗಳನ್ನು ಉರಿಸುತ್ತಾರೆ. ಇವುಗಳಿಂದ ಬಾಹ್ಯದ ಅಂಧಕಾರವು ದೂರವಾಗುತ್ತದೆ. ಇದೇ ರೀತಿ ನಮ್ಮ ಅಜ್ಞಾನವೆಂಬ ಅಂಧಕಾರವು ದೂರವಾಗಲಿ ಎಂಬ ಭಾವನೆಯಿಟ್ಟುಕೊಳ್ಳಿರಿ. ಅದಕ್ಕಾಗಿಯೇ ಸ್ವಾಧ್ಯಾಯ ಮಾಡುವುದು, ಸ್ಮರಣೆ ಮಾಡುವುದು, ಚಿಂತನೆ ಮಾಡುವುದು ಇವೆಲ್ಲ ಬೇಕು. ದೇವರ ಮುಂದೆ ತುಪ್ಪದ ದೀಪ ಉರಿಸುತ್ತಾರೆ. ಭಗವಂತನಾದರೋ ಸ್ವಯಂ ಪ್ರಕಾಶಮಾನನು. ಅವನಿಗೆ ಪ್ರಕಾಶ ತೋರಿಸಬೇಕಾಗಿಲ್ಲ, ಏಕೆಂದರೆ ಅವನು ಜ್ಞಾನಮಯ. ನಿಮ್ಮ ಅಜ್ಞಾನವನ್ನು ದೂರಗೊಳಿಸುವುದಕ್ಕಾಗಿಯೇ ಸ್ವಯಂ ನೀವೇ ಚಿಂತನೆ ಮಾಡಬೇಕು. ಹಾಗಾದರೆ ಯಾರ ಜ್ಞಾನ ನಿಮಗೆ ಬೇಕು? ಆತ್ಮನ ಮೂಲಕ ಆತ್ಮನ ಜ್ಞಾನವೇ ಕಾರ್ಯಕಾರಿಯಾದುದು.

ಆತ್ಮಾ ಜ್ಞಾನಂ ಸ್ವಯಂ ಜ್ಞಾನಂ ಜ್ಞಾನಾದನ್ಯತ್ಕರೋತಿ ಕಿಮ್ ।
ಪರಭಾವಸ್ಯ ಕರ್ತಾತ್ಮಾ ಮೋಹೋಽಯಂ ವ್ಯವಹಾರಿಣಾಮ್ ॥

ಜಗತ್ತಿನಲ್ಲಿ ಯಾವ ಕರ್ತೃತ್ವ ಭಾವವಿದೆಯೋ ಅದನ್ನು ತೊಲಗಿಸಬೇಕು. ''ನನ್ನ



ಕಾರಣದಿಂದ ನನ್ನ ಮಗ ಸುಖಿಯಾಗಿದ್ದಾನೆ, ನನ್ನ ಕಾರಣದಿಂದ ನನ್ನ ತಂದೆ ಸುಖಪಡುತ್ತಿದ್ದಾನೆ'' ಎಂಬುದೆಲ್ಲ ಮಿಥ್ಯಾತ್ವ ಭಾವ. ಅದನ್ನು ದೂರಗೊಳಿಸಬೇಕು. ಎತ್ತಿನ ಗಾಡಿಯ ಕೆಳಗಡೆ ನಡೆಯುವ ನಾಯಿಯು ''ಈ ಗಾಡಿ ನನ್ನ ಕಾರಣದಿಂದ ಚಲಿಸುತ್ತಿದೆ, ನಾನು ಇದನ್ನು ಕೊಂಡು ಹೋಗುತ್ತಿದ್ದೇನೆ'' ಎಂದು ಭಾವಿಸುತ್ತಿದೆಯಂತೆ. ಇದು ಭ್ರಮೆ ಬುದ್ಧಿ. ಪ್ರತಿ ಆತ್ಮನೂ ಸ್ವತಂತ್ರನಾಗಿರುತ್ತಾನೆ. ತನ್ನ ಕರ್ತಾ ಆಗಿರುತ್ತಾನೆ. ಆ ಕರ್ಮಗಳನ್ನು ಸ್ವಯಂ ಭೋಗಿಸುತ್ತಾನೆ. ನೋವು ಇರುವುದು ಮಗನ ಹೊಟ್ಟೆಯಲ್ಲಿ. ಅದಕ್ಕೆ ತಂದೆ ಔಷಧಿ ತಿಂದರೆ ಮಗನ ಹೊಟ್ಟೆನೋವು ಗುಣವಾಗಬಲ್ಲುದೇ ? ಗಂಡನಿಗೆ ಹಸಿವೆ ನೀಗುವುದು ಹೇಗೆ ಸಾಧ್ಯ ? ಆದ ಕಾರಣ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕರ್ಮವನ್ನು ಸ್ವಯಂ ಭೋಗಿಸಲೇಬೇಕಾಗುತ್ತದೆ. ಮನಸ್ಸಿನಲ್ಲಿ ಕರ್ತೃ ಸ್ವಭಾವವಿದ್ದರೆ ಎಲ್ಲ ಕ್ರಿಯೆಗಳನ್ನು ಮಾಡುತ್ತಲೇ ಇದ್ದರೂ ಕೂಡಾ ದುಃಖಗಳಿಂದ ಮುಕ್ತಿ ಸಿಗಲಾರದು. ಪಾಪಗಳಿಂದ ಮುಕ್ತಿ ಸಿಗಲಾರದು. ಆದುದರಿಂದ ಕರ್ತಾವಾದವೇ ಎಲ್ಲಕ್ಕಿಂತ ಅಧಿಕ ಅಪಾಯಕಾರಿ.

ಒಬ್ಬ ರೈತ ವರ್ಷಾಋತುವಿನಲ್ಲಿ ಗದ್ದೆಯಲ್ಲಿ ಹತ್ತಿಯ ಬೀಜ ಬಿತ್ತುತ್ತಾನೆ. ಗಿಡಗಳು ಬೆಳೆದು ಅವುಗಳಲ್ಲಿ ಹತ್ತಿಯ ಗೊಂಚಲು ಅರಳಿದಾಗ ಆ ಹತ್ತಿಯನ್ನು ಬಿಡಿಸುತ್ತಾನೆ, ಒಂದೆಡೆ ಸಂಗ್ರಹಿಸುತ್ತಾನೆ. ಅನಂತರ ಬಿಡಿಸಿದ ಹತ್ತಿಯನ್ನು ಅರ್ಥಾತ್ ಅರಳೆಯನ್ನು ಮಾರಾಟ ಮಾಡುತ್ತಾನೆ. ಮಿಲ್ಲಿನ ಮಾಲಿಕನು ಆ ಹತ್ತಿಯಿಂದ ನೂಲು ತಯಾರಿಸುತ್ತಾನೆ. ಅನಂತರ ಆ ನೂಲನ್ನು ಬಟ್ಟೆಯ ಮಿಲ್ಲಿಗೆ ಮಾರಾಟ ಮಾಡುತ್ತಾನೆ. ಬಟ್ಟೆಯ ಮಿಲ್ಲಿನಲ್ಲಿ ಆ ನೂಲು ಬಟ್ಟೆಯಾಗುತ್ತದೆ ಮತ್ತು ಅದು ಹೊರಗೆ ಹೋದಾಗ ಬೇರೆ ಬೇರೆ ವ್ಯಾಪಾರಿಗಳು ಅದರ ಮೇಲೆ ತಮ್ಮ ಮುದ್ರೆಗಳನ್ನೊತ್ತಿ ಮಾರಾಟ ಮಾಡುತ್ತಾರೆ. ಆಗ ಈ ಬಟ್ಟೆ ಇಂತಹ ಕಂಪನಿಯ ಬಟ್ಟೆ ಎಂದು ಕರೆಯಲ್ಪಡುತ್ತದೆ. ಯಾವ ರೈತನು ಬೀಜ ಬಿತ್ತಿ ಹತ್ತಿಯ ಉತ್ಪಾದನೆ ಮಾಡಿರುತ್ತಾನೋ ಅವನ ಹೆಸರು ಎಲ್ಲಿಯೂ ಬರುವುದಿಲ್ಲ. ಇದು ಕರ್ತೃತ್ವವಾದದ ವಿಚಿತ್ರ ಲೀಲೆ. ನೋಡಿ, ತಾಯಿಯಾದವಳು ತನ್ನ ಸಂತಾನದ ಕುಡಿಯನ್ನು ಒಂಭತ್ತು ತಿಂಗಳು ತನ್ನ ಹೊಟ್ಟೆಯಲ್ಲಿ ಹೊತ್ತಿರುತ್ತಾಳೆ. ಮಗು ಜನಿಸಿದ ಮೇಲೆ ಶಾಲೆಯಲ್ಲಿ ಎಲ್ಲ ಕಡೆಗಳಲ್ಲೂ ತಂದೆಯ ಹೆಸರು ಬರೆಯಲ್ಪಡುತ್ತದೆ. ''ಇದು ಯಾರ ಮಗ, ಇದು ಯಾರ ಮಗಳು ?'' ಎಂದು ಕೇಳಿದಾಗ ತಂದೆಯ ಹೆಸರು ಕೊಡಲಾಗುತ್ತದೆ. ಈಗ ಕೇರಳದಲ್ಲಿ ಮಾತ್ರ ಮಾತೃತ್ವ ಪ್ರಧಾನವಾದ ಸಂಸ್ಕೃತಿ ಉಳಿದಿದೆ. ಅಲ್ಲಿ ತಾಯಿಯ ಹೆಸರು ಹೇಳಲಾಗುತ್ತದೆ. ನಾವು ಈ ಕರ್ತೃತ್ವವಾದದಲ್ಲೇ ಮುಳುಗಿಬಿಟ್ಟಿದ್ದೇವೆ. ಆದ ಕಾರಣ ಅಭಿಮಾನ ಉತ್ಪನ್ನವಾಗುತ್ತದೆ. ''ಇದನ್ನು ನಾನು ಮಾಡಿದೆ, ಹೀಗೆ ಮಾಡಿದೆ. ನನ್ನ ಕಾರಣದಿಂದಲೇ ಹೀಗಾಯಿತು.'' ಎಂಬ ದುರಭಿಮಾನ, ಈ ಅಜ್ಞಾನವೇ ದುಃಖಕ್ಕೆ ಕಾರಣವಾದುದು. ಇದನ್ನು ದೂರಗೊಳಿಸುವುದಕ್ಕಾಗಿಯೇ ದೀಪವನ್ನು ಏರಿಸುತ್ತಾರೆ.

ಸುಖಕ್ಕೆ ಕಾರಣವಾದುದು ಜ್ಞಾನ. ಅಜ್ಞಾನವು ದುಃಖಕ್ಕೆ ಕಾರಣವಾಗಿದೆ. ದಾರಿಯ

ಲ್ಲೊಂದು ಸರ್ಪ ಕಾಣಿಸಿಕೊಂಡಿದೆ. ಆದರೆ ಅಜ್ಞಾನದಿಂದಾಗಿ ''ಇದು ಕಚ್ಚಲಿಕ್ಕಿಲ್ಲ, ಅದರಿಂದ ಏನೂ ಆಗದು'' ಎಂದು ತಿಳಿಯುತ್ತೇವೆ. ಆದರೆ ಯಾವಾಗ ಇದು ನಿಜವಾದ ಹಾವು ಎಂಬ ವಿಚಾರ ತಿಳಿಯುತ್ತದೋ ಆಗ ನಾವು ಅದು ಕಚ್ಚದಂತೆ ಹೇಗೆ ನೋಡಿಕೊಳ್ಳುವುದು ? ಅದರ ಕಡಿತದಿಂದ ಪಾರಾಗುವುದು ಹೇಗೆಂದು ಯೋಚಿಸುತ್ತೇವೆ. ಜ್ಞಾನವೇ ಸುಖಿಕ್ಕೆ ಕಾರಣ. ಇಂತಹ ಜ್ಞಾನ ಪ್ರಾಪ್ತಿಗಾಗಿಯೇ ದೀಪವನ್ನು ಉರಿಸುತ್ತೇವೆ. ಆದರೆ ಈ ದೀಪವು ಭೌತಿಕವಾದುದು. ಇದು ಹೊರಗಿನ ಕತ್ತಲೆಯನ್ನು ಮಾತ್ರ ದೂರಗೊಳಿಸಬಲ್ಲದು. ಆದರೆ ಅಂತರಂಗದ ಕತ್ತಲೆ ಹೋಗಬೇಕಾದರೆ ನಾವು ಪ್ರತಿದಿನ ಅಧ್ಯಯನ ಮಾಡಬೇಕು, ಸ್ವಾಧ್ಯಾಯ ಮಾಡಬೇಕು, ಧರ್ಮಗ್ರಂಥಗಳನ್ನು ಓದಬೇಕು. ಸತ್ಸಂಗದಿಂದ ಒಳ್ಳೆಯ ವಿಚಾರವನ್ನು ಕಲಿಯಲಾಗುತ್ತದೆ. ನಿಮ್ಮ ಪರಿಣಾಮಗಳನ್ನು ನಿರ್ಮಲಗೊಳಿಸಿರಿ, ಜ್ಞಾನಮಯವನ್ನಾಗಿ ಮಾಡಿರಿ, ಧ್ಯಾನಮಯವನ್ನಾಗಿ ಮಾಡಿರಿ. ಹಾಗೆ ಮಾಡಿದಾಗಲೇ ಆ ಭೌತಿಕ ದೀಪವನ್ನು ಉರಿಸುವುದರ ಲಾಭ ದೊರಕುತ್ತದೆ. ಅಜ್ಞಾನವೆಂಬ ಅಂಧಕಾರವನ್ನು ದೂರ ಮಾಡಿರಿ. ಆಗಲೇ ಈ ದೀಪ ಉರಿಸುವುದರ ಸಾರ್ಥಕತೆ ಉಂಟಾಗುತ್ತದೆ.

ದೀಪದ ಬಳಿಕ ಧೂಪ ಹಾಕುತ್ತಾರೆ. ''ಅಷ್ಟಕರ್ಮದಹನಾಯ ಧೂಪಂ ನಿರ್ವಪಾಮೀತಿ'' ಹಾಗೆ ನೋಡಿದರೆ ನಾವೇ ಎಲ್ಲಕ್ಕಿಂತ ಶ್ರೇಷ್ಠ ಧೂಪ. ಕೇವಲ ಧೂಪ ಉರಿಸುವುದರ ಮೂಲಕ ಕರ್ಮ ಉರಿದುಹೋಗಲಾರದು. ಪಾಪ-ಪುಣ್ಯ, ಜ್ಞಾನಾವರಣ, ದರ್ಶನಾವರಣ ಇತ್ಯಾದಿ ಕರ್ಮಗಳನ್ನು ಉರಿಸಲಿಲ್ಲವೆಂದಾದರೆ ಆ ಧೂಪ ಉರಿಸುವುದರ ಮೂಲಕ ಹೊರಗೆ ಸುಗಂಧ ಹರಡಿಸಿದ ಫಲವಷ್ಟೇ ಸಿಗಬಲ್ಲದು. ಧರ್ಮ ಧ್ಯಾನದಿಂದ, ಏಕಾಗ್ರತೆಯಿಂದ, ಪರಮಾತ್ಮನ ಚಿಂತನೆಯಿಂದ ಮಾತ್ರವೇ ಕರ್ಮವನ್ನು ನಷ್ಟಗೊಳಿಸಲು ಸಾಧ್ಯ.

''ಧ್ಯಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಕ್ಷಣಾತ್'' ಅರ್ಥಾತ್ ಕೇವಲ ಧೂಪ ಉರಿಸಿದ ಮಾತ್ರಕ್ಕೆ ಕರ್ಮನಷ್ಟವಾಗಲಾರದು. ಜ್ಞಾನ ಮತ್ತು ಧ್ಯಾನದಿಂದ ಮಾತ್ರವೇ ಕರ್ಮವು ನಷ್ಟವಾಗತ್ತದೆ. ಧೂಪದಶಮಿಯಂದು ನಾವು ರಾಶಿಗಟ್ಟಲೆ ಧೂಪ ಉರಿಸುತ್ತಿದ್ದೇವೆ. ಆದರೆ ಅದರಿಂದ ಕರ್ಮ ನಷ್ಟವಾಗಿದೆಯೇ ? ಇಲ್ಲ, ಯಾವಾಗ ಅಂತರಂಗದಲ್ಲಿ ಧ್ಯಾನ ಮಾಡುತ್ತೇವೋ ಆಗ ಮಾತ್ರವೇ ಕರ್ಮನಷ್ಟವಾಗಬಲ್ಲದು. ಆದ ಕಾರಣವೇ ಎರಡು ನಿಮಿಷದಿಂದ, ಐದು ನಿಮಿಷದವರೆ ಈ ಧ್ಯಾನವನ್ನು ಅವಶ್ಯವಾಗಿ ಪ್ರಾರಂಭಿಸಿರಿ. ಹತ್ತಿಯ ರಾಶಿ ಎಷ್ಟೇ ದೊಡ್ಡದಿರಲಿ, ಅದಕ್ಕೆ ಒಂದು ಚಿಕ್ಕ ಬೆಂಕಿಯ ಕಿಡಿ ಬಿದ್ದರೂ ಸಾಕು, ಅದು ಕ್ಷಣಾರ್ಧದಲ್ಲಿ ಉರಿದುಹೋಗುತ್ತದಲ್ಲವೆ ? ಇದೇ ರೀತಿ ಸ್ವಲ್ಪ ಹೊತ್ತಿನ ಏಕಾಗ್ರತೆಯ ಮನಸ್ಸಿನಿಂದ ಧ್ಯಾನ ಮಾಡುವುದರಿಂದ ಅಸಂಖ್ಯಾತ ಕರ್ಮಗಳು ನಿಶ್ಚಯವಾಗಿಯೂ ನಷ್ಟವಾಗುತ್ತವೆ. ಜ್ಞಾನ ಮತ್ತು ಧ್ಯಾನ ಇವೆರಡೂ ಅಗ್ನಿರೂಪಗಳಾಗಿವೆ.



ಕರ್ಮಗಳನ್ನು ಉರಿಸುವಲ್ಲಿ, ನಷ್ಟಗೊಳಿಸುವಲ್ಲಿ ಸಾಮರ್ಥ್ಯವಿದೆ. ಜ್ಞಾನಾಗ್ನಿ ಮತ್ತು ಧ್ಯಾನಾಗ್ನಿಯಲ್ಲೂ ಕರ್ಮಗಳು ನಷ್ಟವಾಗಬಲ್ಲವು.

ಅಂಗಡಿಯಿಂದ ಸಾಲಮಾಡಿ ಸಾಮಾನುಗಳನ್ನು ತರುವುದರಿಂದಲೇ ಮನೆ ಗೃಹಸ್ಥಿಯ ನಿರ್ವಹಣೆ ಆಗಲಾರದು. ಸಾಲ ಮಾಡುತ್ತಾ ಸಾಮಾನು ಖರೀದಿಸಲು ತೊಡಗಿದರೆ ಆ ಮನೆಯನ್ನು ಎಷ್ಟು ಕಾಲ ನಡೆಸಬಹುದು ? ಅದೇ ರೀತಿ ಎಷ್ಟು ಸಮಯ ದಿನ ದೂಡಬಹುದು ? ಮನೆ ನಡೆಸಬೇಕಾದರೆ ಸ್ವಯಂ ಸಂಪಾದನೆ ಮಾಡಲೇ ಬೇಕಾಗುತ್ತದೆ. ಆದ ಕಾರಣ ಸ್ವಯಂ ಶಾಸ್ತ್ರ-ಸ್ವಾಧ್ಯಾಯ ಮಾಡಿರಿ. ಪ್ರತಿದಿನ ಒಂದು ಸಾಲು ಓದಿ ಅದನ್ನು ಬಾಯಿಪಾಠ ಮಾಡಿದಿರೆಂದಾದರೆ ಒಂದು ವರ್ಷದಲ್ಲಿ ಮುನ್ನೂರ ಐವತ್ತಾರು ಸಾಲು ಬಾಯಿಪಾಠವಾಗಿ ಬಿಡುತ್ತದೆ. ಆದರಿಂದ ಮನಸ್ಸೆಂಬ (ಮನರೂಪೀ) ಕಪಾಟಿನಲ್ಲಿ ಶಾಸ್ತ್ರದ ಭಂಡಾರವೇ ನೆಲೆಗೊಳ್ಳಬಹುದು. ಅದು ಜ್ಞಾನದ ಭಂಡಾರವೇ ಆಗಬಹುದು. ಆಗಲೇ ಪೂಜೆಯ ಫಲ ದೊರಕುವುದು. ಅದರಲ್ಲೂ ಭಾವ ಪೂಜೆಯ ಫಲ ಅಗಾಧ. ಪ್ರತಿದಿನ ಪೂಜೆ ಮಾಡಿಯೂ ಯಾವುದೇ ಮಾನಸಿಕ ಬದಲಾವಣೆ ಆಗಿಲ್ಲವೆಂದಾದರೆ ಆ ಪೂಜೆಯಿಂದ ಫಲವೇನು ?

ಒಬ್ಬ ವ್ಯಾಪಾರಿ ತನ್ನೆಲ್ಲ ಸರಕು-ಸಾಮಾನು ಹಿಡಿದುಕೊಂಡು ಸಂಗಡಿಗರನ್ನು ಕೂಡಿಕೊಂಡು ವ್ಯಾಪಾರಕ್ಕೆ ಹೋಗುತ್ತಿದ್ದನಂತೆ. ಸಂಜೆಯ ಹೊತ್ತು ನದಿ ದಾಟಬೇಕಾಗಿತ್ತು. ಎಲ್ಲರೂ ದೋಣಿಯಲ್ಲಿ ಕುಳಿತರು. ಈ ವ್ಯಾಪಾರಿಗೆ ಚುಕ್ಕಾಣಿ ಹಿಡಿದು ದೋಣಿ ನಡೆಸಲು ಗೊತ್ತಿತ್ತು. ಅದರಂತೆ ಅವನು ರಾತ್ರಿಯಿಡೀ ದೋಣಿ ನಡೆಸಿದ. ಬೆಳಗಾಯಿತು. ನೋಡಿದರೆ ಆ ದೋಣಿಗೆ ಅವರು ಎಲ್ಲಿಂದ ಹತ್ತಿದ್ದರೋ ಅದು ಅಲ್ಲೇ ಇತ್ತು. ದೋಣಿ ಚಲಿಸುತ್ತಲೇ ಇತ್ತಲ್ಲಾ ! ಆದರೆ ಹೀಗೇಕಾಯಿತು ಎಂದು ಎಲ್ಲರೂ ಆಶ್ಚರ್ಯಪಟ್ಟರು. ಮತ್ತೆ ನೋಡಿದರೆ ದೋಣಿಯೇನೋ ಚಲಿಸುತ್ತಿತ್ತು, ಆದರೆ ಅದನ್ನು ಒಂದು ಗೂಟಕ್ಕೆ ಹಗ್ಗದಿಂದ ಕಟ್ಟಿದ ಕಾರಣ ಅದು ಅಲ್ಲೇ ನೀರಿನಲ್ಲಿ ಸುತ್ತಾಡುತ್ತಿತ್ತು, ಮುಂದೆ ಹೋಗಲೇ ಇಲ್ಲ, ಈಗ ಆದದ್ದೇನೆಂದರೆ ರಾತ್ರಿಯಿಡೀ ಚುಕ್ಕಾಣಿ ಹಿಡಿದು ದೋಣಿ ನಡೆಸಿದ ಶ್ರಮ ಮಾತ್ರ.

ಪ್ರತಿದಿನ ಎಲ್ಲರೂ ದೇವಸ್ಥಾನಕ್ಕೆ ಹೋಗುತ್ತಾರೆ. ಅಷ್ಟದ್ರವ್ಯಗಳನ್ನು ಏರಿಸಿ ಪೂಜೆ ಮಾಡುತ್ತಾರೆ. ಆದರೆ ಪೂಜಾಫಲವೇನೂ ಸಿಗಲಿಲ್ಲ, ಹಾಗೆಯೇ ಜಗತ್ತಿಗೇ ಶಾಂತಿ ದೊರಕಲೆಂದು ಶಾಂತಿ ಪಾಠ ಮಾಡುತ್ತಾರೆ, ಆದರೆ ತಮಗೇ ಶಾಂತಿ ದೊರಕಲಿಲ್ಲ, ಹೀಗಿದ್ದರೆ ಈ ಪೂಜೆಯಿಂದಾಗಲೀ, ಶಾಂತಿ ಪಾಠದಿಂದಾಗಲೀ ಏನು ಪ್ರಯೋಜನ ? ನೀವೂ ಶಾಂತರಾಗಬೇಕು, ನಿಮಗೂ ಶಾಂತಿ ಸಿಗಬೇಕು. ಇದೇ ಪೂಜೆಯ ಧ್ಯೇಯ, ಇದೇ ಶಾಂತಿಧಾರೆಯ ಉದ್ದೇಶ.

-೧೬-

## ಪೂಜೆಯಲ್ಲಿ ಭಕ್ತಿಯೇ ಮುಖ್ಯ

ನಮ್ಮಲ್ಲಿ ಪಂಚಾಮೃತ ಅಭಿಷೇಕವಿದೆ. ಪಂಚಾಮೃತ ಎಂದರೆ ಏನು ? ನೀರು, ಹಾಲು, ಮೊಸರು, ತುಪ್ಪ, ಕಬ್ಬಿನರಸ, ಇವು ಸೇರಿ ಪಂಚಾಮೃತವಾಗುವುದು. ಮಿಥ್ಯಾದೃಷ್ಟಿಗಳಲ್ಲಿ ಅಭಿಷೇಕದ ಆರ್ಭಟ ಹೆಚ್ಚು. ಕಡ್ಲೆಬೇಳೆ, ಹೆಸರುಬೇಳೆ, ಬೇಳೆಕಾಳು, ಬಾಳೆಕಾಯಿ, ಸೌತೆಕಾಯಿ, ಹೀಗೆ ಏನೆಲ್ಲಾ ಸಿಗುತ್ತದೋ ಅವುಗಳನ್ನು ದೇವರ ಮೇಲ ಸುರಿದುಬಿಡುತ್ತಾರೆ. ಐದು ವಸ್ತುಗಳನ್ನು ಅಭಿಷೇಕ ಮಾಡುವ ಪರಿಪಾಠ ನಮ್ಮಲ್ಲಿದೆ. ಆದರೆ ಆರನೆಯ ಮತ್ತು ಏಳನೆಯ ವಸ್ತು ಯಾವುದು ? ಭಗವಂತನ ಜ್ಞಾನಾಭಿಷೇಕದಲ್ಲಿ ಏನು ಮಾಡಿದರೋ ಅದನ್ನೇ ಇಲ್ಲಿ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಪುರೋಹಿತರ ಪಟ್ಟಿಯಲ್ಲಿ ಪಾಯಸಕ್ಕೆ ಗಸಗಸೆಯೂ ಸೇರಿಬಿಡುತ್ತದೆ. ಅವರು ಬರೆಯದೇ ಇರುವುದು ಕೇವಲ ಎರಡು ವಸ್ತುಗಳನ್ನು, ಒಂದು ಟೀ ಇನ್ನೊಂದು ಕಾಫಿ. ರಾಜಾಸ್ಥಾನದಲ್ಲಿ ಹೊರಗೆ ಒಯ್ದು ಅನ್ನವನ್ನು ತಿನ್ನುವಂತಿಲ್ಲ, ಅದನ್ನು ನಾಯಿಗೆ ಹಾಕುವರು. ಕೆಲವರು ಅನ್ನ ರೊಟ್ಟಿ ಎಲ್ಲವನ್ನೂ ದೇವರಿಗೆ ಏರಿಸುವರು. ಏನೇನೋ ಕ್ರಿಯಾಕಾಂಡಗಳನ್ನು ಬೆಳೆಸಿ ಜನರನ್ನು ಮಿಥ್ಯಾತ್ವದ ಕಡೆಗೆ ಒಯ್ದಿದ್ದಾರೆ.

ಈ ಪಂಚಾಮೃತ ಅಭಿಷೇಕವನ್ನು ಮಾಡಿದರೂ ಕೂಡಾ ಬಿಂಬವನ್ನು ಸ್ವಚ್ಛವಾಗಿ ಒರೆಸಬೇಕು. ಇಲ್ಲದಿದ್ದರೆ ದೇವರ ಮೇಲ ಇರುವೆಗಳು ಏರುತ್ತವೆ. ಆದಿಪುರಾಣದಲ್ಲಿ ಪಂಪಮಹಾಕವಿ ಹೇಳುತ್ತಾನೆ -

ಪರಿಸಮಾಪ್ತಿ ಸವನಾಚಣ ಸ್ತವನ ಸಮಯಾನಂತರ ಮಿಂದ್ರಾಣಿ
ಭಗವದಂಗ ಸಂಗತ ಜಳಕಣಂಗಳಂ ದೇವಾಂಗ ವಸ್ತ್ರಂಗಳೊಳ್ ಒತ್ತಿ
ಕಳೆದು ಸಹಜ ಸುರಭಿ ಗಂಧ ಬಂಧುರ ಔದಾರಿಕ ವಪುವಂ ನಿಜ ದಿವ್ಯ
ಪರಿಮಳಾಮೋದಿತ ದಿಗಂಗನಾ ಮುಖಂಗಳಪ್ಪ ಸುಗಂಧ ದ್ರವ್ಯಗಳಂ ಪೂಸಿ

*-ಆದಿಪುರಾಣ, ೭ ನಂ. ೧೦*

ದೇವಸ್ಥಾನದಲ್ಲಿ ಬೆಲ್ಲದ ಸಾಮಾನು ಇಡುತ್ತಾರೆ. ಆಗ ಅಲ್ಲಿ ಇಲಿ, ನೊಣ, ಇರುವೆ ಇವೆಲ್ಲ ದಾಳಿಯಿಡುತ್ತವೆ. ಪವಿತ್ರವಾದ ದೇವಸ್ಥಾನದಲ್ಲಿ ನೀವು ಅಕ್ಕಿ ಏರಿಸುತ್ತೀರಿ. ಏರಿಸಿದರೂ ಅದನ್ನು ಬೇಗ ತೆಗೆಯುವ ವ್ಯವಸ್ಥೆಯಿಲ್ಲ. ಅಲ್ಲಿಗೆ ಗುಬ್ಬಿಗಳು ಬರುತ್ತವೆ. ಹೊಲಸು ಮಾಡುತ್ತವೆ. ಹಾಗೆಯೇ ಇಲಿಗಳೂ ಬರುತ್ತವೆ. ದೇವರ ತಲೆಯ ಮೇಲೆ ಓಡಾಡುತ್ತವೆ. ಪೂಜೆಯ ಜೀವಾಳವೇ ಭಕ್ತಿ, ಪಂಚಾಮೃತ ಬಿಟ್ಟು ಮತ್ತೇನನ್ನೂ ದೇವರಿಗೆ ಏರಿಸಬಾರದು, ಅರ್ಪಿಸಬಾರದು. ಜಿನಸೇನಾಚಾರ್ಯರು ಶಾಸ್ತ್ರದಲ್ಲಿ ಇದನ್ನೇ ಹೇಳಿರುವರು. ಪವಿತ್ರವಾದ ವಸ್ತುಗಳನ್ನು ಭಕ್ತಿಯಿಂದ ಏರಿಸಿದಾಗ ಮನುಷ್ಯರಿಗೆ ಶಾಂತಿ ಸಿಗುವುದು.



ಪೂಜ್ಯ ಯಾರು ? ವೀತರಾಗ ಭಗವಂತನೇ ಪೂಜ್ಯ. ಒಂದು ಪರಮಾಣು ಪ್ರಮಾಣದಷ್ಟು ರಾಗ ಇದ್ದವನೂ ನಮಗೆ ದೇವರಲ್ಲ, ನಮಗೆ ಮುಕ್ತಿ ಮಾರ್ಗ ತೋರಿಸಬಲ್ಲವರು ವೀತರಾಗ ಪರಮಾತ್ಮ ಮಾತ್ರ. ಪರಮಾತ್ಮನು ಸದಾ ಸಂತೃಪ್ತ. ನಾವು ನಮ್ಮ ಮನಸ್ಸನ್ನು ಏಕಾಗ್ರ ಮಾಡಿಕೊಳ್ಳುವುದಕ್ಕೋಸ್ಕರ ದೇವರಿಗೆ ಏನೇನೋ ಅರ್ಪಿಸುತ್ತೇವೆ. ಆದರೆ ಪರಮಾತ್ಮನಿಗೆ ಅವು ಯಾವುವೂ ಬೇಕಾಗಿಲ್ಲ.

ಒಮ್ಮೆ ಮೂಡುಬಿದಿರೆಯ ಸಹಸ್ರಕಂಬದ ಬಸದಿಯಲ್ಲಿ ನಾವು ಕುಳಿತಿದ್ದೆವು. ಆಗ ಉತ್ತರ ಪ್ರದೇಶದ ಶ್ರೀ ಪ್ರಕಾಶಕರು ಮದರಾಸಿನ ರಾಜ್ಯಪಾಲರಾಗಿದ್ದರು. ಅವರು ಮೂಡುಬಿದಿರೆಗೆ ಬಂದರು. ಆಗ ಅಲ್ಲಿ ಪಾರ್ಶ್ವಕೀರ್ತಿ ಭಟ್ಟಾರಕರಿದ್ದರು. ಸಮಾಜದವರು ರಾಜ್ಯಪಾಲರನ್ನು ಸ್ವಾಗತಿಸುವ ಏರ್ಪಾಡು ಮಾಡಿದ್ದರು. ಭಟ್ಟಾರಕರು ಎರಡು ತೆಂಗಿನ ಕಾಯಿ, ಸ್ವಲ್ಪ ಹೂ-ಹಣ್ಣುಗಳನ್ನು ತಟ್ಟೆಯಲ್ಲಿಟ್ಟು ರಾಜ್ಯಪಾಲರಿಗೆ ಕೊಟ್ಟು ''ಭಗವಂತ ಜಿನೇಂದ್ರ ತಮಗೆ ಒಳ್ಳೆಯದನ್ನು ಮಾಡಲಿ'' ಎಂದು ಹೇಳಿ ಆಶೀರ್ವಾದಿಸಿದರು. ಆಗ ರಾಜ್ಯಪಾಲರು ತೆಂಗಿನ ಕಾಯಿಯನ್ನು ಕೆಳಗಿಟ್ಟು ''ಸ್ವಾಮೀ, ಭಗವಂತನು ವೀತರಾಗಿ, ಅವನು ಯಾರಿಗೂ ಒಳ್ಳೆಯದನ್ನಾಗಲೀ-ಕೆಟ್ಟದನ್ನಾಗಲೀ ಮಾಡುವುದಿಲ್ಲವಲ್ಲ ? ಒಳ್ಳೆಯದು-ಕೆಟ್ಟದ್ದು ಮಾಡುವುದೆಲ್ಲಾ ಕರ್ತೃತ್ವವಾದಿಗಳ ಸಿದ್ಧಾಂತ. ಹೀಗಿರುವಾಗ ಭಗವಂತ ಒಳ್ಳೆಯದು ಮಾಡಲಿ ಎಂದು ತಾವು ಹೇಗೆ ಹೇಳಿದಿರಿ ? ಚಿತ್ತಶುದ್ಧಿಗಾಗಿ ಭಗವಂತನ ಭಜನೆ, ಪೂಜೆ ತಮ್ಮ ಧರ್ಮದಲ್ಲಿ ಏನು ಹೇಳಿದೆ ? ಭಗವಂತ ಹೇಗೆ ಒಳ್ಳೆಯದನ್ನು ಮಾಡುವನು ?'' ಎಂದು ಆಕ್ಷೇಪಿಸಿದರು. ಅಂದಿನಿಂದ ಆ ಭಟ್ಟಾರಕರು ತಮ್ಮ ಜೀವಮಾನದಲ್ಲೇ ಮತ್ತೆ ಯಾರಿಗೂ ಅಂತಹ ಆಶೀರ್ವಾದ ಮಾಡಲಿಲ್ಲ. ಶ್ರೀ ಪ್ರಕಾಶರು ಜೈನ ಧರ್ಮದ ಎಷ್ಟೋ ಪುಸ್ತಕಗಳಿಗೆ ಪ್ರಸ್ತಾವನೆ ಬರೆದವರು.

ನಮ್ಮ ದೇವರು ಒಳ್ಳೆಯದನ್ನು ಮಾಡಲಾರ, ಕೆಟ್ಟದ್ದನ್ನೂ ಮಾಡಲಾರ. ಯಾವನೇ ಒಬ್ಬ ಕೆಟ್ಟದಾರಿಯಲ್ಲಿ ನಡೆದು ದೇವರ ಭಕ್ತಿ ಮಾಡುತ್ತಾನೆಂದಿಟ್ಟುಕೊಳ್ಳಿ. ಅವನಿಗೆ ಭಗವಂತ ಹೇಗೆ ತಾನೆ ಒಳ್ಳೆಯದನ್ನು ಮಾಡುತ್ತಾನೆ ? ಇನ್ನೊಬ್ಬ ಅತ್ಯಂತ ಒಳ್ಳೆಯ ದಾರಿಯಲ್ಲಿ ನಡೆಯುತ್ತಾನೆ. ಆತನ ಆಚಾರ-ವಿಚಾರವೆಲ್ಲಾ ಬಹಳ ಚೆನ್ನಾಗಿದೆ. ಅಂಥವನನ್ನು ಕೆಡಿಸಲು ಹೇಗೆ ಸಾಧ್ಯ ? ಹಾಗಾದರೆ ಭಗವಂತನ ಭಕ್ತಿ ಪರಿಣಾಮ ಶುದ್ಧಿಗಾಗಿ, ಸಾಧನೆ ಮಾತ್ರ ಚಿತ್ತ ಶುದ್ಧಿಗಾಗಿ. ಇಂತಹ ನಮ್ಮ ಯಾವ ಶುದ್ಧ ಪರಂಪರೆಯಿದೆಯೋ ಅದನ್ನು ನಾವು ರಕ್ಷಿಸಿಕೊಳ್ಳಬೇಕು.

ಸಿಕ್ಖರದು 'ಗುರುಗ್ರಂಥ ಸಾಬ್' ಎಂಬುದಿದೆ. ಅದರಲ್ಲಿ 15ನೆಯ ಸೂತ್ರದಲ್ಲಿ 'ಶ್ರಾವಕರು ಸಿದ್ಧರನ್ನು ಪೂಜಿಸುತ್ತಾರೆ. ಸಿದ್ಧ ವೀತರಾಗನಾಗಿರುವನು, ಬೇರೆ ಯಾರನ್ನೂ ಅವರು ಪೂಜೆ ಮಾಡುವಹಾಗಿಲ್ಲ'' ಎಂದು ಹೇಳಿದೆ. ಆದರೆ ಇಲ್ಲಿ ನಮ್ಮ ಸಿದ್ಧ ಪರಮಾತ್ಮನು ಯಾರಿಗೂ ಏನನ್ನೂ ಕೊಡುವುದಿಲ್ಲ. ಸರಾಗ ದೇವತೆ ನಮ್ಮದಲ್ಲ. ಯಾವ ದೇವತೆಯ ಕೈಯಲ್ಲಿ ಶಸ್ತ್ರಾಸ್ತ್ರಗಳಿವೆಯೋ ಅವರು ತಾವೇ ಭಯಪಡುತ್ತಿರುವಾಗ, ಅಂಥವರು

ನಮಗೇನು ಅಭಯವನ್ನು ಕೊಡಬಲ್ಲರು ? ಹಿಂದಿನಿಂದ ಒಂದು ಪರಂಪರೆ ಬಂದಿದೆ. ಯಕ್ಷ-ಯಕ್ಷಿಯರು ಮಂದಿರ ರಕ್ಷಣೆ ಮಾಡುವವರು ಎಂಬ ದೃಷ್ಟಿಯಿಂದ ಅವರಿಗೆ ಮರ್ಯಾದೆ ಕೊಟ್ಟರೆ ಅಡ್ಡಿಯಿಲ್ಲ, ಈಗ ತೀರ್ಥಂಕರರನ್ನೂ ಮರೆತು ಯಕ್ಷ-ಯಕ್ಷಿಣಿಯರ ಪೂಜೆಯೇ ಹೆಚ್ಚು ಪ್ರಾಮುಖ್ಯ ಮಾಡಿಕೊಂಡಿದ್ದಾರೆ. ಆ ದೇವತೆ ನಮಗೇನು ಮಾಡುತ್ತದೆ? ಅದು ಮಕ್ಕಳನ್ನು ಕೊಡುತ್ತದೆ ಎಂದು ಪೂಜಿಸಬಾರದು. ಏನೋ ಭಗವಂತನ ಸೇವೆ ಮಾಡಿದ್ದಾರೆ, ಅವರಿಗೆ ಸನ್ಮಾನ ಕೊಡಬೇಕು. ಎಂಬ ದೃಷ್ಟಿಯಿದ್ದರೆ ಸಾಕು.

ವೀತರಾಗ ಭಗವಂತನ ಪೂಜೆ ಮಾಡಿ, ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಪ್ರಾಪ್ತಿ ಮಾಡಿಕೊಳ್ಳುವುದರಲ್ಲಿ ಮಹತ್ವವಿದೆ. ಆ ವೀತರಾಗ ಭಗವಂತ ಹೇಗಿದ್ದಾನೆ ? ಅವನ ಗುಣಗಳೇನು ? ಅಗ್ನಿಯ ಗುಣ ಸುಡುವಂತಹುದು. ಭಗವಂತನ ಹೆಸರಿನಿಂದ ನಮಗೆ ಮಹತ್ವವಲ್ಲ, ಅವನ ಗುಣ ಮಹತ್ವ. ಯಾವನಲ್ಲಿ ಸ್ವಲ್ಪವೂ ರಾಗವಿಲ್ಲವೋ ಅವನೇ ದೇವರು. ಪೂಜೆ ಮಾಡುವುದಕ್ಕಿಂತ ಮೊದಲು ಭಗವಂತನ ಲಕ್ಷಣ ತಿಳಿದುಕೊಳ್ಳಬೇಕು. ಲಕ್ಷಣ ತಿಳಿದುಕೊಳ್ಳದಿದ್ದರೆ ನಾವು ಅಜ್ಞಾನದಿಂದ ಚಮತ್ಕಾರಕ್ಕೆ ಮರುಳಾಗುತ್ತೇವೆ. ದೇವಾಗಮ ಸ್ತೋತ್ರದಲ್ಲಿ ಸಮಂತಭದ್ರರು ಈ ವಿಷಯವನ್ನು ಹೀಗೆ ಸ್ಪಷ್ಟಪಡಿಸಿರುವರು- “ಆಕಾಶಗಮನ ಮಾಡುತ್ತಾನೆ. ಎನ್ನುವುದರಿಂದ ಭಗವಂತನಾಗುವುದಾದರೆ ಕಾಗೆ, ಗುಬ್ಬಿಗಳೂ ಆ ಕೆಲಸ ಮಾಡುತ್ತವೆ. ಅವುಗಳನ್ನು ಪೂಜಿಸಬೇಕಲ್ಲ! ನಮ್ಮ ದೇವರ ಇದಿರು ದೇವತೆಗಳು ನಲವತ್ತಾರು ಚಾಮರಗಳನ್ನು ಬೀಸುವರು, ನಮ್ಮ ದೇವರು ಸಾಮಾನ್ಯರಲ್ಲ ಎನ್ನಬಹುದು. ಹಾಗದರೆ ಅರಸನಿಗೂ ಚಾಮರ ಬೀಸುವರಲ್ಲ! ಈ ಬಹಿರಂಗ ಚಮತ್ಕಾರಗಳಿಂದ ಯಾರೂ ದೇವರಾಗಲಾರರು. ನಮ್ಮ ದೇವರು “ವೀತರಾಗ ಭಗವಾನ್”

ಇಂದ್ರಜಾಲ ಮಾಡುವವರು ಏನೇನೋ ಸೃಷ್ಟಿ ಮಾಡುವರು. ಜೈನ ಧರ್ಮದಲ್ಲಿ ಇಂಥ ಚಮತ್ಕಾರಗಳಿಗೆ ಯಾವ ಮಹತ್ವವೂ ಇಲ್ಲ, ಇಲ್ಲಿ ಪರಿಣಾಮ ಶುದ್ಧಿಗೆ ಮಾತ್ರ ಮಹತ್ವವಿದೆ. ಧರ್ಮಧ್ಯಾನಕ್ಕೆ ಮಹತ್ವವಿದೆ. ನಮ್ಮಲ್ಲಿ ಬರುವ ರೇವತಿ ಮಹಾರಾಣಿಯ ಕಥೆಯನ್ನು ಜ್ಞಾಪಿಸಿಕೊಳ್ಳಿ. ಆಕೆ ಯಾವ ಚಮತ್ಕಾರಕ್ಕೂ ಮರುಳಾಗಲಿಲ್ಲ, ತೀರ್ಥಂಕರರ ಸಮವಸರಣದಂಥ ರಚನೆ ಮಾಡಿ ತೋರಿಸಿದಾಗಲೂ ಚವ್ವೀಸ ತೀರ್ಥಂಕರರು ಆಗಿ ಹೋದರು. ಆಗ “ಇಪ್ಪತ್ತೈದನೆಯ ತೀರ್ಥಂಕರರಿಗೆ ಅವಕಾಶವೆಲ್ಲಿ?” ಎಂದು ಕೇಳಿದಳೇ ಹೊರತು ಚಮತ್ಕಾರವನ್ನು ಒಪ್ಪಲಿಲ್ಲ, ಅವಳಲ್ಲಿ ಸಮ್ಯಕ್ತ್ವ ಸದೃಢವಾಗಿತ್ತು. ನಿಮಗೆ ನಾವೇನಾದರೂ ಸ್ವಲ್ಪ ಚಮತ್ಕಾರ ತೋರಿಸಿದರೆ ನೀವೆಲ್ಲ ನಮ್ಮನ್ನೂ, ದೇವರನ್ನೂ, ಭಟ್ಟಾರಕರನ್ನೂ ಬಿಟ್ಟು ಹೋಗುತ್ತೀರಿ. ಒಬ್ಬ ಮುತ್ತು ಮಾಡುತ್ತಾನಂತೆ. ಹಾಗೆ ಮಾಡುವುದಾದರೆ ಸಮುದ್ರದಲ್ಲಿ ಮುತ್ತು ಏಕಿರಬೇಕು ? ಕೆಲವರು ದುಡ್ಡು ಮಾಡಿ ತೋರಿಸುತ್ತಾರೆ. ಈ ರೀತಿಯ ಠಕ್ಕು ಮಾಡುವವರಿಗೆ ನಮ್ಮ ಧರ್ಮದಲ್ಲಿ ಅವಕಾಶವಿಲ್ಲ, ಇಂಥ ಮಾಯಾಚಾರ ಮಾಡುವವರು ಬೇಕಾದಷ್ಟು ಮಂದಿ ಇದ್ದಾರೆ. ಅದು ನಮಗೆ ಬೇಡ.

ಇನ್ನು ಗುರುಗಳ ಬಗ್ಗೆ ಹೇಳುವುದುಂಟು. ಗುರುವಿಗೂ ಹೆಂಡಿರು, ಶಿಷ್ಯನಿಗೂ



ಹೆಂಡಿರು. ಗುರುವಿಗೂ ಮಕ್ಕಳು, ಶಿಷ್ಯನಿಗೂ ಮಕ್ಕಳು. ಹೀಗೆ ಗುರು ಶಿಷ್ಯರು ಸರಿತೂಕವಾದರೆ ಗುರು ಯಾರು ? ಶಿಷ್ಯ ಯಾರು ? ನಮ್ಮಲ್ಲಿ ಹಾಗಲ್ಲ. ನಮ್ಮಲ್ಲಿ ‘ಗುರು’ ಎಂದರೆ ಇಪ್ಪತ್ತೆಂಟು ಗುಣಗಳಿರುವಾತ. ಪಂಚಮಹಾವ್ರತಗಳು, ಪಂಚಸಮಿತಿಗಳು, ಷಡಾವಶ್ಯಕಗಳು, ಪಂಚೇಂದ್ರಿಯ ನಿಗ್ರಹ, ಕೇಶೋತ್ಪಾಟನ-ಅಚೇಲತ್ವ-ಅಸ್ನಾನ, ಅದಂತದಾವನ, ಸ್ಥಿತಿಭೋಜನ-ಏಕಭೋಜನ, ಭೂಶಯನ(5+5+6+7=28). ಹೀಗೆ ಇಪ್ಪತ್ತೆಂಟು ಗುಣಗಳಿರಬೇಕು. ಕೃತ್ರಿಮತೆಗೆ ಜೈನಧರ್ಮದಲ್ಲಿ ಏನೇನೂ ಸ್ಥಾನವಿಲ್ಲ, ನೀವು ಬಟ್ಟೆ, ಗಡಿಗೆ, ಅಕ್ಕಿ, ತೆಂಗಿನಕಾಯಿ, ಯಾವುದನ್ನೇ ಖರೀದಿ ಮಾಡುವಾಗಲೂ ಅದು ಚೆನ್ನಾಗಿದೆಯೇ? ಎಂದು ಪರೀಕ್ಷಿಸಿ ತೆಗೆದುಕೊಳ್ಳುವುದಿಲ್ಲವೇ? ಹಾಗೆಯೇ ನಮ್ಮ ಭಗವಂತ ವೀತರಾಗಿ, ಗುರು ಯಾರೆಂದರೆ ಅವನೇ. ಅವನಲ್ಲಿ ಏನೂ ಪರಿಗ್ರಹ ಇರಬಾರದು.

ಶಾಸ್ತ್ರವು ಹೇಗಿರಬೇಕೆಂದರೆ- ಅದರಲ್ಲಿ ಸ್ವಲ್ಪವೂ ಹಿಂಸೆಗೆ ಅವಕಾಶವಿರಬಾರದು. ಪೂರ್ಣವಾಗಿ ಅಹಿಂಸಾ ವ್ಯಾಖ್ಯಾನವೇ ಶಾಸ್ತ್ರ ಸರ್ವಜ್ಞ ಕವಿಯು ಜೈನ ಧರ್ಮವನ್ನು ಬಹಳವಾಗಿ ಕೊಂಡಾಡಿದ್ದಾನೆ. ಅದು ಹೀಗಿದೆ- ಕೊಲುವ ಧರ್ಮವನೊಯ್ದು ಒಲೆಯೊಳಗಿಕ್ಕು, ಕೊಲಬಾರದೆಂಬ ಜೈನ ಧರ್ಮವನೆನ್ನ ತಲೆಯ ಮೇಲಿರಿಸು ಸರ್ವಜ್ಞ” ಪಾಪಕ್ಕೆ ಪ್ರಚೋದನೆ ಕೊಡುವ ಶಾಸ್ತ್ರವನ್ನು ಒಲೆಯಲ್ಲಿ ಹಾಕಿಬಿಡಿ. ಅಹಿಂಸಾಧರ್ಮ, ವೀತರಾಗ ಭಗವಂತ ಮತ್ತು ಗುರು, ಈ ಮೂರನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು.

ಪೂಜ ಎಂದರೆ ವಿಧಿ. ಪೂಜಕ ಎಂದರೆ ಭವ್ಯ ಜೀವನು. ಶ್ರಾವಕನೇ ಪೂಜಕ. ಪೂಜೆಗೆ ಶಾಸ್ತ್ರದಲ್ಲಿ ಹೇಳಿದಂತೆ ಅಷ್ಟದ್ರವ್ಯ, ಪಂಚಾಮೃತ ಇಷ್ಟೇ ಸಾಕು. ಪೂಜೆ ಮಾಡುವಾಗ ಪರಮಾತ್ಮನ ಗುಣಗಳ ಕಡೆಗೆ ನಮ್ಮ ಗಮನವಿರಬೇಕು. ಮಂತ್ರಗಳ ಜೊತೆಯಲ್ಲಿ ಪೂಜೆ ಮಾಡುವಾಗ ನಮ್ಮ ಮನಸ್ಸು ಶುದ್ಧವಾಗಿರಬೇಕು. ದೇವರ ತಲೆಯ ಮೇಲೆ ಏಕೆ ಹೂವು ? ಪಾದ ಪೂಜೆ ಮಾಡುತ್ತಾರೆ. ಶಾಸ್ತ್ರದಲ್ಲಿರುವುದು ಪಾದ ಪೂಜೆ ಮಾತ್ರ. ಪರಮಾಣು ಮಾತ್ರವೂ ಪರಿಗ್ರಹವಿಲ್ಲದ ಭಗವಂತನ ಮೇಲೆ ನಾನಾ ವಸ್ತುಗಳನ್ನಿಟ್ಟು ಅವನನ್ನು ಪರಿಗ್ರಹಿಯನ್ನಾಗಿ ಮಾಡುತ್ತಿರುವೆವು. ದೇವರ ಪೂಜಾ ವಿಧಿಯನ್ನು ತಿಳಿದುಕೊಂಡು ನಾವು ಪೂಜೆ ಮಾಡಬೇಕು.

ಪೂಜೆಯ ಫಲ ಮುಕ್ತಿ , ಪೂಜೆಯನ್ನು ಮುಕ್ತಿ ದೊರಕಿಸಿಕೊಳ್ಳಲು ಮಾಡಬೇಕು. ಅಷ್ಟಕರ್ಮಗಳ ನಾಶಕ್ಕಾಗಿ ಮಾಡಬೇಕು. ಕ್ಷುಲ್ಲಕರಿಗೆ ನಮಸ್ಕಾರ ಮಾಡುವಾಗ ಇಚ್ಛಾಮಿ ಎನ್ನಬೇಕು. ನಾನು ನಿಮ್ಮಂತೆ ಆಗಬೇಕು ಎಂಬುದು ಇದರ ಅರ್ಥ. ಸಚಿತ್ತ ಪದಾರ್ಥಗಳನ್ನು ದೇವರಿಗೆ ಏರಿಸಬಾರದು. ಹೂವನ್ನು ಕೀಳುವಾಗ ಮರಕ್ಕೆ ನೋವಾಗುವುದು. ಈ ಬಗ್ಗೆ ಈಚೆಗೆ ಪ್ರಯೋಗ ನಡೆದಿದೆ. ಒಂದು ಮರಕ್ಕೆ ಮೂರು ಬಣ್ಣದ ಬಲ್ಬ್ ಹಾಕಿದ್ದ ಬಿಳಿ, ಹಸಿರು ಮತ್ತು ಕೆಂಪು. ಯಜಮಾನನಿಂದ ಬೈಸಿಕೊಂಡ ಆಳು, ಅಳುತ್ತಾ ಅದಕ್ಕೆ ನೀರು ಹಾಕಿದಾಗ ಬಿಳಿ ದೀಪ ಹತ್ತಿಕೊಳ್ಳುತ್ತಿತ್ತು. ಮರ ಗಿಡಗಳಿಗೆ ಸುಖ-ದುಃಖದ ಅರಿವಿದೆಯೆಂದು ಇದರಿಂದ ತಿಳಿಯುವುದಿಲ್ಲವೇ? ಪೂಜೆಯಲ್ಲಿ ನಮ್ಮ ಭಕ್ತಿಯೇ ಮಹತ್ವದ್ದು.

---

-೧೭-

## ಹಂಸ-ದೀಪ

ಆಚಾರ್ಯಶ್ರೀ ವಿದ್ಯಾನಂದಜೀ ಕೃತ

(ರಚನಾ ಕಾಲ ಸನ್ 1965ರ ಆಸುಪಾಸಿನಲ್ಲಿ)

ಮಿಟ್ಟೀಕೇ ನೌಮಹಲೇ ಬೈಠಾ ಹಂಸ ಜ್ಯೋತಿ ಫೈಲಾಯೇ,
''ಹಂ ಸೋಽಹಂ, ಸೋಽಹಂ, ಸೋಽಹಂ'' ಕಾ ಅಮೃತ್ ನಾದ್ ಸುನಾಯೇ ।
ತಿಮಿರ್ ಕಹಾಂ, ಮೈಭೀ ತೋ ದೇಖೂಂ, ದೀಪಕ್ ಜಲ್‌ತಾ ಜಾಯೇ,
ಪ್ರಕಾಶ್ ಕಾ ಪ್ರಹರೀ ಘರ್-ಆಂಗನ್ ಘೂಮೇ, ಅಲಖ್ ಜಗಾಯೇ ॥೧॥

ತಿಲ್-ತಿಲ್ ಜಲ್‌ತಾ ತೈಲ್, ತೂಲ್‌ಪರ್ ಮೋರ್ ಮಚಲತೇ ಆತೇ ।
ಕರ್ಮಬಂಧ್ ಕೇ ಅನಾದಿ ಕಶ್ಮಲ್ ಅಪನಾ ರೂಪ್ ದಿಖಾತೇ ।
ದೇ ಅಂಚಲ್ ಕೋ ಓಟ್ ಅಚಂಚಲ್ ಕೌನ್‌ಕರೇ ಭಂಗುರ್ ಕೋ ।
ಕೌನ್ ರೋಕ್‌ಲೇಗಾ, ಶರಾಬ್ ಸೇ ಉಡ್‌ತೇ ಹಂಸಾವರ್ ಕೋ ।
ತೈಲ್‌ತೂಲ್ ಕಾ ಠಾಠ್ ಅಕಿಂಚನ್ ಸಪನೋಂ ಮೇ ಭರ್‌ಮಾಯೇ ।
''ಹಂ ಸೋಽಹಂ, ಸೋಽಹಂ, ಸೋಽಹಂ'' ಕಾ ಅಮೃತ್ ನಾದ್ ಸುನಾಯೇ ॥೨

ಯಹ್ ವಿಭಾವರೀ, ಇಂದು ವಿಭಾಪರ್ ಲಗಾ ಆವರಣ್ ತಮ್ ಕಾ ।
ಆಜ್ ಕಸೌಟೀ ಪರ್ ಹೈ ವಿಕ್ರಮ್ ಕನಕ-ದೀಪ್ ಲಘುತಮ್ ಕಾ ।
ತತ್ಪರ್ ಹೋಕರ ಪ್ರಾಣ್ ಅಡೀ ಹೈಂ ದುರ್ಜಯ್ ಸಮರ್-ಸ್ಥಲ್ ಮೇ,
ನಹಾ ಉಠೇ ಹೈಂ ವೀರ್ ಕೇಸರೀ ಆಭಾ ಕೀ ಹಿಂಗುಲ್ ಮೇ ।
ಸಾರೀ ರಾತ್ ರತ್‌ಜಗಾ ಕೋಇಯೀ ಆಜ್ ನ ಹಮೇ ಬುಝಾಯೇ ।
''ಹಂ ಸೋಽಹಂ, ಸೋಽಹಂ, ಸೋಽಹಂ'' ಕಾ ಅಮೃತ್ ನಾದ್ ಸುನಾಯೇ ॥೩॥

ಅಂಜನ್-ಕೂಟ್ ಟೂಟ್‌ತ್ ಜಾತೇ ಏಕ್-ಏಕ್ ಚಿತವನ್ ಪರ್ ।
ಗೌರೀ ಕೇ ದುರ್ಲಲಿತ್ ಲಾಸ್ಯ ಸಾಕಾರ್ ಹುಏ ಕಂಪನ್ ಪರ್ ।
ಆಜ್ ಚುನೌತೀ ಅಂಧ್ ದನುಜ್ ಕೀ ಶಲ್ಯ ಶಲಾಕಾವೋಂ ಕೋ ।
ಆಮಂತ್ರಣ್ ಭೇಜಾ ಲಘು-ಲಘು ದೋಷೋಂ ನೇ ರಾಕಾಓಂ ಕೋ ।
ತಿಮಿರ್-ಕೃಷ್ಣ ಕೇ ಸಂಗ ಸಲೋನೀ ರಾಧಾ ರಾಸ್ ರಚಾಯೇ,
''ಹಂ ಸೋಽಹಂ, ಸೋಽಹಂ, ಸೋಽಹಂ'' ಕಾ ಅಮೃತ್ ನಾದ್ ಸುನಾಯೇ ॥೪॥



**ಕನ್ನಡ ಭಾವಾರ್ಥ :-**

॥೧॥ ಮಿಟ್ಟೀ -ಶರೀರದ ಒಂಬತ್ತು ತರಂಗದಂತಿರುವ ರಾಜ ಮಹಲಿನಲ್ಲಿ ಕುಳಿತು ಕೊಂಡು ನೀರನ್ನೂ ಹಾಲನ್ನೂ ಬೇರೆ ಬೇರೆ ಮಾಡುವಷ್ಟು ವಿವೇಕವುಳ್ಳ ಈ ರಾಜ ಹಂಸವು ಅರ್ಥಾತ್ ಶುದ್ಧ ಬುದ್ಧ ಪ್ರಬುದ್ಧ ಮತ್ತು ಚೈತನ್ಯ ಸ್ವರೂಪನಾದ ಆತ್ಮನು ತನ್ನ ಜ್ಯೋತಿರ್ಮಯ ಜ್ಞಾನ ಪುಂಜದಿಂದ ನಾಲ್ಕೂ ದಿಕ್ಕುಗಳನ್ನು ಬೆಳಗಿಸುತ್ತಿದ್ದಾನೆ ಮತ್ತು ''ನಾನು ಅವನೇ ಆಗಿದ್ದೇನೆ'' ಈ ಸತ್ಯದ ಅಮೃತನಾದ ಕೇಳಿಬರುತ್ತಿದೆ. ''ಎಲ್ಲಿದೆ ಆ ಅಜ್ಞಾನರೂಪೀ ಅಂಧಕಾರ? ನಾನಾದರೋ ಅದನ್ನು ನೋಡಿಬಿಡುತ್ತೇನೆ'' ಹೀಗೆ ಹೇಳುತ್ತಾ ಇರುವ ಜ್ಞಾನರೂಪೀ ಪ್ರಕಾಶದ ಜಾಗೃತ ಪ್ರಹರಿಯು ಪ್ರಜ್ವಲಿತಗೊಂಡು ಆ ಬೆಳಕು ಮನೆ-ಮನೆಗಳಲ್ಲಿ, ಅಂಗಳ-ಅಂಗಳಗಳಲ್ಲಿ ಸುತ್ತುತ್ತಾ-ಸುತ್ತುತ್ತಾ ದೇಹದ ಮತ್ತು ಆತ್ಮನ ಭಿನ್ನತಾರೂಪೀ ನಿಶ್ಚಯಾತ್ಮಕ ಜ್ಞಾನ(ಭೇದಜ್ಞಾನ)ದ ಅದೃಶ್ಯವನ್ನು ಎಚ್ಚರಿಸುತ್ತದೆ.

॥೨॥ ಯಾವ ರೀತಿಯಾಗಿ ಪ್ರಜ್ವಲಿತಗೊಂಡ ಬೆಳಕು ತನ್ನ ಪ್ರಕಾಶದಿಂದ ಪರ ಪದಾರ್ಥವನ್ನು ಬೆಳಗಿಸುತ್ತದೋ, ಆದರೆ ಅದರಲ್ಲಿರುವ ಸ್ವಯಂ ಎಣ್ಣೆಯು ಸ್ವಲ್ಪ ಸ್ವಲ್ಪವಾಗಿ ಹೇಗೆ ಉರಿದು ಹೋಗುತ್ತದೋ, ಅದೇ ಪ್ರಕಾರ ಸಾಂಸಾರಿಕ ವಿಷಯಭೋಗಗಳ ಸಾರಹೀನತೆಯನ್ನು ತಿಳಿಯದೆಯೇ ಈ ಮಯೂರ ಅರ್ಥಾತ್ ಕರ್ಮಲಿಪ್ತ ಜೀವನು ಭ್ರಮವಶನಾಗಿ ತನ್ನನ್ನು ಸುಖಿಯೆಂದು ತಿಳಿದುಕೊಂಡು ಅದರಲ್ಲಿಯೇ ಪ್ರಮುದಿತನಾಗಿರುತ್ತಾನೆ ಮತ್ತು ಇದರಿಂದಾಗಿ ಅಷ್ಟಕರ್ಮವು ಅನಾದಿ ಕಾಲದಿಂದಲೇ ಅವನ ಚಿತ್ರ-ವಿಚಿತ್ರ ಮಲಿನ ರೂಪದ (ಅರ್ಥಾತ್ ೮೪ ಲಕ್ಷ ಯೋನಿಗಳಲ್ಲಿರುವ ನಾನಾರೂಪಗಳ) ಪ್ರದರ್ಶನ ಮಾಡಿಸುತ್ತಿರುತ್ತದೆ.

ಆದರೆ ಕ್ಷಣಭಂಗುರವಾದ ಈ ಶರೀರಕ್ಕೆ ಯಾವುದಾದರೂ ಸುರಕ್ಷೆ ಕೊಡಲು ಸಾಧ್ಯವೇ? ಮಣ್ಣಿನ ಸಕೋರೇ ಅರ್ಥಾತ್ ಶರೀರದಿಂದ ಹಾರಿಹೋಗುವ ಶ್ರೇಷ್ಠ ರಾಜಹಂಸ ಅರ್ಥಾತ್ ಶುದ್ಧಾತ್ಮನನ್ನು ಇಂದಿನವರೆಗೆ ಯಾರಾದರೂ ತಡೆದು ನಿಲ್ಲಿಸಲು ಸಾಧ್ಯವಾಗಿದೆಯೇ ? ಎಲ್ಲಿಯವರೆಗೆ ಅದರಲ್ಲಿ ಆತ್ಮನ ನಿವಾಸವಿರುತ್ತದೋ, ಅಲ್ಲಿಯವರೆಗೆ ಮಾತ್ರ ಅದು ಪುದ್ಗಲ, ಜಡ ಮತ್ತು ಒಡೆದ ಮಣ್ಣಿನ ಮಡಕೆಯಂತೆ ನಿರರ್ಥಕ. ಆಗ ಎಣ್ಣೆ ಮತ್ತು ಬತ್ತಿಯ ಆಡಂಬರವೂ ನಶ್ವರ, ಸಾರಹೀನ ಮತ್ತು ನಿರರ್ಥಕ. ಹೀಗಿದ್ದರೂ ಅಜ್ಞಾನೀ ಜೀವನು ಭ್ರಮವಶನಾಗಿ ಅದರಲ್ಲಿ ಲಿಪ್ತನಾಗುತ್ತಾ ಸುಖಾನುಭವ ಪಡೆಯುತ್ತಿರುತ್ತಾನೆ.

॥೩॥ ಚಂದ್ರನ ಪ್ರಕಾಶ ಅರ್ಥಾತ್ ಆತ್ಮನ ಮೇಲೆ ರಾತ್ರಿ ಮತ್ತು ಅಂಧಕಾರ ಅರ್ಥಾತ್ ಮಿಥ್ಯಾತ್ವ ಮತ್ತು ಅಜ್ಞಾನದ ಆವರಣ ಹತ್ತಿಕೊಂಡಿದೆ. ಆದರೆ ಈಗ ಸ್ವರ್ಣ

ದ್ವೀಪಕ್ಕೆ ಸಮಾನವಾದ ಆತ್ಮನು ತನ್ನ ಜ್ಞಾನಾವರಣೀಯ ಕರ್ಮವನ್ನು ನಷ್ಟಗೊಳಿಸುವುದಕ್ಕಾಗಿ ತಪರೂಪೀ ಪರಾಕ್ರಮವನ್ನು ಜ್ಞಾನರೂಪೀ ವಿವೇಕದ ಒರೆಗಲ್ಲಿಗೆ ಹಚ್ಚಿದ್ದಾನೆ. ಮತ್ತು ಈಗ ಅವನು ಸಂಪೂರ್ಣವಾಗಿ ಈ ಸಂಸಾರರೂಪೀ ದುರ್ಜೇಯ ರಣಭೂಮಿಯಲ್ಲಿ ತನ್ನ ಕರ್ಮರೂಪೀ (ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ) ಶತ್ರುಗಳ ಮೇಲೆ ವಿಜಯ ಪ್ರಾಪ್ತಿ ಮಾಡುವುದಕ್ಕಾಗಿ ಕಟಿಬದ್ಧನಾಗಿರುವನು.

ಕರ್ಮಗಳ ಮೇಲೆ ವಿಜಯ ಪ್ರಾಪ್ತಿಮಾಡಿಕೊಳ್ಳುವಲ್ಲಿ ಸಕ್ಷಮ ಆತ್ಮನು ತನ್ನ ಉಪಕ್ರಮದಿಂದ ವೀರ ಕೇಸರಿಯಂತೆ ಕರ್ಮನಿರ್ಜರೆಯಿಂದ ಉತ್ಪನ್ನವಾದ ಸೌಂದರ್ಯರೂಪೀ ಸಿಂಧೂರೀ ಬಣ್ಣದಲ್ಲಿ ಮೇಲೇರಿ ಬಂದಿದ್ದಾನೆ. ವಿಜಯದ ಆ ಉಲ್ಲಾಸವೂ ಉಳಿದಿಲ್ಲ, ನಿಷ್ಕಲಂಕ ಆತ್ಮನ ಈ ರತಜಗೇ ಅರ್ಥಾತ್ ಅಹರ್ನಿಶಿ ಆಧ್ಯಾತ್ಮಿಕ ಜಾಗರಣದ ಪ್ರೋನ್ನತ ದೆಸೆಯಲ್ಲಿ ಈಗ ರಾಗ-ದ್ವೇಷ, ಕಾಮ-ಕ್ರೋಧಾದಿ ಯಾವುದೇ ರೀತಿಯ ವ್ಯವಧಾನವನ್ನು ಹಾಕಲಾಗುವುದಿಲ್ಲ.

॥೪॥ ನಾಲ್ಕು ಘಾತೀಯ ಕರ್ಮಗಳು ನಷ್ಟವಾದಾಗ ಈ ಶುದ್ಧ ಆತ್ಮನು ಸಾಧನೆಯ ಒಂದೊಂದೇ ಮೆಟ್ಟಿಲಿನ ಮೇಲೆ ಹೇಗೆ ಅಗ್ರೇಸರನಾಗಿ ಏರುತ್ತಾ ಹೋಗುತ್ತಾನೋ, ಹಾಗೆಯೇ ಅಘಾತಿಯಾ ಕರ್ಮರೂಪೀ ಸುದೃಢ ಅಂಜನಕೂಟ (ಶಿಖರ)ವೂ ಕ್ರಮಶಃ ದಡಬಡನೆ ಬಿದ್ದು ಹೋಗುತ್ತದೆ.

ಯಾವ ರೀತಿಯಾಗಿ ಅತ್ಯಧಿಕ ಮುದ್ದಾಟದಿಂದ ಬೆಳೆದ ಭಾಮಿನಿಯ ನೃತ್ಯದ ಹಾವ-ಭಾವವು ತಾಳದ ಒಂದೊಂದು ಕಂಪನದ ಮೇಲೆ ಸಾಕಾರಗೊಂಡು ಎದ್ದು ಬರುತ್ತದೋ ಅಂತೆಯೇ ಸಾಧಕನ ಆತ್ಮ ಸಾಧನೆಯಿಂದ ಅವನ ಕರ್ಮ ಸರಪಣಿಗಳು ಒಂದೊಂದಾಗಿ ಕಳಚಿ ಹೋಗುತ್ತವೆ. ತನ್ನ ತಪಸ್ಸು ಮತ್ತು ಗಹನ ಸಾಧನೆಯಿಂದ ಆತ್ಮನು ಅಜ್ಞಾನ-ಅಂಧಕಾರರೂಪೀ ದಾನವನ ಶಲ್ಯರೂಪೀ ಶಲಾಕೆಗಳನ್ನು ಗಮನಿಸಿದ್ದಾನೆ ಮತ್ತು ಲಲಕಾರದಿಂದ ಹೀಗೆ ಹೇಳಿದ್ದಾನೆ- ''ಈಗ ನಾನು ನನ್ನ ಪ್ರಕಾಶ(ಜ್ಞಾನ)ದ ಮುಂದೆ ನಿನ್ನನ್ನು ಪರಾಜಿತಗೊಳಿಸಿಯೇ ತೀರುವೆನು.'' ತಿಮಿರರೂಪೀ ಅಜ್ಞಾನ ಮತ್ತು ಕೃಷ್ಣ ಅರ್ಥಾತ್ ಕಲುಷಿತ ಶರೀರದೊಂದಿಗೆ ಲಾವಣ್ಯಮಯೀ ರಾಧಾ ಅರ್ಥಾತ್ ಈ ಚೈತನ್ಯಾತ್ಮನು ಇಷ್ಟರ ತನಕ ಭ್ರಮವಶನಾಗಿ ಹೇಗೆ ರಾಸಲೀಲೆಯನ್ನು ರಚಿಸುತ್ತಾ ಬಂದಿದ್ದಾನೆ? ಅರ್ಥಾತ್ ಪೌದ್ಗಲಿಕ ಜಡ ಶರೀರದಲ್ಲಿ ಕರ್ಮಲಿಪ್ತ ಆತ್ಮನು ಹೇಗೆ ಆನಂದ ಹೊಂದುತ್ತಾ ಬಂದಿದ್ದಾನೆ ? ಇದು ಆಶ್ಚರ್ಯದ ವಿಷಯ.